ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

30 ಏಪ್ರಿಲ್, 2014 ಪುಟ 20 ರೂ. 15/-



ಕಣ್ಣು ಮುಚ್ಚಿದ ಮೂರ್ತಿ


ಲಂಕೇಶ್ ಸಮೀಕ್ಷೆ







15-17 8-10 2-3




ಮೋದಿ ಯಾಕೆ ಪ್ರಧಾನಿ ಆಗುವುದಿಲ್ಲ



28 ಕ್ಷೇತ್ರಗಳ ವಿಶ್ಲೇಷಣೆ

ಅಂಚಿನಿಂದ...



ಡಾ.ವಾಸು ಎಚ್.ವಿ.

ಮಂಡ್ಯ ಲೋಕಸಭಾ ಕ್ಷೇತ್ರದ ಅಸಲೀ ಸಮಸ್ಯೆಗಳ

ಕಳೆದ ವಾರ ಈ ಅಂಕಣದಲ್ಲಿ ವಿಶ್ವವಿದ್ಯಾಲಯದ ಪ್ರೊಫೆಸರ್ ಒಬ್ಬರು 'ನಿಜವಾದ ಅಭಿವೃದ್ಧಿ'ಯ ಕುರಿತು ಬರೆದಿದ್ದ ಪುಸ್ತಕದ ಕುರಿತು ಪ್ರಸ್ತಾಪಿಸಲಾಗಿತ್ತು. ಮೇಲ್ನೋಟಕ್ಕೆ ಎಲ್ಲಾ ಪ್ರಣಾಳಿಕೆಗಳೂ ಜನರ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿಯೇ ಬರೆಯಲ್ಪಟ್ಟಿರುವಂತೆ ತೋರುತ್ತದೆ. ಆದರೆ, ಅವು ಜನರನ್ನು ಮೆಚ್ಚಿಸಲು ಹೊರಟಿರುವ, ಸಮಸ್ಯೆಗಳನ್ನು 'ಮೇಲು ಮೇಲೆ' ಮಾತ್ರ ನೋಡಿ ಬರೆಯಲಾಗಿರುವ ಪ್ರಣಾಳಿಕೆಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ರಾಜ್ಯದ ಒಂದು ಲೋಕಸಭಾ ಕ್ಷೇತ್ರದಲ್ಲಿ ಕರ್ನಾಟಕ ಜನಶಕ್ತಿ ಸಂಘಟನೆಯು ಆ ಕ್ಷೇತ್ರದ ಅಸಲೀ ಸಮಸ್ಯೆಗಳನ್ನು ಮುಂದಿರಿಸುವ ಪ್ರಯತ್ನ ಮಾಡಿತು. ಜನಶಕ್ತಿಯ ಜಿಲ್ಲಾಧ್ಯಕ್ಷರಾದ ಬಿ.ಕೃಷ್ಣಪ್ರಕಾಶ್‌ರ ಜೊತೆ ಈ ಅಂಕಣಕಾರನೂ ಸೇರಿ ಬರೆದಿದ್ದ ಆ ಪ್ರಬಂಧವನ್ನು ಇಲ್ಲಿ 'ಲಂಕೇಶ್' ಓದುಗರ ಗಮನಕ್ಕಾಗಿ ಮುಂದಿರಿಸಲಾಗುತ್ತಿದೆ.

ಇಡೀ ದೇಶ ಎದುರಿಸುತ್ತಿರುವ ಸಮಸ್ಯೆಗಳನ್ನು ಮಂಡ್ಯ ಜಿಲ್ಲೆಯೂ ಎದುರಿಸುತ್ತಿದೆ. ಅದರಲ್ಲೂ ದೇಶಾದ್ಯಂತ ಇರುವ ಕೃಷಿ ಬಿಕ್ಕಟ್ಟಿನ ಸಮಸ್ಯೆ ಮಂಡ್ಯ ಜಿಲ್ಲೆಯಲ್ಲೂ ಇದೆ. ಆ ದೃಷ್ಟಿಯಲ್ಲಿ ಈ ಜಿಲ್ಲೆ ಮಾತ್ರ ಪ್ರತ್ಯೇಕ ದ್ವೀಪವಲ್ಲ. ಆದರೆ ಈ ಜಿಲ್ಲೆಯದ್ದೇ ಆದಂತಹ ಪ್ರತ್ಯೇಕ ಸಮಸ್ಯೆಗಳೂ ಇವೆ. ಇಲ್ಲಿಂದ ಆಯ್ಕೆಯಾಗಿ ಹೋಗುವ ಲೋಕಸಭಾ ಸದಸ್ಯರು ದೇಶದ ಮತ್ತು ಜಿಲ್ಲೆಯ ಸಮಸ್ಯೆಗಳೆರಡಕ್ಕೂ ಜವಾಬ್ದಾರರಾಗುತ್ತಾರೆ; ಜವಾಬ್ದಾರರಾಗಬೇಕು.

ಮಂಡ್ಯ ಲೋಕಸಭಾ ಕ್ಷೇತ್ರ ಎಂದರೆ ಮೈಸೂರು ಜಿಲ್ಲೆಯ ಕೆ.ಆರ್.ನಗರವೂ ಸೇರಿಕೊಳ್ಳುತ್ತದೆ. ಆದರೆ ಕೆ.ಆರ್.ನಗರದ ಸಮಸ್ಯೆ ಮಂಡ್ಯ ಜಿಲ್ಲೆಯ ಸಮಸ್ಯೆಗಿಂತ ಬೇರೆಯದ್ದಾಗಿಲ್ಲ. ಹಾಗಾಗಿ ಮಂಡನೆಯ ಅನುಕೂಲಕ್ಕಾಗಿ ಮಂಡ್ಯ ಜಿಲ್ಲೆಯ ಅಂಕಿ-ಅಂಶಗಳು ಮತ್ತು ಸಮಸ್ಯೆಗಳ ಮೇಲೆಯೇ ಇಲ್ಲಿ ಹೆಚ್ಚು ಕೇಂದ್ರೀಕರಿಸಲಾಗಿದೆ.

ಮೊದಲಿಗೆ ಇಲ್ಲಿನ ಪ್ರಧಾನ ಸಮಸ್ಯೆಗಳ ಸ್ವರೂಪದ ಕುರಿತು ನಾಲ್ಕು ಮಾತುಗಳು:

1. ಮಂಡ್ಯ ಜಿಲ್ಲೆಯಲ್ಲಿ ಕೇವಲ 16.4% ಮಾತ್ರ ನಗರ ಜನಸಂಖ್ಯೆಯಾಗಿದೆ. ಅಂದರೆ ಶೇ.83.6ರಷ್ಟು ಗ್ರಾಮೀಣ ಭಾಗವಿದೆ. ರಾಜ್ಯದ ಸರಾಸರಿ ನಗರ ಜನಸಂಖ್ಯೆಯ ಪ್ರಮಾಣಕ್ಕೆ ಹೋಲಿಸಿದರೆ ಇದು ಅರ್ಧಕ್ಕಿಂತಲೂ ಕಡಿಮೆಯಾಗಿದೆ. ಇಲ್ಲಿನ ಪಟ್ಟಣ ಪ್ರದೇಶದಲ್ಲಿ ಇರುವವರಲ್ಲೂ ಕೃಷಿಯಲ್ಲಿ ತೊಡಗಿಕೊಂಡಿರುವವರು ಇದ್ದಾರೆ ಮತ್ತು ಪರೋಕ್ಷವಾಗಿ ಕೃಷಿಯ ಮೇಲೆ ಅವಲಂಬಿತವಾಗಿರುವವರೂ ಇದ್ದಾರೆ. ಅಂದರೆ ಸುಮಾರು ಶೇ.90ಕ್ಕೂ ಹೆಚ್ಚು ಜನರು ಕೃಷಿಯ ಮೇಲೆ ಅವಲಂಬಿತರಾಗಿದ್ದಾರೆ.

2. ಮಂಡ್ಯ ಜಿಲ್ಲೆಯೆಂದರೆ ಸಂಪದ್ಭರಿತವಾದದ್ದು ಎಂದು ಹೇಳುವುದಕ್ಕೆ ಮತ್ತು ಕಾಣುವುದಕ್ಕೆ ಕಾರಣ ಇಲ್ಲಿನ ನೀರಾವರಿ ಸಂಪನ್ಮೂಲ. ವಾಸ್ತವದಲ್ಲಿ ಮಂಡ್ಯ ಜಿಲ್ಲೆಯ ಶೇ.52ರಷ್ಟು ಪ್ರದೇಶ ಇಂದಿಗೂ ಒಣಭೂಮಿಯೇ ಆಗಿದೆ. ಬಹುತೇಕರು ಈ ವಾಸ್ತವವನ್ನು ಮರೆತು ಮಾತನಾಡುವುದರಿಂದ ನಮ್ಮ ದೃಷ್ಟಿಕೋನವೇ ಸಂಕುಚಿತಗೊಂಡು ಬಿಡುತ್ತಿದೆ. ಎರಡನೆಯದಾಗಿ ನೀರಾವರಿ ಇರುವ ಪ್ರದೇಶದ ರೈತರೂ, ನೀರಾವರಿಯ ಕಾರಣದಿಂದಲೇ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅದನ್ನೂ ಗಣನೆಗೆ ತೆಗೆದುಕೊಳ್ಳಬೇಕು.

3. ಜಿಲ್ಲೆಯ ಭೂಹಿಡುವಳಿಯ ವಿಚಾರದಲ್ಲಿ ಸಣ್ಣ (30.06%) ಮತ್ತು ಅತೀಸಣ್ಣ ರೈತರ (41.40%) ಸಂಖ್ಯೆ ಅಗಾಧವಾಗಿದೆ. ಇದು ಮತ್ತಷ್ಟು ಹೆಚ್ಚಳವಾಗಲಿದೆ. ಭೂಮಿ ತೀವ್ರಗತಿಯಲ್ಲಿ ತುಂಡಾಗುತ್ತಿರುವುದರಲ್ಲಿ ಮಂಡ್ಯ ಜಿಲ್ಲೆ ಈ ರಾಜ್ಯದಲ್ಲಿ 4ನೇ ಸ್ಥಾನದಲ್ಲಿದೆ. ಹಿಡುವಳಿ ಸಣ್ಣದಾದಷ್ಟೂ ಉತ್ಪಾದಕತೆ ಮತ್ತಷ್ಟು ಕಡಿಮೆಯಾಗುತ್ತದೆ. ಈಗಾಗಲೇ ಬಿಕ್ಕಟ್ಟಿನಲ್ಲಿರುವ ರೈತರು ಇನ್ನೂ ಸಮಸ್ಯೆಗೆ ಸಿಲುಕಿಕೊಳ್ಳುತ್ತಾರೆ. ಇದಕ್ಕೆ ಪರಿಹಾರವೇನು?

4. ರಾಜ್ಯದ ಜನಸಂಖ್ಯೆಯ ಬೆಳವಣಿಗೆಯ ದರ ಶೇ. 15.63 ಇದ್ದರೆ, ಮಂಡ್ಯ ಜಿಲ್ಲೆಯಲ್ಲಿ ಅದು ಶೇ.2.38ರಷ್ಟು ಮಾತ್ರವಿದೆ. ಇದು ಅದರದ್ದೇ ಆದ ಸಮಸ್ಯೆಗಳನ್ನು ಸೃಷ್ಟಿಸಲಿದೆ ಮತ್ತು ಈ ವ್ಯತ್ಯಾಸಕ್ಕೆ ಕಾರಣವೇನೆಂದು ಪತ್ತೆ ಹಚ್ಚುವ ಅಗತ್ಯವಿದೆ.

5. ಕೃಷಿಯ ಜೊತೆಗೆ ಹೈನುಗಾರಿಕೆಯಲ್ಲಿ ತೊಡಗಿರುವವರು ಲಕ್ಷಾಂತರ ಜನರಿದ್ದಾರೆ. ಸುಮಾರು 42,000 ಕುಟುಂಬಗಳು ರೇಷ್ಮೆ ಕೃಷಿಯಲ್ಲಿ ತೊಡಗಿದ್ದರೆ, 1 ಲಕ್ಷ ಮೀನುಗಾರಿಕೆ ಕೆಲಸ ಮಾಡುವವರು ಇದ್ದಾರೆ. ಆದರೆ ಈ ಮೂರೂ ಉದ್ಯೋಗಗಳಲ್ಲಿ ದಿನೇದಿನೇ ಲಾಭದ ಪ್ರಮಾಣ ಕಡಿಮೆಯಾಗುತ್ತಿದೆ.

6. ಕೃಷಿ ಉತ್ಪಾದಕತೆಯು ಕಡಿಮೆಯಾಗುತ್ತಿರುವುದಕ್ಕೆ ಸಂಕೇತವಾಗಿ ವ್ಯವಸಾಯ ಮಾಡಲಾಗದೇ ಭೂಮಿಯನ್ನು ಬೀಳು ಬಿಡುತ್ತಿರುವುದು ಗಮನಾರ್ಹವಾಗಿ ಹೆಚ್ಚಳವಾಗುತ್ತಿದೆ. ಉದಾ: '90ರ ದಶಕಕ್ಕೂ ನಂತರದ 10 ವರ್ಷಗಳಿಗೂ ನಡುವೆ ಹೋಲಿಸಿದರೆ, ಒಟ್ಟಾರೆ ವ್ಯವಸಾಯ ಮಾಡಲಾಗುತ್ತಿದ್ದ ಭೂಮಿಯಲ್ಲಿ ಶೇ.5.55ರಷ್ಟು ಭೂಮಿಯನ್ನು ಬೀಳು ಬಿಡಲಾಗಿದೆ. ವರ್ಷದಲ್ಲಿ ಎರಡನೇ ಬೆಳೆ ತೆಗೆಯಲಾಗುತ್ತಿದ್ದ ಭೂಮಿಯ ಪ್ರಮಾಣ ಶೇ.4ರಷ್ಟು ಕಡಿಮೆಯಾಗಿದೆ.

7. ಒಟ್ಟು ಸರ್ಕಾರೀ ಆಸ್ಪತ್ರೆಗಳ ಸಂಖ್ಯೆ 137 ಮಾತ್ರ ಇದ್ದು, ಅವುಗಳಲ್ಲಿ 125 ಗ್ರಾಮೀಣ ಭಾಗದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿವೆ. ಆದರೆ ಹಾಲಿ ಖಾಸಗಿ ಆಸ್ಪತ್ರೆಗಳ ಸಂಖ್ಯೆ 385ಕ್ಕೂ ಹೆಚ್ಚಿದೆ. ಇದೇರೀತಿಯ ಪರಿಸ್ಥಿತಿ ಶಿಕ್ಷಣ ಕ್ಷೇತ್ರದಲ್ಲೂ ಇದ್ದು, ಸರ್ಕಾರೀ ಶಾಲೆಗಳ ಸಂಖ್ಯೆ ಕಡಿಮೆಯಾಗುತ್ತಿದೆ; ಖಾಸಗಿ ಶಾಲೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳ ಖಾಸಗೀಕರಣವು ಎದ್ದು ಕಾಣುತ್ತಿದೆ.

8. ದೊಡ್ಡ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಸೃಷ್ಟಿ ಮಾಡಿರುವ ಉದ್ಯೋಗಗಳ ಸಂಖ್ಯೆ ಕೇವಲ 4008. ಸಣ್ಣ ಕೈಗಾರಿಕೆಗಳು ಸುಮಾರು 25 ಸಾವಿರ ಜನರಿಗೆ ಉದ್ಯೋಗ ಕೊಟ್ಟಿವೆ. ಹೊಸ ಉದ್ಯೋಗ ಸೃಷ್ಟಿಯಾಗುತ್ತಿರುವುದು ಮನುಷ್ಯ ಶ್ರಮವನ್ನು ತೀವ್ರವಾಗಿ ಹೀರುವ ಗಾರ್ಮೆಂಟ್ಸ್ ಥರದ ಉದ್ದಿಮೆಗಳು. ಉಳಿದುದೆಲ್ಲವೂ ಅಸಂಘಟಿತ ಉದ್ಯೋಗಗಳಾಗಿವೆ.

9. ಇದ್ದುದರಲ್ಲೇ ಉತ್ತಮ ರಸ್ತೆ ಸಂಪರ್ಕ, ರೈಲು ಸಂಪರ್ಕವಿದ್ದರೂ, ಪ್ರವಾಸಿತಾಣಗಳು ಸಾಕಷ್ಟಿದ್ದರೂ, ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅತ್ಯಂತ ಕಡಿಮೆ ಬೆಳವಣಿಗೆಯಾಗಿದೆ.

10. ಜಿಲ್ಲೆಯು ಈ ಹಿಂದೆ ಹೆಣ್ಣು ಭ್ರೂಣಹತ್ಯೆಯಲ್ಲಿ ರಾಜ್ಯದಲ್ಲೇ ಎರಡನೇ ಸ್ಥಾನ ಪಡೆದುಕೊಂಡಿತ್ತು, ಈಗ ಆ ಪ್ರಮಾಣವು ಕಡಿಮೆಯಾಗಿದ್ದರೂ, ಹೆಣ್ಣು ಮಕ್ಕಳ ಸುರಕ್ಷತೆಯ ವಿಚಾರದಲ್ಲಿ ಆಘಾತಗೊಳಿಸುವ ರೀತಿಯ ಅತ್ಯಾಚಾರ ಮತ್ತು ಕೊಲೆಗಳು ನಡೆಯುತ್ತಿವೆ.


ಈ 10 ಸಮಸ್ಯೆಗಳಾಚೆಗೆ ಇನ್ನೂ ಹಲವಾರು ಸಮಸ್ಯೆಗಳು ಜಿಲ್ಲೆಯಲ್ಲಿದ್ದರೂ, ಪ್ರಧಾನವಾಗಿ ಗಮನಿಸಲೇಬೇಕಾದ ಅಂಶಗಳನ್ನಾಗಿ ಇವನ್ನು ಮುಂದಿಡುತ್ತಿದ್ದೇವೆ.

ಒಂದೊಂದೇ ವಿಚಾರಕ್ಕೆ ಬರುವುದಾದರೆ, ಈ ಜಿಲ್ಲೆಯ ಅಭಿವೃದ್ಧಿಯ ಸಮಗ್ರ, ಸುಸ್ಥಿರ ಕೃಷಿ ಬೆಳವಣಿಗೆಗೆ ವಿಶೇಷ ಮಹತ್ವ ಮತ್ತು ಸಬ್ಸಿಡಿಗಳನ್ನು ಒದಗಿಸದೇ ಇದಕ್ಕೆ ಪರಿಹಾರವಿಲ್ಲ. ಏಕೆಂದರೆ ದಿಢೀರೆಂದು ಲಕ್ಷಾಂತರ ಹೊಸ ಉದ್ಯೋಗ ಸೃಷ್ಟಿ ಸಾಧ್ಯವಿಲ್ಲ. ಎರಡು ದೊಡ್ಡ ನಗರಗಳ ಮಧ್ಯೆ ಇರುವುದನ್ನು ಅನುಕೂಲಕರ ಅಂಶವನ್ನಾಗಿ ಮಾರ್ಪಡಿಸಿಕೊಳ್ಳಬೇಕು. ಇರುವ ನೀರಿನ ಸದ್ಬಳಕೆ, ಸರಿಯಾದ ರೀತಿಯಲ್ಲಿ ಅಂತರ್ಜಲದ ಬಳಕೆ ಮತ್ತು ಅದರ ಪುನಶ್ಚೇತನಕ್ಕೆ ಕ್ರಮಗಳಿಂದ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಬೇಕು. ಇನ್ನೂ ಶೇ.19ರಷ್ಟು ಭಾಗವು ಒಂದೋ ಬೀಳು ಬಿದ್ದಿದೆ ಅಥವಾ ಕೃಷಿಗೆ ಸದ್ಬಳಕೆಯಾಗುತ್ತಿಲ್ಲ. ಒಟ್ಟಾರೆ ನೀರಾವರಿಯಲ್ಲಿ 1970ರಲ್ಲಿ ಶೇ.17ರಷ್ಟು ಕೆರೆಗಳಿಂದ ನೀರು ಪಡೆದುಕೊಳ್ಳುತ್ತಿದ್ದರೆ, ಇಂದು ಅದರ ಪ್ರಮಾಣವು ಶೇ.7ಕ್ಕಿಂತ ಕಡಿಮೆಯಾಗಿದೆ. ನಮ್ಮ ಕಣ್ಣೆದುರಿಗೇ ಇರುವ ಹಲವಾರು ಕೆರೆಗಳು ಒತ್ತುವರಿಗೆ ಒಳಗಾಗಿವೆ ಮತ್ತು ಹೂಳಿನಿಂದ ತುಂಬಿ ಹೋಗಿವೆ. ಇವನ್ನು ಸರಿಪಡಿಸಿದರೆ, ಹಾಲಿ ಮಂಡ್ಯ ಜಿಲ್ಲೆ ಪಡೆದುಕೊಳ್ಳುತ್ತಿರುವ ನದೀ ನೀರನ್ನೂ ಸೇರಿಸಿ ಆಧುನಿಕ ಹನಿ ನೀರಾವರಿ ತಂತ್ರಜ್ಞಾನದಿಂದ ಶೇ.100ರಷ್ಟು ಪ್ರದೇಶಕ್ಕೆ ನೀರನ್ನು ಒದಗಿಸುವುದು ಸಾಧ್ಯ.

ಅತೀ ನೀರಾವರಿ ಮತ್ತು ಏಕಬೆಳೆ ಪದ್ಧತಿ ಹಾಗೂ ಹೆಚ್ಚಾಗುತ್ತಿರುವ ಸಕ್ಕರೆ ಉದ್ದಿಮೆಯ ಮೇಲೆ ಅವಲಂಬನೆಯೂ ಮುಂಬರುವ ದಿನಗಳಲ್ಲಿ ಅಪಾಯಕ್ಕೆ ದೂಡಲಿವೆ. ಇಲ್ಲಿ ಕೃಷಿ ಉತ್ಪಾದಕತೆ ಕಡಿಮೆಯಾಗುತ್ತಿರುವುದರಲ್ಲಿ ಅವೈಜ್ಞಾನಿಕವಾದ ಬೇಸಾಯ ಪದ್ಧತಿಯೂ ಒಂದು ಕಾರಣವಾಗಿದೆ. ಭೂಮಿಯಲ್ಲಿ ಕ್ಷಾರಗುಣ ಹೆಚ್ಚಾಗುತ್ತಿರುವುದು ಅದರಲ್ಲಿ ಒಂದು. ಮಣ್ಣು ಪರೀಕ್ಷೆಯನ್ನು ಮಾಡಿಸುವ ಒಂದು ಅಭ್ಯಾಸವೇ ಇರದಿರುವುದು ಕೇವಲ ರೈತರ ತಪ್ಪಲ್ಲ. ಕೃಷಿ ಕ್ಷೇತ್ರಕ್ಕೆ ಭವಿಷ್ಯವಿಲ್ಲದಂತೆ ಮಾಡಿರುವ ಮತ್ತು ಸರ್ಕಾರವು ಇದಕ್ಕೆ ನೀಡುತ್ತಿರುವ ಸಬ್ಸಿಡಿಗಳನ್ನು ಹಿಂತೆಗೆದುಕೊಳ್ಳುತ್ತಿರುವ ಕಾಲಘಟ್ಟದಲ್ಲಿ ಎಲ್ಲ ಬೋಧನೆಯನ್ನು ಕೇವಲ ರೈತ ಸಮುದಾಯಕ್ಕೆ ಮಾಡುವುದರಿಂದ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಹಾಗಾಗಿ ಸಮಗ್ರ, ಸುಸ್ಥಿರ ಕೃಷಿ ಪದ್ಧತಿಯನ್ನು ಜಾರಿಗೆ ತರಲು ಮತ್ತು ಸಹಕಾರೀ ತತ್ವದಡಿ ಉಳುಮೆ, ಮಾರ್ಕೆಟಿಂಗ್ ರೂಪಿಸುವುದು ಬಹಳ ಮುಖ್ಯವಾದ ಅಂಶವಾಗಿದೆ. ಇದು ಸರ್ಕಾರದಿಂದ ಸಬ್ಸಿಡಿ, ಸಹಾಯಧನ, ಪ್ರೋತ್ಸಾಹಧನ ಮತ್ತು ಕಾಯ್ದೆಯ ರಕ್ಷಣೆಯನ್ನು ಒದಗಿಸದೇ ಆಗುವುದಿಲ್ಲ. ಹಣ್ಣು ತರಕಾರಿ ಮತ್ತು ಇನ್ನಿತರ ತೋಟಗಾರಿಕೆ ಬೆಳೆಗಳಿಗೆ ಪ್ರೋತ್ಸಾಹಿಸುವುದೂ ಅತ್ಯಗತ್ಯವಾಗಿದೆ. ಆದರೆ ಯಾವುದೇ ಕಾರಣಕ್ಕೂ ಕಾರ್ಪೊರೇಟ್ ಕಂಪೆನಿಗಳ ಮೇಲೆ ಅವಲಂಬಿತವಾದ ರಸಗೊಬ್ಬರ ಮಾರುಕಟ್ಟೆ ಮತ್ತು ಚಿಲ್ಲರೆ ಮಾರಾಟದ ಕಡೆ ಇದು ಸಾಗದಂತೆ ನೋಡಿಕೊಳ್ಳಬೇಕು.

ಕೃಷಿಯ ಮೇಲೆ ಆಧರಿಸಿದ ಕೈಗಾರಿಕೆಗಳು ಸ್ಥಳೀಯವಾಗಿ ಹೆಚ್ಚಾಗಲು ಎಲ್ಲ ರೀತಿಯ ನೆರವು ಸರ್ಕಾರದಿಂದ ದೊರೆಯಬೇಕು. ಮೈಷುಗರ್ ಮತ್ತು ಪಿಎಸ್‌ಎಸ್‌ಕೆ ಕಾರ್ಖಾನೆಗಳು ಸಾಯದಂತೆ ನೋಡಿಕೊಳ್ಳಲು ಮಾತ್ರ ಹಣಕಾಸಿನ ನೆರವನ್ನು ನೀಡಲಾಗುತ್ತಿದೆ. ಒಂದೇ ಕಂತಿನಲ್ಲಿ ಕ್ರಮವಾಗಿ 300 ಕೋಟಿ ಮತ್ತು 150 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿ ಸಮಗ್ರ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳದಿರುವುದು, ಇವನ್ನು ಇಂದಲ್ಲ ನಾಳೆ ಖಾಸಗಿಯವರ ಪಾಲು ಮಾಡುವ ಸಂಚಿನ ಭಾಗವಾಗಿದೆ. ಈ ಕುರಿತು ಯಾವ ಅಭ್ಯರ್ಥಿಗಳೂ ಸ್ಪಷ್ಟವಾಗಿ ಮಾತನಾಡಿಲ್ಲ. ಸಹ ವಿದ್ಯುತ್ ಘಟಕಗಳು ಕಾರ್ಖಾನೆಯಲ್ಲಿ ಬರುವ ಬಗಾಸ್ ಜೊತೆಗೆ ತೆಂಗಿನ ಉಪಉತ್ಪನ್ನಗಳನ್ನು ಮಾತ್ರ ಬಳಸಿಕೊಳ್ಳುವುದು ಮತ್ತು ಕಲ್ಲಿದ್ದಲು ಬಳಸದೇ ಇರುವುದು ಆರ್ಥಿಕವಾಗಿ ಮತ್ತು ಪರಿಸರದ ದೃಷ್ಟಿಗಳೆರಡರಿಂದಲೂ ಲಾಭದಾಯಕವಾದುದು. ಇದು ಮಾಲಿನ್ಯವನ್ನು ಕಡಿಮೆ ಮಾಡುತ್ತದೆ ಮತ್ತು ತೆಂಗಿನ ಬೆಳೆಗಾರರಿಗೂ ಅನುಕೂಲ ಮಾಡಿಕೊಡುತ್ತದೆ. ಇಂತಹ ಕ್ರಮಗಳನ್ನು ಇಲ್ಲಿನ ಕೃಷಿ ಬೆಳವಣಿಗೆಯ ದೃಷ್ಟಿಯಿಂದ ಆಲೋಚಿಸಬೇಕಿದೆ.

ಸಣ್ಣ ಹಿಡುವಳಿದಾರರ ಸಮಸ್ಯೆಗಳನ್ನು ಬಗೆಹರಿಸಲು ವಿಶೇಷ ಕಾರ್ಯಯೋಜನೆ ಮತ್ತು ಆಂದೋಲನ ರೂಪುಗೊಳ್ಳಬೇಕು. ಹಾಲಿ ಇರುವ 31 ರೈತಸಂಪರ್ಕ ಕೇಂದ್ರಗಳಿಗೂ ರೈತರಿಗೂ ಸಂಪರ್ಕವಿಲ್ಲದಂತಾಗಿದೆ. ಅವೂ ಮತ್ತು 214ರಷ್ಟಿರುವ ಸಹಕಾರೀ ಸಂಘಗಳೂ ಸಂಖ್ಯೆಯಲ್ಲಿ 3 ಪಟ್ಟು ಹೆಚ್ಚಬೇಕು. ಸಹಕಾರೀ ತತ್ವದಡಿ ಮಾತ್ರ ಇದನ್ನು ಅದ್ಭುತವಾಗಿ ಮಾಡಲು ಸಾಧ್ಯ.



ಉದ್ಯೋಗ ಸೃಷ್ಟಿಯಾಗಬೇಕು ಎಂದಾಕ್ಷಣ, ಗಾರ್ಮೆಂಟ್ಸ್ ಕಾರ್ಖಾನೆಗಳು ಮಾತ್ರ ನಮ್ಮ ರಾಜಕೀಯ ಪಕ್ಷಗಳ ಕಣ್ಣಿಗೆ ಬೀಳುತ್ತಿರುವುದು ಅವರು ಕಾರ್ಪೊರೇಟ್ ಕಂಪೆನಿಗಳ ಪರವಾಗಿ ಇರುವುದನ್ನು ಎತ್ತಿ ತೋರಿಸುತ್ತದೆ. ಗಾರ್ಮೆಂಟ್ಸ್ ಕಾರ್ಖಾನೆಗಳು ನಮ್ಮ ಹೆಣ್ಣು ಮಕ್ಕಳ ಜೀವ ಚೈತನ್ಯವನ್ನೇ ಹಿಂಡುವ ಉದ್ದಿಮೆಗಳಾಗಿವೆ. ಗುತ್ತಿಗೆ ಪದ್ಧತಿಯನ್ನು ಪ್ರೋತ್ಸಾಹಿಸಬಾರದು. ಮೂಟೆ ಹೊರುವವರು, ಪೌರಕಾರ್ಮಿಕರು ಸೇರಿದಂತೆ ಎಲ್ಲರಿಗೂ ಕೆಲಸದ ಭದ್ರತೆ, ಸಾಮಾಜಿಕ ಭದ್ರತೆ ಮತ್ತು ಸಂಬಳದ ಭದ್ರತೆ ಸಿಗಬೇಕು.

ಹೈನುಗಾರಿಕೆ, ಮೀನುಗಾರಿಕೆ, ಆಡು-ಕುರಿ-ಕೋಳಿ ಸಾಕಾಣಿಕೆಗಳು ಲಾಭದಾಯಕವಾಗದಿರಲು ಕಾರಣಗಳಿವೆ. ಹಾಲಿನ ದರ ಏರಿಸಿದ ಗಂಟೆಯಲ್ಲೇ ಫೀಡ್ಸ್ ದರ ಏರಿಸುವಂತಹ ಕ್ರಮಗಳಿಂದ ಅದು ಲಾಭದಾಯಕವಾಗದ ರೀತಿಯಲ್ಲಿ ನೋಡಿಕೊಳ್ಳಲಾಗುತ್ತಿದೆ. ತುಂಡು ಬೇಸಾ ಬದಲು ಸಣ್ಣ ಫಾರ್ಮ್‌ಗಳನ್ನು ಸಣ್ಣ ರೈತರೂ ಮ ಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಸರ್ಕಾರದ ಪ್ರೋ ವನ್ನು ನೀಡಬೇಕಾಗಿದೆ.

ರೈತಾಪಿಯೂ ಸೇರಿದಂತೆ ಎಲ್ಲಾ ಜನರಿಗೂ ಆ ಹೊರೆಯನ್ನು ಉಂಟು ಮಾಡುತ್ತಿರುವ ಎರ ಸಂಗತಿಗಳೆಂದರೆ ಶಿಕ್ಷಣ ಮತ್ತು ಆರೋಗ್ಯದ ವ ಮಾಡುತ್ತಿರುವ ವೆಚ್ಚ ಅತ್ಯುತ್ತಮವಾದ ಶಿಕ್ಷಣವನ್ನು ಸಾ ವ್ಯವಸ್ಥೆಯಲ್ಲೇ ಕಲ್ಪಿಸುವ ಮತ್ತು ಸ್ಥಳೀಯ ಉದ್ಯೋ ಕಾಶಗಳನ್ನು ಸೃಷ್ಟಿಸಿ, ಅದಕ್ಕೆ ತಕ್ಕಂತಹ ವೃತ್ತಿ ತರಬ ಕೇಂದ್ರಗಳನ್ನು ಸ್ಥಾಪಿಸುವ ಕೆಲಸವೂ ಆಗಬೇಕಿದೆ. ಸಂಪೂ ಉಚಿತವಾಗಿ ಅತ್ಯುತ್ತಮ ಗುಣಮಟ್ಟದ ಸರ್ಕಾ ಶಾಲಾಕಾಲೇಜುಗಳು ಇಲ್ಲಿ ಇನ್ನು ಹೆಚ್ಚಾಗಬೇಕು.

ಮಂಡ್ಯ ಜಿಲ್ಲೆಯ ಆಸ್ಪತ್ರೆಗಳ ದುರವಸ್ಥೆಯನ್ನಂ ಹೇಳತೀರದು. ಉತ್ತಮ ಗುಣಮಟ್ಟದ ಚಿಕಿತ್ಸೆ ಸರ್ಕಾ ಮತ್ತು ಖಾಸಗಿ ಕ್ಷೇತ್ರಗಳೆರಡರಲ್ಲೂ ದೊರೆಯುತ್ತಿಲ್ಲ. ಖಾ ಕ್ಷೇತ್ರವು ಹಣ ಸುಲಿಯುವ ಅಮಾನವೀಯ ಕೇಂದ್ರವಾಗಿ ಸರ್ಕಾರೀ ಆಸ್ಪತ್ರೆಗಳ ಆಡಳಿತಗಳು ಕನಿಷ್ಠ ಕರ್ತವ್ಯಪ್ರಜ್ಞೆಯ ತೋರಿಸುತ್ತಿಲ್ಲ. ಸರ್ಕಾರೀ ಆಸ್ಪತ್ರೆಗಳಲ್ಲಿ ಅತ್ಯುತ್ತಮ ಚಿ ದೊರೆಯುವಂತಾಗುವುದು ಮತ್ತು ಅಲ್ಲಿ ವೈದ್ಯರು ಎ ಕಾಲದಲ್ಲೂ ಲಭ್ಯವಿರುವಂತೆ ಮಾಡುವುದು ಮತ್ತು ಖಾ ಆಸ್ಪತ್ರೆಗಳಿಗೆ ಕಡಿವಾಣ ಹಾಕುವುದು ಅತ್ಯಂತ ಜರೂರ ಸಂಗತಿಗಳಲ್ಲಿ ಒಂದು.

ಜಿಲ್ಲೆಯಲ್ಲಿನ ಹಿಂದುಳಿದ ಮತ್ತು ದಲಿತ ಸ ದಾಯಗಳ ಸಬಲೀಕರಣದ ಯೋಜನೆಗಳನ್ನು ಗೊಳ್ಳುವುದು ಬಹಳ ಪ್ರಮುಖವಾದ ಸಂಗತಿಯಾ ಅಸ್ಪೃಶ್ಯತೆ ಇನ್ನೂ ಹೆಚ್ಚಿನ ಹಳ್ಳಿಗಳಲ್ಲಿ ಜೀವಂತವಾ ಸೆಲೂನ್, ಹೋಟೆಲ್‌ಗಳು ಮ ದೇವಸ್ಥಾನಗಳಲ್ಲಿ ದಲಿತರಿಗೆ ಪ್ರವೇಶವಿ ಹಳ್ಳಿಗಳು ಜಿಲ್ಲಾ ಕೇಂದ್ರದ ಆಸುಪಾಸಿನ ಇವೆ. ಇದರ ವಿರುದ್ಧ ಜನಾಂದೋ ರೂಪಿಸುವುದು ಮತ್ತು ಕಾಯ್ದೆಗಳ ಕಟ್ಟುನಿಟ್ಟಾಗಿ ಜಾರಿಗೆ ತರಲು ಮುಂ ಗುವುದು ಅಗತ್ಯವಿದೆ. ಎಲ್ಲಾ ಸ ದಾಯಗಳಿಗೆ ಸೇರಿದ ರೈತಾಪಿ ಭೂಮಂಜೂರಾತಿ ಪ್ರಕ್ರಿಯೆ ಹೆಚ್ಚುಕಡಿ ನಿಂತುಹೋಗಿದೆ. ಅದನ್ನು ಮತ್ತೆ ಪುನ ರಂಭಿಸಬೇಕು ಮತ್ತು ಭೂರಹಿತರಿಗೆ ಅ ನೀಡಬೇಕು.

ಇತ್ತೀಚೆಗೆ ಪಾಂಡವಪುರದಲ್ಲಿ ದಿರುವ ಅಪ್ರಾಪ್ತ ವಯಸ್ಸಿನ ಹೆಣ್ಣುಮ ಅತ್ಯಾಚಾರ ಹಾಗೂ ಕೊಲೆ ಹಾ ಕೆ.ಆರ್.ಪೇಟೆ ಮತ್ತು ಇನ್ನಿತರೆಡೆಗ ನಡೆದ ಲೈಂಗಿಕ ದೌರ್ಜನ್ಯಗಳ ಪ್ರಕರಣಗಳು, ಮಹಿಳೆಯ ಪರಿಸ್ಥಿತಿಯ ಕುರಿತು ಎಲ್ಲರ ಕಣ್ಣು ತೆರೆಸಬೇಕಿದೆ. ಇ ಜಿಲ್ಲೆಯಲ್ಲಿ ಮಹಿಳೆಯರ ಸ್ಥಾನಮಾನದ ಮೇಲೆ ಬೆ ಚೆಲ್ಲಬೇಕಿದೆ. ಏಕೆಂದರೆ, ಕೇವಲ ಆರೋಪಿಗಳ ಬಂಧನದಿ ಸಮಸ್ಯೆ ಬಗೆಹರಿಯುವುದಿಲ್ಲ. ಮಹಿಳೆಯರಿಗೆ ಸಮ ಸ್ಥಾನಮಾನವನ್ನು ಸರ್ಕಾರ ಹಾಗೂ ಸಮಾ ಖಾತರಿಗೊಳಿಸುವುದರಿಂದ ಮಾತ್ರ ಇದಕ್ಕೆ ಪರಿಹಾರ

2003ರಲ್ಲಿ 45 ಕೋಟಿಗಳಷ್ಟಿದ್ದ ಮಂಡ್ಯ ಜಿಲ್ಲೆ ಮದ್ಯ ವಹಿವಾಟು ಈಗ 300 ಕೋಟಿಗಳಿಗೂ ಹ ಏರಿದೆ. ಇದಕ್ಕೆ ಸರ್ಕಾರವೇ ನೇರವಾಗಿ ಹೊಣೆಯಾಗಿ ಮದ್ಯದ ಮಾರಾಟದ ಗುರಿಯನ್ನು ಹೆಚ್ಚಿಸುವುದ ಇಳಿಸಬೇಕು. ಈ ಜಿಲ್ಲೆಯಲ್ಲಂತೂ ಮದ್ಯ ಮಾರ ಗುರಿಯನ್ನು ಇಳಿಸಲೇಬೇಕು ಎಂಬ ಒತ್ತಾಯವ ತರಬೇಕು.

ಇಂತಹ ಇನ್ನೂ ಹಲವಾರು ಸಂಗತಿಗಳು ಮ ಲೋಕಸಭಾ ಕ್ಷೇತ್ರದಂತೆಯೇ ಇಡೀ ರಾಜ್ಯದ, ದೇ ಹಲವಾರು ಜಿಲ್ಲೆಗಳ ಸಮಸ್ಯೆಗಳಾಗಿವೆ. ಇವೆಲ್ಲವ ಬಗೆಹರಿಸುವಂತಹ ರಾಜಕೀಯ ಸಿದ್ಧಾಂತ ಈ ಅಗತ್ಯವಾಗಿದೆ.

ಲಂಕೇಶ್ ಸಮೀಕ್ಷೆಯಲ್ಲಿ ಕಂಡದ್ದು, ಕಾಣಿಸದಿದ್ದದ್ದು



• ಗೌರಿ ಲಂಕೇಶ್
editorlankesh@gmail.com


16ನೇ ಲೋಕಸಭಾ ಚುನಾವಣೆಯಲ್ಲಿ 'ಮೋದಿ ' ಇದೆಯೆಂದೂ, ಆದರಿಂದಾಗಿ ್ಯದ 28 ಕ್ಷೇತ್ರಗಳಲ್ಲಿ ಬಿಜೆಪಿ ಯ್ತ ಹೆಚ್ಚು ಕ್ಷೇತ್ರಗಳಲ್ಲಿ ್ಲತ್ತದೆಂದೂ, ಪತ್ರಿಕೆ ಬಿಜೆಪಿಯನ್ನು ್ರಾಂತಿಕವಾಗಿ ೀಧಿಸುವುದರಿಂದ ಆ ಪಕ್ಷದ ್ರ್ಥಿಗಳ ವಿರುದ್ಧ ಸತತವಾಗಿ ಯುತ್ತಿದೆ ಎಂದೂ ಹಲವರು ೀಪಿಸುತ್ತಿದ್ದಾರೆ.



ಆದರೆ ವಾಸ್ತವವೇನೆಂದರೆ ್ಯದಲ್ಲಿ 'ಮೋದಿ ಅಲೆ' ುದಿದೆಯೇ? ಅಸಲು ಈ ಾವಣಾ ಸಂದರ್ಭದಲ್ಲಿ 'ಅಲೆ' ು ಪದ ಬಳಕೆಗೆ ಅರ್ಥವೇನು? ತದ ಮತದಾರನ ಮನಸ್ಸಿನಲ್ಲಿ ಾಲದಲ್ಲಿ ಹಲವು ಅಂಶಗಳು ಕೆಲಸ ಡುತ್ತಿರುತ್ತವೆ. ಅದರಲ್ಲಿ ಮತದಾರರ ಜಾತಿ, ಅವರ ುಕಿನ ವಾಸ್ತವ, ಪ್ರದೇಶ ಮೋಹ, ಭಾಷಾ ಹೆ, ಕೋಮುವಾದದಿಂದ ಹುಟ್ಟಿಕೊಳ್ಳುವ ಂಧತೆಯ ಪ್ರಭಾವ, ಚುನಾವಣೆಗಳ ಬಗ್ಗೆ, ಎಲ್ಲಾ ಕೀಯ ಪಕ್ಷಗಳ ಬಗ್ಗೆ ತಿರಸ್ಕಾರ ಅಥವಾ ಹಲವು ಾಕ್ಕೆ ಯಾವುದಾದರೂ ಒಂದು ಪಕ್ಷದ ಬಗ್ಗೆ ಷ ಮಮತೆ ಅಥವಾ ತಿರಸ್ಕಾರ... ಹೀಗೆ ಹತ್ತು ವು 'ಅಂಶಗಳು' ಏಕಕಾಲದಲ್ಲಿ ಕೆಲಸ ಡುತ್ತಿರುತ್ತವೆ. ನಿರ್ದಿಷ್ಟ ರ್ಭದಲ್ಲಿ ನಿರ್ದಿಷ್ಟ ದಾರನ ಮನಸ್ಸಿನಲ್ಲೂ ರವರ ವರ್ಗ, ಜಾತಿ, ೇಶ, ಭಾಷೆ, ಲಿಂಗ ಮತ್ತು ಕೀಯ ದೃಷ್ಟಿಗಳನ್ನು ಆಧರಿಸಿ ವುದಾದರೂ ಒಂದು ಅಂಶ ನವಾಗಿ ಹೆಚ್ಚಿನ ಮಹತ್ವ ದುಕೊಂಡು ಅವರ ಾವಣಾ ಆಯ್ಕೆಯನ್ನು ಾವಿಸುತ್ತದೆ. ಆದರೆ ವುದಾದರೂ ಒಂದು ಾವಣಾ 'ಅಲೆ' ಇದ್ದರೆ ಾಗುವುದಿಲ್ಲ, ಆಗ ೆ'ಯು ಯಾವ ಕಾರಣಕ್ಕೆ ುತ್ತದೋ ಆ ಕಾರಣವು ತದಾರರ ಒಳಗಿನ ಇತರ ಎಲ್ಲಾ ಅಂಶಗಳನ್ನು ಾಸಗಟು ಕೊಚ್ಚಿಹಾಕುತ್ತದೆ. ಮತ್ತು ಆ 'ಅಲೆ'ಯ ಹಿಂದಿನ ಅಂಶವೇ ವಿವಿಧ ಹಿನ್ನೆಲೆಯುಳ್ಳ ಮತದಾರರಲ್ಲಿ ಕೆಲಸ ಮಾಡುವ ಇತರ ಎಲ್ಲಾ ಅಂಶಗಳನ್ನು ಪಕ್ಕಕೆ ಸರಿಸಿ ಒಂದೇ ಅಂಶಕ್ಕೆ ಓಟು ಹಾಕುವಂತೆ ಮಾಡುತ್ತದೆ.



ನಮ್ಮ ಲೋಕಸಭಾ ಚುನಾವಣೆಯ ಇತಿಹಾಸವನ್ನು ನೋಡಿದರೆ ಇಂದಿರಾ ಗಾಂಧಿಯ ಹತ್ಯೆಯ ನಂತರ ಇಡೀ ದೇಶದಲ್ಲಿ ಆ ರೀತಿಯ ಅನುಕಂಪದ ಅಲೆ ಇತರ ಎಲ್ಲಾ ಅಂಶಗಳನ್ನು ಕೊಚ್ಚಿಹಾಕಿತ್ತು, ಪರಿಣಾಮವಾಗಿ ಕಾಂಗ್ರೆಸ್‌ಗೆ ಸ್ವಾತಂತ್ರಾನಂತರದಲ್ಲಿ ಈವರೆಗಿನ ಅತಿಹೆಚ್ಚು ಓಟು ಶೇರು (ಶೇ.49.1), ಮತ್ತು ಅತಿ ಹೆಚ್ಚು ಸೀಟು (404) ಸಿಕ್ಕಿತ್ತು, ಈ ಅನುಕಂಪದ ಅಲೆ ಮತದಾರರೊಳಗಿನ ಜಾತಿ, ವರ್ಗ, ಪ್ರದೇಶ, ಭಾಷೆಯಂಥ ಎಲ್ಲಾ ಅಂಶಗಳನ್ನು ಪಕ್ಕಕೆ ಸರಿಸಿ ಕಾಂಗ್ರೆಸ್‌ಗೆ ಓಟುಹಾಕುವಂತೆ ಮಾಡಿತ್ತು, ನಮ್ಮ ದೇಶದಲ್ಲಿ ಕಂಡುಬಂದ ಈ 'ಅಲೆ'ಯನ್ನು ಬಿಟ್ಟರೆ ದೇಶಮಟ್ಟದಲ್ಲಿ ಈವರೆಗೆ ಮತ್ತೊಂದು 'ಅಲೆ' ಎದ್ದಿಲ್ಲ. ಬಾಬ್ರಿ ಮಸೀದಿಯನ್ನು ಕೆಡವಿ ಕೋಮುವಾದಿ ವಿಭಜನೆಯನ್ನು ಮಾಡಿದ ಬಿಜೆಪಿಗೆ ಸಹ ದೇಶದಾದ್ಯಂತ ಈವರೆಗೆ ಇದಕ್ಕೆ ಸರಿಸಾಟಿಯಾದ ಚುನಾವಣಾ 'ಅಲೆ'ಯನ್ನು ಹುಟ್ಟಿಹಾಕಲು ಸಾಧ್ಯವಾಗಿಲ್ಲ. ಈವರೆಗೆ ರಾಷ್ಟ್ರಮಟ್ಟದಲ್ಲಿ ಅವರ ಬೆಸ್ಟ್ ಪರ್ಫಾರ್ಮೆನ್ಸ್ 1998ರಲ್ಲಿ ಶೇ.24ರಷ್ಟು ಓಟು ಶೇರು ಮತ್ತು 182 ಸೀಟುಗಳು ಅಷ್ಟೆ. ಉತ್ತರದಲ್ಲಿ ಆ ಪ್ರಮಾಣದ ಕೋಮುವಾದಿ 'ಅಲೆ'ಯನ್ನು ಬಿಜೆಪಿ ಹುಟ್ಟಿಹಾಕಿದ್ದರೂ ಈವರೆಗೆ ಅದು ದಕ್ಷಿಣದ ನಾಲ್ಕು ರಾಜ್ಯ ಒರಿಸ್ಸಾ, ಬಂಗಾಳ ಮತ್ತು ಈಶಾನ್ಯ ಭಾರತದ ರಾಜ್ಯಗಳಲ್ಲಿ ಅಲೆ ಇರಲಿ, ಮುಖ್ಯ ಅಂಶ ಕೂಡ ಆಗಲಿಲ್ಲ, ಅಷ್ಟೇಕೆ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅತಿಹೆಚ್ಚು ಸೀಟುಗಳನ್ನು ಗಳಿಸಿಕೊಟ್ಟಿದ್ದು ಗುಜರಾತ್ ಅಲ್ಲ (15), ಕರ್ನಾಟಕ (19). ಕಳೆದ ವಿಧಾನಸಭಾ ಚುನಾವಣೆ ಈ ಮೋದಿ 'ಅಲೆ'ಯ ಮಧ್ಯೆಯೇ ನಡೆದರೂ ಬಿಜೆಪಿ ಎಷ್ಟು ಹೀನಾಯವಾಗಿ ಸೋತಿತು ಮತ್ತು ಮತದಾರನ ಮನಸ್ಸಿನಲ್ಲಿ ಮೋದಿ ಅಂಶ ಕಿಂಚಿತ್ತೂ ಕೆಲಸ ಮಾಡಲಿಲ್ಲ ಎಂಬುದು ಅರ್ಥವಾಗುತ್ತದೆ. ಆಗ ಇದ್ದದ್ದು ಕರ್ನಾಟಕದ ಮಟ್ಟಿಗೆ ಬಿಜೆಪಿ ವಿರೋಧಿ ಅಲೆ. ಈ ಬಗೆಯಲ್ಲಿ ರಾಜ್ಯ ಮಟ್ಟಗಳಲ್ಲಿ ಕಾಂಗ್ರೆಸ್ ವಿರೋಧಿ ಅಲೆ, ಬಿಜೆಪಿ ವಿರೋಧಿ ಅಲೆಗಳು ಕೆಲಸ ಮಾಡಿವೆ. ಆದರೆ ಅವು ಆ ರಾಜ್ಯಕ್ಕೆ ಮಾತ್ರ ಸೀಮಿತವಾಗಿವೆ.



ಈಗ ಮೋದಿ 'ಅಲೆ' ಎಂದು ಬಿಂಬಿತವಾಗುತ್ತಿರುವುದೂ ಸಹ ದೇಶದ ಎಲ್ಲಾ ಪ್ರದೇಶ, ಸಮುದಾಯ, ಜನಾಂಗಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡಿಲ್ಲ, ಮೇಲಾಗಿ ಮೋದಿ ಎಂಬ ವಿದ್ಯಮಾನ ಒಂದು ಕಡೆ ಹಿಂದೂಗಳ ಒಳಗೆ ಜಾತಿಯನ್ನು ಮೀರಿದ ಒಗ್ಗಟ್ಟನ್ನು ಮೂಡಿಸಲು ಕೆಲವು ರಾಜ್ಯಗಳಲ್ಲಿ ಸ್ವಲ್ಪಮಟ್ಟಿಗೆ ಸಾಧ್ಯವಾಗಬಹುದಾದರೂ, ಸುಳ್ಳು 'ಅಭಿವೃದ್ಧಿಯ' ಹೆಸರಲ್ಲಿ ಕೆಲವು ಮೇಲ್ವರ್ಗ ಮತ್ತು ಮೇಲ್ಜಾತಿ ಯುವಕರ ಮತಗಳನ್ನು ಸೆಳೆಯಬಹುದಾದರೂ, ಉಳಿದಂತೆ ಮಿಕ್ಕ ಸಮುದಾಯ ಮತ್ತು ಮತಗಳನ್ನು ಅದರ ವಿರುದ್ಧ ದಿಕ್ಕಿನಲ್ಲೇ ಧ್ರುವೀಕರಣಗೊಳಿಸುತ್ತದೆ. ಅಲ್ಲದೆ ದೇಶದಾದ್ಯಂತ ಮಿತ್ರಪಕ್ಷಗಳನ್ನು ಹುಡುಕಿಕೊಂಡು ಅವಕಾಶವಾದಿ ಮೈತ್ರಿ ಮಾಡಿಕೊಳ್ಳುತ್ತಿರುವ ಬಿಜೆಪಿ ನಡೆಯೇ ಪ್ರಾದೇಶಿಕತೆ, ಸಮುದಾಯ, ಜಾತಿ ಇವುಗಳನ್ನು ಮೀರಿಸಬಲ್ಲ 'ಮೋದಿ ಅಲೆ' ಎಂಬುದೊಂದು ಇಲ್ಲವೆಂಬುದನ್ನು ಸಾಬೀತುಮಾಡುತ್ತದೆ.

ಮೋದಿ ಅಲೆಯಿಲ್ಲ, ಆದರೂ 'ಮೋದಿ ವಿದ್ಯಮಾನ' ವೆಂಬುದು ಕರ್ನಾಟಕದ ಕೆಲವು ಕಡೆ ಮತದಾರ ಪರಿಗಣಿಸಬಹುದಾದ ಹಲವು ಅಂಶಗಳಲ್ಲಿ ಒಂದು ಅಂಶವಾಗಿದೆ ಎಂಬುದನ್ನು ನಿರಾಕರಿಸಲಾಗುವುದಿಲ್ಲ, ಆದರೆ ಈ 'ವಿದ್ಯಮಾನ' ಎಂಬುದೇ ಮೋದಿ ನೇತೃತ್ವದಲ್ಲಿ ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟವನ್ನು ಬರುವ ಮೇ ತಿಂಗಳಲ್ಲಿ ಅಧಿಕಾರದ ಗದ್ದುಗೆಯನ್ನೇರಿಸುತ್ತದೆ ಎಂದೂ ಹೇಳಲಾಗುವುದಿಲ್ಲ.

ಈ ವಾರ ರಾಜ್ಯದಲ್ಲಿರುವ ನೂರಾರು ಮೂಲಗಳಿಂದ, ರಾಜ್ಯದ ಹೊರಗೆ ಇರುವ ಸಂಪರ್ಕಗಳಿಂದ, ಈಗಾಗಲೇ ಪ್ರಕಟಗೊಂಡಿರುವ ಸಮೀಕ್ಷೆಗಳಿಂದ, ವಿವಿಧ ರಾಜಕೀಯ ತಜ್ಞರಿಂದ ಮಾಹಿತಿಯನ್ನು ಸಂಗ್ರಹಿಸಿ, ನಮ್ಮದೇ ಆದ ವಿಶ್ಲೇಷಣೆಯನ್ನು ಮಾಡಿ ಎರಡು ಸಮೀಕ್ಷೆಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ.

ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿರುವ ರಾಜಕೀಯ ಪಕ್ಷಗಳು, ಅವುಗಳ ಬೆಂಬಲಿಗ ವರ್ಗ, 'ಮೋದಿ ಫ್ಯಾಕ್ಟರ್' ಇತ್ಯಾದಿಗಳನ್ನು ಆಧರಿಸಿ ಡಾ.ಎಚ್.ವಿ.ವಾಸು ಅವರು ಬರೆದಿರುವ ಒಂದು ವಿಶ್ಲೇಷಣೆ ಇದೇ ಸಂಚಿಕೆಯಲ್ಲಿದೆ.

ಹಾಗೆಯೇ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿರುವ ಸ್ಥಿತಿಗತಿ, ಅಭ್ಯರ್ಥಿಗಳ ಸಾಮರ್ಥ್ಯ, ಪಕ್ಷಗಳ ಬಲಾಬಲ, ಜಾತಿಗಳ ಒಳವು, ಪಕ್ಷಗಳಿಗಿರುವ ಅನುಕೂಲ ಅಥವಾ ಅನಾನುಕೂಲಗಳನ್ನು ಪರಿಗಣಿಸಿ ಎಲ್ಲಾ ಕ್ಷೇತ್ರಗಳಲ್ಲಿ ಇರುವ ಪೈಪೋಟಿಯ ಬಗ್ಗೆ ಮತ್ತು ಯಾರು ಗೆಲ್ಲಬಹುದು ಎಂಬ ಅಂದಾಜನ್ನೂ ಈ ಸಂಚಿಕೆಯಲ್ಲಿ ನೀಡಿದ್ದೇವೆ.

ಮೋದಿ ಪ್ರಚಾರಕ್ಕೆಂದು ಬಿಜೆಪಿ ವೆಚ್ಚ ಮಾಡುತ್ತಿರುವುದು 5,000 ಕೋಟಿ ರೂಪಾಯಿ

ಪ್ರತಿದಿನ ಬಹುತೇಕ ಪ್ರಮುಖ ಪತ್ರಿಕೆಗಳ ುಖಪುಟದಲ್ಲಿ ನರಹಂತಕ ನರೇಂದ್ರ ಮೋದಿಯ ೂತಿ ದೊಡ್ಡದಾಗಿ ಮುದ್ರಣಗೊಂಡಿರುತ್ತದೆ. ದಿಲ್ಲವೆಂದರೆ ಒಳಗಡೆ ಕನಿಷ್ಠ ಐದು ಹೀರಾತುಗಳಲ್ಲಾದರೂ ಆತನ ರ್ಶನ'ವಾಗುತ್ತದೆ.

ಅಷ್ಟೇ ಅಲ್ಲ, ಯಾವುದೇ ಟಿವಿ ಚಾನೆಲ್ ಆನ್ ಾಡಿದರೆ ಕೆಲವೇ ನಿಮಿಷಗಳಲ್ಲಿ ಆತನ ಮುಖ ರದೆಯ ಮೇಲೆ ಪ್ರಕಟಿಸುತ್ತದೆ. ಎಫ್‌ಎಂ ೇಡಿಯೋ ಆನ್ ಮಾಡಿದರೂ ಕೆಲ ಹೊತ್ತಿನ ಂತರ ಬಿಜೆಪಿ ಭಜನೆ ಶುರುವಾಗುತ್ತದೆ.


ಇನ್ನು ದೇಶದಾದ್ಯಂತ ಎಲ್ಲಾ ನಗರಗಳ ುಮುಖ ಸ್ಥಳಗಳಿಂದ ಆತನ ಕ್ರೂರಮುಖ ರಸ್ತೆಯ ೇಲೆ ಚಲಿಸುತ್ತಿರುವ ಎಲ್ಲರ ಮೇಲೆ ನಿಗಾ ್ಟಿರುತ್ತದೆ. ಅಂತರಜಾಲದಲ್ಲಂತೂ ಆತನ ಭಕ್ತರು ಗಲೂ ರಾತ್ರಿ ಆತನ ಆಲಾಪನೆಯಲ್ಲಿ ರತರಾಗಿರುತ್ತಾರೆ. ಆತನ ಈ ಭಕ್ತರು ತಮ್ಮ ಜೆಗೆಂದು ಯಾವುದೇ ಆರ್ಥಿಕ ಪ್ರತಿಫಲ ನಿರೀಕ್ಷಿಸುತ್ತಿಲ್ಲ, ಆದರೆ ಪತ್ರಿಕೆ, ಟಿವಿ, ಹೋರ್ಡಿಂಗ್, ಇತ್ಯಾದಿಗಳಲ್ಲಿ ಮೋದಿ ಪ್ರಚಾರಕ್ಕೆಂದು ಈ ಚುನಾವಣೆಯಲ್ಲಿ ಬಿಜೆಪಿ ವೆಚ್ಚ ಮಾಡುತ್ತಿರುವುದು ಬರೋಬ್ಬರಿ 5,000 ಕೋಟಿ ರೂಪಾಯಿಗಳು.

ಎಷ್ಟರ ಮಟ್ಟಿಗೆ ಚೆಡ್ಡಿಗಳು ಎಲ್ಲಾ ಸಾರ್ವಜನಿಕ ಸ್ಥಳಗಳನ್ನು ಆಕ್ರಮಿಸಿಕೊಂಡಿದ್ದಾರೆಂದರೆ ಇತರೆ ಪಕ್ಷಗಳಿಗೆ ಮತ್ತು ಅವುಗಳ ಅಭ್ಯರ್ಥಿಗಳಿಗೆ ತಮ್ಮ ಜಾಹೀರಾತನ್ನು ಹಾಕಲು ಜಾಗವೇ ಇಲ್ಲದಂತಾಗಿದೆ. ಆ ಕಾರಣಕ್ಕೆ ಬರೋಡಾದಲ್ಲಿ ಮೋದಿ ವಿರುದ್ಧ ನಿಂತಿರುವ ಕಾಂಗ್ರೆಸ್‌ನ ಮಿಸ್ತ್ರಿ ಮೋದಿಯ ಪೋಸ್ಟರ್ ಒಂದನ್ನು ಹರಿದು ಹಾಕಿ ಆ ಜಾಗೆಯಲ್ಲಿ ತಮ್ಮ ಪೋಸ್ಟರ್ ಹಾಕುವ ಪ್ರಯತ್ನ ಮಾಡಿದ್ದು.

ಅದೇನೇ ಇರಲಿ, ಒಂದು ಮೂಲದ ಪ್ರಕಾರ ಪತ್ರಿಕೆ, ಟಿವಿ, ಹೋರ್ಡಿಂಗ್, ಇಂಟರ್‌ನೆಟ್ ಮತ್ತು ರೇಡಿಯೋಗಳಲ್ಲಿ ಜಾಹೀರಾತುಗಳನ್ನು ನೀಡಲೆಂದೇ ಬಿಜೆಪಿ 4,500 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದೆಯಂತೆ. ಅಷ್ಟಲ್ಲದೆ ಇನ್ನಷ್ಟು ಜಾಗಗಳಿದ್ದಲ್ಲಿ ಅಲ್ಲಿಯೂ ಜಾಹೀರಾತುಗಳನ್ನು ನೀಡಲು ಹೆಚ್ಚುವರಿಯಾಗಿ 500 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆಯಂತೆ.

ಚುನಾವಣೆ ಶುರುವಾಗುವುದಕ್ಕೂ ಮುನ್ನವೇ ಎಚ್ಚೆತ್ತುಕೊಂಡ ಬಿಜೆಪಿ ಮೂರು ತಿಂಗಳ ಮಟ್ಟಿಗೆ ದೇಶದಾದ್ಯಂತ 15,000 ಹೋರ್ಡಿಂಗ್‌ಗಳನ್ನು ಬುಕ್ ಮಾಡಿದೆ. ಇವು ಬಿಡಿಗಾಸಿಗೆ ಸಿಗುವಂತವಲ್ಲ, ಕೆಲವು ಕಡೆ ಒಂದು ಹೋರ್ಡಿಂಗ್ ಬಾಡಿಗೆ ತಿಂಗಳಿಗೆ 2-3 ಲಕ್ಷ ರೂಪಾಯಿಯಾದರೆ, ಮುಂಬೈನ ನಾರಿಮನ್ ಪಾಯಿಂಟ್ ತರಹದ ಜಾಗದಲ್ಲಿ ಅವುಗಳ ತಿಂಗಳ ಬಾಡಿಗೆ 20 ಲಕ್ಷ ರೂಪಾಯಿಗಳಾಗುತ್ತದೆ.

ಹಾಗೆಯೇ ಪ್ರಮುಖ ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಯ ಪತ್ರಿಕೆಗಳಲ್ಲಿ ಬಿಜೆಪಿ 40 ದಿನಗಳ ಕಾಲಕ್ಕೆ ಜಾಗೆಗಳನ್ನು ಬುಕ್ ಮಾಡಿಟ್ಟುಕೊಂಡಿದೆ. ಇದಕ್ಕೆ ಬಿಜೆಪಿ ಪತ್ರಿಕೆಗಳ ಮಾಲೀಕರಿಗೆ ಕೊಡುತ್ತಿರುವ ಒಟ್ಟು ಮೊತ್ತ 500 ಕೋಟಿ ರೂಪಾಯಿಗಳು. ಪತ್ರಿಕೆಗಳಲ್ಲದೆ ಮ್ಯಾಗಜೀನ್‌ಗಳಿಗೂ 150 ಕೋಟಿ ರೂಪಾಯಿಗಳ ಜಾಹಿರಾತುಗಳನ್ನು ಬಿಡುಗಡೆ ಮಾಡುತ್ತಿದೆ.




ಹಿಂದಿ, ಇಂಗ್ಲಿಷ್ ಮತ್ತು ವಿವಿಧ ಭಾಷೆಗಳ ಟಿವಿ ಚಾನೆಲ್‌ಗಳಲ್ಲಿ ಬಿಜೆಪಿ ದಿನಕ್ಕೆ 2,000 ಜಾಹಿರಾತುಗಳನ್ನು ಬಿತ್ತರಿಸುತ್ತಿದೆ. ಜನಪ್ರಿಯ ಟಿವಿ ಚಾನೆಲ್‌ಗಳಲ್ಲಿ 30 ಸೆಕೆಂಡುಗಳ ಜಾಹಿರಾತಿನ ಬೆಲೆ ಒಂದು ಲಕ್ಷ ರೂಪಾಯಿ. ಟಿವಿ ಚಾನೆಲ್ ಜಾಹಿರಾತಿಗೆಂದು ಬಿಜೆಪಿ ಎತ್ತಿಟ್ಟಿರುವುದು 800-1,000 ಕೋಟಿ ರೂಪಾಯಿಗಳು. ಇತ್ತೀಚೆಗೆ ನಡೆದ ಟ್ವೆಂಟಿ 20 ವರ್ಲ್ಡ್ ಕಪ್ ಸಂದರ್ಭದಲ್ಲೂ ಜಾಹಿರಾತಿಗೆ ಬಿಜೆಪಿ ವೆಚ್ಚ ಮಾಡಿದ್ದು 150 ಕೋಟಿ ರೂಪಾಯಿಗಳು.

ಒಬ್ಬ ಸರ್ವಾಧಿಕಾರಿ, ಕೊಲೆಗಡುಕ, ಮಹಿಳಾ ಪೀಡಕನನ್ನು ಪ್ರಧಾನಿ ಮಾಡಲು ನಮ್ಮ ದೇಶದ ಪ್ರಮುಖ ಪಕ್ಷವೊಂದು ಇಷ್ಟೊಂದು ಹಣ ವೆಚ್ಚ ಮಾಡುತ್ತದೆಂದರೆ ಆತ ಎಷ್ಟು ವಿರೋಧವನ್ನು ಎದುರಿಸುತ್ತಿದ್ದಾನೆ ಎಂಬುದರ ಸೂಚನೆ ಅಲ್ಲವೇ?!

ಕೆನರಾ: ಅಮುಲ್ ಬೇಬಿಗೆ ಆಟ; ಕ್ರಿಮಿನಲ್ ಬೇಬಿಗೆ ಪ್ರಾಣಸಂಕಟ!

ಉತ್ತರ ಕನ್ನಡ "ಲೋಕಕಣ"ದಲ್ಲಿ ಬಿಜೆಪಿ ನಿಶ್ಶಸ್ತ್ರವಾಗಿದೆ! ಬಿಜೆಪಿಯ ಅಧಿಕಪ್ರಸಂಗಿ ಅಭ್ಯರ್ಥಿ ಅನಂತ ಹೆಗಡೆ ಅಲಿಯಾಸ್ ಅನಂತ್ಮಾಣಿಗೆ ಹೋದಹೋದಲ್ಲಿ ಅಪಶಕುನವೇ ಎದುರಾಗುತ್ತಿದೆ. ಈ ಜನರ ತಿರಸ್ಕಾರಕ್ಕೆ ತುತ್ತಾಗಿರುವ ಅಯೋಗ್ಯ ಹುರಿಯಾಳನ್ನು ಮುಂದಿಟ್ಟುಕೊಂಡು ಮತ ಕೇಳಿದರೆ ಠೇವಣಿಯೂ ಸಿಗದೆಂಬ ಕಟು ವಾಸ್ತವ ಸಂಘಪರಿವಾರದ ಸರದಾರರಿಗೆ ಖಾತ್ರಿಯಾಗಿದೆ. ಹೀಗಾಗಿ ಬಿಜೆಪಿಯ ಬಹಾದ್ದೂರ್ ಪ್ರಚಾರಕರೆಲ್ಲ "ನಮೋ ನಮ... ನಮೋ ನಮಃ" ಎಂದು ಚಡಪಡಿಸುತ್ತಿದ್ದಾರೆ. ಆದರೆ ಪಟ್ಟಣಗಳಲ್ಲಿ ಹಾಕಿರುವ ಫ್ಲೆಕ್ಸ್‌ಗಳಲ್ಲಿ ಬಿಟ್ಟರೆ ಕ್ಷೇತ್ರದ ಮತ್ತೆಲ್ಲೂ ಮೋದಿ ಮೇನಿಯಾನೂ ಇಲ್ಲದಾಗಿದೆ.



ಅನಂತ್‌ಕುಮಾರ್ ಹೆಗಡೆ

ಕಳೆದ ಬಾರಿಯೇ ಉತ್ತರ ಕನ್ನಡಿಗರು ಅನಂತ್ಮಾಣಿ ಎಂಬ ವೇಸ್ಟ್ ಎಂಪಿಯನ್ನು ಮನೆಗಟ್ಟಲು ಪ್ರಯತ್ನಿಸಿದ್ದರು. ಆದರೆ ಕ್ಷೇತ್ರ ವ್ಯಾಪ್ತಿಯ ಖಾನಾಪುರ-ಕಿತ್ತೂರು ಭಾಗದಲ್ಲಿದ್ದ ಲಿಂಗಾಯತರು ಯಡ್ಡಿಗಾಗಿ ಬಿಜೆಪಿ ಕೈಹಿಡಿದಿದ್ದರು. ಹೀಗಾಗಿ ನಾಲಾಯಕ್ ಮಾಣಿ ದಿಲ್ಲಿಗೆ ಹಾರುವ ಅದೃಷ್ಟ ಪಡೆದಿದ್ದ. ಈ ಅನಂತ್ಮಾಣಿಯ ಗೆಲುವೆಂದರೆ ಉತ್ತರ ಕನ್ನಡದ ದುರಾದೃಷ್ಟವೇ ಸರಿ. ಹೀಗಾಗಿ ಈಗ ಮತ್ತೆ ಮತದಾರರು ಮಾಣಿಗೆ ಸೋಲಿಸಲು ಸಿದ್ಧರಾಗಿದ್ದಾರೆ, ಬದಲಾವಣೆಗಾಗಿ ಕಾತರಿಸುತ್ತಿದ್ದಾರೆ. ಮಾಣಿಗೆ ಸೆಡ್ಡು ಹೊಡೆದಿರುವ ಕಾಂಗ್ರೆಸ್‌ನ ಅಮುಲ್ ಬೇಬಿ ಪ್ರಶಾಂತ ದೇಶಪಾಂಡೆಗೆ ಒಂದು ಅವಕಾಶ ಕೊಡಲು ತೀರ್ಮಾನಿಸಿದ್ದಾರೆ. ಸುಶಿಕ್ಷಿತ-ನಯ-ವಿನಯದ ಪ್ರಶಾಂತ ದುರಹಂಕಾರಿ-ಕರ್ಮಗೇಡಿ-ಅರೆಶಿಕ್ಷಿತ ಹೊಡಿ-ಬಡಿ ಬುದ್ಧಿಯ ಮಾಣಿಗಿಂತ ಬೆಟರ್ ಎಂಬ ಭಾವನೆ ಕ್ಷೇತ್ರದಲ್ಲಿ ಮೂಡಿದೆ. ತನ್ನ ಮೂತಿಗಿಕ್ಕಲು ಮತದಾರರು ಅಣಿಯಾಗಿರುವುದು ಸ್ವತಃ ಅನಂತ್ಮಾಣಿಗೇ ಅರ್ಥವಾಗಿ "ಮೋದಿಗೆ... ಹಿಂದೂತ್ವಕ್ಕೆ.... ವೋಟು ಕೊಡಿ... ನಂಗೆ ಬೇಡ..." ಎನ್ನುತ್ತಿದ್ದಾನೆ.


ಅಲ್ಲಿಗೆ ಹೈರಾಣಾಗಿರುವ ಬಿಜೆಪಿಯ ಮಾಣಿ ಮಕಾಡೆ ಮಲಗುವುದು ಗ್ಯಾರಂಟಿ ಆಗಿಹೋಗಿದೆ. ಅನಂತ್ಮಾಣಿಯ ಹದಿನಾಲ್ಕು ವರ್ಷದ ಎಂಪಿಗಿರಿ ಪರ್ವವೆಂದರೆ, ಉತ್ತರ ಕನ್ನಡದ ಪಾಲಿಗೆ ಬಿಜೆಪಿಗಳ ಮರ್ಯಾದಾ ಪುರುಷೋತ್ತಮ ರಾಮ ಅನುಭವಿಸಿದ್ದಕ್ಕಿಂತ ಘೋರವಾದ ವನವಾಸ-ಉಪವಾಸದ "ಸಂಧಿಕಾಲ!" ಈ ಮಾಣಿ ದೇಶಭಕ್ತಿಯ ಮಾತಾಡುತ್ತಲೇ ಸರ್ಕಾರದ- ದೇಶದ ಸೊತ್ತಾದ ಅಮೂಲ್ಯವಾದ ನೂರಾರು ಎಕರೆ ಆರಣ್ಯ ಕಬಳಿಸಿ ಸಮೃದ್ಧ ಅಡಿಕೆ ತೋಟ ಮಾಡಿಕೊಂಡಿದ್ದಾನೆ. ಪರಿಶುದ್ಧತೆಯ ಭಾಷಣ ಬಿಗಿಯುತ್ತಲೇ ತನ್ನ "ಕದಂಬ" ಎಂಬ ಚಾರಿಟೇಬಲ್ ಟ್ರಸ್ಟ್ ಮುಖಾಂತರ ಸಂಸದರ ನಿಧಿ ವಿನಿಯೋಗಿಸಿ ಭರ್ಜರಿ ಪರ್ಸೆಂಟೇಜ್ ಸ್ವಾಹಾ ಮಾಡಿದ್ದಾನೆ.

ಹೆಂಡತಿಗೇ ಆಪ್ತ ಸಹಾಯಕಿ ಎಂದು ದಾಖಲೆ ಸೃಷ್ಟಿಸಿ ಪ್ರತಿ ತಿಂಗಳು 30 ಸಾವಿರ ಡ್ರಾ ಮಾಡಿದ್ದಾನೆ. ತಿರುಬೋಕಿಯಾಗಿದ್ದ-ಬೀದಿ ಬಡಿದಾಟಗಾರನಾಗಿದ್ದ ತನಗೆ ರಾಜಕೀಯ ದೀಕ್ಷೆ ನೀಡಿದ್ದ ಡಾ. ಚಿತ್ತರಂಜನ್ ಹತ್ಯೆಯ ತನಿಖೆಗೆ ಈತ ಎಂದೂ ಪ್ರಾಮಾಣಿಕವಾಗಿ ಪ್ರಯತ್ನವೇ ಮಾಡಲಿಲ್ಲ, ರಂಜನ್ ಸಾವು ನಿಗೂಢವಾಗಿದ್ದರೇನೇ ತನಗೆ ಲಾಭ-ಅದರ ತನಿಖೆಯಾದರೆ ತನಗೆ ಉರುಳಾದೀತೆಂಬ ಭಯ ಆತನದಾಗಿತ್ತು, ಚಿತ್ತರಂಜನ್‌ರ ಮೊದಲ ಮೂರ್‍ನಾಲ್ಕು ಪುಣ್ಯತಿಥಿಯಂದೇ ಭಟ್ಕಳದಲ್ಲಿ "ಅನಂತ್ ಕುಮಾರ್ ಹೆಗಡೆಯೇ ಡಾ. ಚಿತ್ತರಂಜನ್ ಕೊಲೆಗಡುಕ..." ಎಂಬ ಗೋಡೆಬರಹ, ಪೋಸ್ಟರ್‌ಗಳು ರಾತ್ರಿ ಬೆಳಗಾಗುವುದರಲ್ಲಿ ಪ್ರತ್ಯಕ್ಷ ಆಗುತ್ತಿದ್ದುದ್ದು ಆತನ ಅಸಲೀ ಹಿಂದೂತ್ವದ ಅನಾವರಣ ಮಾಡಿದ್ದವು.

ಈ ಅನಂತ್ ಮಾಣಿಯಷ್ಟು ಜನರಿಂದ ಬೈಸಿಕೊಳ್ಳುತ್ತಿರುವ ಎಂಪಿ ರಾಜ್ಯದಲ್ಲಿ ಮತ್ತೊಬ್ಬನಿಲ್ಲ, ಮತಾಂಧ ಮಸಲತ್ತು, ತೋಟಗಾರಿಕಾ ಬೆಳೆಯ ಅಭಿವೃದ್ಧಿ-ಪ್ರಗತಿಯ ಬೊಗಳೆ, ಆವೇಶದ ಮಾತುಗಾರಿಕೆ ಬಿಟ್ಟರೆ ಮಾಣಿಗೆ ಜಿಲ್ಲೆಯ ಆಳ-ಅಗಲ, ಸಂಸ್ಕೃತಿ-ಸಂಸ್ಕಾರ ಒಂದೂ ಗೊತ್ತಿಲ್ಲ, ಈತ ಅದೆಂಥ ಬಂಡಲ್‌ಬಾಜಿ ಪುಢಾರಿಯೆಂದರೆ, ಮೈಲೇಜ್ ಪಡೆಯಲು "ಸುಭಾಸ್‌ಚಂದ್ರ ಬೋಸ್ ಫ್ಯಾಮಿಲಿಯವರ ಕಂಡುಹಿಡಿದಿದ್ದೇನೆಂದು" ಸ್ಟೇಟ್‌ಮೆಂಟ್ ಒಗಾಯಿಸಿ ಹಾಸ್ಯಾಸ್ಪದನಾಗಿದ್ದ. ಬೋಸ್ ಕುಟುಂಬಸ್ಥರನ್ನು ಸಂಧಿಸಿದ ಸಂಘಟನೆಯವರು ಈತನ ಮಾತಿಗೆ ಉಗಿದಾಗ ತೆಪ್ಪಗಾಗಿದ್ದ ಗ್ರಾಮ ಪಂಚಾಯ್ತಿ ಮೆಂಬರಿಕೆಗೂ ನಾಲಾಯಕ್ ಆಗಿರುವ ಈ ಮಾಣಿ ನಾಲ್ಕು ಸಲ ಎಂಪಿಯಾಗಿದ್ದು ಕೆನರಾದ ದೌರ್ಭಾಗ್ಯ.

ಈಗ ಅನಂತ್ಮಾಣಿಯ ವಿರುದ್ಧ ಕಾಂಗ್ರೆಸ್ ಕ್ಯಾಂಡಿಡೇಟ್ ಆಗಿರುವುದು ಆರ್.ವಿ. ದೇಶಪಾಂಡೆಯ ಪುತ್ರ ಪ್ರಶಾಂತ್! ಹೀಗಾಗಿ ಮಾಣಿಯ ತಲೆ ಈ ಬಾರಿ ಕೆಟ್ಟಿದೆ. ದೇಶಪಾಂಡೆ ಮೇಲಾತ ಹಿಗ್ಗಾ-ಮುಗ್ಗಾ ದಾಳಿ ಮಾಡುತ್ತಿದ್ದಾನೆ. ಪ್ರಶಾಂತನನ್ನು ಮೂದಲಿಸಿ ಮೋಕಳಿಕ್ ಆಗುತ್ತಿದ್ದಾನೆ. ಇದೆಲ್ಲ ಮಾಣಿ ಹತಾಶನಾಗಿರುವುದನ್ನು ಸಾಬೀತುಪಡಿಸುತ್ತಿದೆ. ಆದರೆ ಅಮೆರಿಕದಲ್ಲಿ ಉನ್ನತ ಕಾನೂನು ವಿದ್ಯಾಭ್ಯಾಸ ಮಾಡಿರುವ, ಪ್ರಜಾಪ್ರಭುತ್ವದ ಆಶಯ ಅರಿತಿರುವ, ಎಂಪಿಯಾದರೆ ಏನೆಲ್ಲ ಕೆಲಸ-ಕರ್ತವ್ಯಗಳಿವೆ ಎಂಬುದನ್ನು ಅಭ್ಯಾಸ ಮಾಡಿರುವ ಜನಪರ ತುಡಿತದ ಪ್ರಶಾಂತ್ ದೇಶಪಾಂಡೆ ಮಾಣಿ ಮೇಲೆ ಮುಗಿಬೀಳದೆ ತಣ್ಣಗೆ ಪ್ರಚಾರ ಮಾಡುತ್ತಿದ್ದಾರೆ. ಎದುರಾಳಿಗಳ ಯೋಗ್ಯತೆ-ನಡೆ-ನುಡಿ-ಬದ್ಧತೆ ತೂಗಿ ನೋಡುತ್ತಿರುವ ಮತದಾರ ಪ್ರಶಾಂತನ ಮೇಲೆ ಭರವಸೆಯ ನೋಟ ನೆಟ್ಟಿದ್ದಾರೆ.

ಈ ಪ್ರಶಾಂತ ದೇಶಪಾಂಡೆಗೆ ಜನಸೇವಕನಾಗುವ ತುಡಿತ-ಮಿಡಿತವಿದೆ. ಜಿಲ್ಲೆಯ ಅಭಿವೃದ್ಧಿ-ಸಮಸ್ಯೆ-ಸಂಪನ್ಮೂಲಗಳ ಅರಿವಿದೆ. ಆತನಲ್ಲಿ ಕ್ಷೇತ್ರದ ಪ್ರಗತಿಯ ಬಗ್ಗೆ ಒಳನೋಟವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈತನಿಗೆ ದೊಡ್ಡ ದೇಶಪಾಂಡೆಯಂತೆ ದರ್ಪ ಇಲ್ಲ, ಜನರೊಂದಿಗೆ ಸಹಜವಾಗಿ ಬೆರೆವ ಈತ ಮಂತ್ರಿ ದೇಶಪಾಂಡೆಯ ಉದ್ಧಟತನ ಬೆಳೆಸಿಕೊಂಡಿಲ್ಲ! ಈತ ಸಂಸದನಾದರೆ ಏನೋ ಒಂಥರಾ ಬದಲಾವಣೆ ಆಗಬಹುದೇನೋ ಎಂಬ ಜನಾಭಿಪ್ರಾಯ ಮೂಡಿದೆ!




ವಿಶ್ವೇಶ್ವರ ಹೆಗಡೆ ಕಾಗೇರಿ

"ಊಟಕ್ಕೆ ಮರೀಬೇಡಿ; ಕೆಲ್ಸಕ್ಕೆ ಕರೀಬೇಡಿ" ಬದ್ಧತೆಯ ಬಿಜೆಪಿ ಕ್ಯಾಂಡಿಡೇಟ್ ಅನಂತ್ಮಾಣಿಗೆ ಹೋಲಿಸಿದರೆ ಜನಪರ ಕೆಲಸ ಮಾಡುವ-ಜಿಲ್ಲೆಗೊಂದು ನಾಯಕತ್ವ ಕೊಡುವ ಯೋಚನೆಯ ಪ್ರಶಾಂತ್ ಗೆಲ್ಲುವ ಸಾಧ್ಯತೆಯೇ ಹೆಚ್ಚು, ಆತನ ತಂದೆ-ಮಂತ್ರಿ ದೇಶಪಾಂಡೆಗಿದು ಪ್ರತಿಷ್ಠೆಯ ಸಮರ. ಮಗನನ್ನು ಗೆಲ್ಲಿಸಲು ಈ ತಳದ ಸ್ಟ್ರೆಟಜಿಸ್ಟ್ ತರಹೇವಾರಿ ಸ್ಕೆಚ್‌ಗಳನ್ನು ಹಾಕಿದ್ದಾರೆ. ಜೆಡಿಎಸ್‌ನಿಂದ ನಾಮಪತ್ರ ಕೊಟ್ಟಿದ್ದ ಅಸಲೀ ಚೆಡ್ಡಿ ಚತುರ ಶಿವಾನಂದ ನಾಯ್ಕ್ ರಣರಂಗದಿಂದ ಓಡಿಹೋಗಿದ್ದು ಕಾಂಗ್ರೆಸ್‌ಗೆ ಅನುಕೂಲ ಮಾಡಿಕೊಟ್ಟಿದೆ. ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಬಿಟ್ಟು ಬೇರೆ ಆಯ್ಕೆ ಇಲ್ಲ, ಮೋದಿ ಫ್ಲೆಕ್ಸ್‌ನಲ್ಲಿರುವ "ಭಯೋತ್ಪಾದಕ ಹುಲಿ" ಚಿತ್ರ ಕಂಡೇ ಕಂಗಾಲಾಗಿರುವ ಅಲ್ಪಸಂಖ್ಯಾತರು ಬಿಜೆಪಿಯ ಮಾಣಿಗೆ ಮತ ಕೊಡಲು ಸಾಧ್ಯವಾ?! ಮಾಣಿಯ ದ್ರೋಹ-ವಂಚನೆಯಿಂದ ಕ್ರಿಮಿನಲ್‌ಗಳಾಗಿ ಒದ್ದಾಡುತ್ತಿರುವ ಹಿಂದೂ ಜಾಗರಣಾ ವೇದಿಕೆಯ ಪ್ರಬಲ ದೀವರ ಸಹಚರರೇ ಈಗಾತನಿಗೆ ತಿರುಗಿಬಿದ್ದಿದ್ದಾರೆ.



ಪ್ರಶಾಂತ್ ದೇಶಪಾಂಡೆ

ಕಾರವಾರ ಕ್ಷೇತ್ರದ ಎರಡು ಶಕ್ತಿಶಾಲಿ ಮತ್ತು ಪರಂಪರಾಗತ ವಿರೋಧಿಗಳಾದ ದೀವರು (ಈಡಿಗರು) ಮತ್ತು ಹೈಗರು (ಬ್ರಾಹ್ಮಣರು) ದೇಶಪಾಂಡೆ ಮೇಲೆ ಮುನಿಸಿಕೊಂಡಿದ್ದಾರೆ. ಇದರಲ್ಲಿ ದೀವರ ವೋಟಲ್ಲಿ ಒಂದು ಪಾಲಾದರೂ ಕಾಂಗ್ರೆಸ್‌ಗೆ ಬರಬಹುದು. ಆದರೆ ಬ್ರಾಹ್ಮಣರ ಒಂದೇ ಒಂದು ಮತ ಬಿಜೆಪಿ ಬಿಟ್ಟು ಕದಲದು. ಬಿಜೆಪಿ ಹುರಿಯಾಳು ಅನಂತ್ಮಾಣಿ ಮೇಲೆ ಅದೆಂಥ ಬ್ರಹ್ಮಾಂಡ ಬೇಸರವಿದ್ದರೂ ಹೈಗರು ಜನಿವಾರ ಪ್ರತಿಷ್ಠೆಗಾಗಿ ಬಿಜೆಪಿಗೇ ಬೆಂಬಲಿಸಿದ್ದಾರೆ! ಕೊಂಕಣಿ ಬ್ರಾಹ್ಮಣ ದೇಶಪಾಂಡೆ ಖಾನ್‌ದಾನ್ ವಿರುದ್ಧ ಈ ಚೆಡ್ಡಿ ಬಳಗ ತಿರುಗಿ ಬಿದ್ದಿದೆಯಾದರೂ ಇವರಿಗಿಂತ ಕಟ್ಟರ್ ಆರೆಸ್ಸೆಸ್ ಭಕ್ತರಾದ ಕೊಂಕಣಿಗರು ಮಾತ್ರ ಈ ಸಲ ಹಿಂದೂತ್ವಕ್ಕೆ ತಿಲಾಂಜಲಿ ಇಟ್ಟು "ಕೊಂಕಣಿತ್ವ"ಕ್ಕೆ ಬದ್ಧರಾಗಿದ್ದಾರೆ. ಹೀಗಾಗಿ ಸುಮಾರು 50 ಸಾವಿರ ದಷ್ಟಿರುವ ಈ ಜಿಎಸ್‌ಬಿ ಮತದಲ್ಲಿ ಶೇ. 98 ರಷ್ಟು ಕಾಂಗ್ರೆಸ್‌ಗೆ ಖಾತ್ರಿ. ಬಿಜೆಪಿಯ ನಿಷ್ಠಾವಂತ ಇಲೆಕ್ಷನ್ ವರ್ಕರ್ಸ್‌ಗಳಾಗಿದ್ದ ಕೊಂಕಣಿಗಳು ಈ ಸಲ ಮಾಣಿ ಹಿಂದೆ-ಮುಂದೆ ಕಾಣಿಸುತ್ತಿಲ್ಲ! ಭಯಾನಕ ಕುಂಕುಮದ ನಾಮ ಎಳೆದುಕೊಂಡು ಅಂಡಲೆಯುತ್ತಿದ್ದ ಪಡೆಯೂ ಕಣ್ಮರೆಯಾಗಿದೆ.



ಆರ್.ವಿ. ದೇಶಪಾಂಡೆ

ಆರಂಭದಲ್ಲಿ ದೀವರ ಬಾಹುಳ್ಯದ ಭಟ್ಕಳ ಅಸೆಂಬ್ಲಿ ಕ್ಷೇತ್ರದಲ್ಲಿ ತುಂಬ ಹಿಂದೆ ಬಿದ್ದಿದ್ದ ದೇಶಪಾಂಡೆ ತಂಡ ಈಗ ಚೇತರಿಸಿಕೊಂಡಿದೆ. ದೀವರೇತರರು ಮತ್ತು ಅಲ್ಪಸಂಖ್ಯಾತರ ಮತ ಸಾರಾಸಗಟಾಗಿ ಬಾಚುವ ಕಾಂಗ್ರೆಸ್‌ನ ಪ್ರಶಾಂತ್ ಬಿಜೆಪಿಯ ಮಾಣಿಯ ಈ ಗತ ವೈಭವದ ಕರ್ಮಭೂಮಿಯಲ್ಲಿ ಲೀಡ್ ಪಡೆಯಲಿದ್ದಾರೆ. ಪಕ್ಕದ ಕುಮಟಾ ಅಸೆಂಬ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕಿ ಶಾರದಾ ಶೆಟ್ಟಿ ಮತ್ತಾಕೆಯ ಮಗ-ಡೀಫ್ಯಾಕ್ಟೋ ಶಾಸಕ ರವಿಕುಮಾರ್ ಶೆಟ್ಟಿ ತೋರಿಕೆಗಷ್ಟೇ ಕೆಲಸ ಮಾಡುತ್ತಿದ್ದಾರೆ. ಈ ತಾಯಿ-ಮಗ ಮ್ಯಾಗಿಯಜ್ಜಿಯ ಗ್ಯಾಂಗ್‌ಸ್ಟರ್‌ಗಳು. ಹಾಗೆಯೇ ದೇಶಪಾಂಡೆಯ ನಿಷ್ಠಾವಂತರಾದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹೊನ್ನಪ್ಪ ನಾಯಕ್ ಮತ್ತು ಜಿಪಂ ಮಾಜಿ ಅಧ್ಯಕ್ಷ ಲಕ್ಷ್ಮಣ ಶಾನಭಾಗ್ ಫಂಡ್ ನುಂಗಿಕೊಂಡು ತೆಪ್ಪಗಿದ್ದಾರೆ. ಇಷ್ಟಾದರೂ ಬಿಜೆಪಿ ಅಭ್ಯರ್ಥಿ ವಿರೋಧಿ ಗಾಳಿಯೇ ಪ್ರಬಲವಾಗಿರುವುದರಿಂದ ಇಲ್ಲೂ ಕಾಂಗ್ರೆಸ್ ಮೇಲ್ಕೈ ಸಾಧಿಸಲಿದೆ.


ಮಂತ್ರಿ ದೇಶಪಾಂಡೆ ತನ್ನ ಶಕ್ತಿ ಕೇಂದ್ರೀಕರಿಸಿರುವುದು ಕಾರವಾರ, ಹಳಿಯಾಳ, ಖಾನಾಪುರ ಮತ್ತು ಕಿತ್ತೂರ ವಿಧಾನಸಭಾ ಏರಿಯಾದಲ್ಲಿ, ಕಾರವಾರ ಮತ್ತು ಹಳಿಯಾಳದಲ್ಲಿ ಬಿಜೆಪಿಗೆ ನೆಲೆಯಿಲ್ಲ, ಹಳಿಯಾಳ ದೇಶಪಾಂಡೆಯ ತವರೂರು. ಕಾರವಾರದಲ್ಲಿ ಬಿಜೆಪಿ ಪ್ರಚಾರಕ್ಕೆ ಕಾರ್ಯಕರ್ತರೇ ಇಲ್ಲದ ಪರಿಸ್ಥಿತಿಯಿದೆ. ಮೊದಮೊದಲು ಇಲ್ಲಿಯ ಪಕ್ಷೇತರ ಶಾಸಕ ಸತೀಶ್ ಸೈಲ್ ಜೈಲ್‌ನಿಂದಲೆ ದೇಶಪಾಂಡೆ ವಿರುದ್ಧ ಕಾರ್ಯಾಚರಣೆ ನಡೆಸಿದ್ದ, ಇದನ್ನರಿತ ದೇಶಪಾಂಡೆ ಅದು ಹೇಗೋ ಸೈಲ್‌ರನ್ನು ಸರಿಮಾಡಿಕೊಂಡಿದ್ದಾರೆ. ಈಗ ಸೈಲ್ ಮುಂದಿಯೇ ಪ್ರಚಾರ ಅಖಾಡಕ್ಕೆ ಧುಮುಕಿದ್ದಾರೆ. ಪ್ರಶಾಂತನ ಜೊತೆ ರೋಡ್ ಶೋ ನಡೆಸಿದ್ದಾರೆ. ಹೀಗಾಗಿ ಕಮ್ಮಿ ಎಂದರೆ 25 ಸಾವಿರ ಲೀಡ್ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡುವ ಲೆಕ್ಕಾಚಾರ ಹಾಕಲಾಗಿದೆ. ಹಳಿಯಾಳದ ಪಕ್ಕದ ಖಾನಾಪುರ-ಕಿತ್ತೂರ ಮೊದಲಿಂದ ದೇಶಪಾಂಡೆಗೆ ಹಿಡಿತವಿದೆ.

ಕಿತ್ತೂರಲ್ಲಿ ಕಾಂಗ್ರೆಸ್ ಎಮ್ಮೆಲ್ಲೆ ಡಿ.ಬಿ. ಇನಾಮದಾರ್ ದೇಶಪಾಂಡೆಯ ದೋಸ್ತ್, ಖಾನಾಪುರದ ಮರಾಠ ಮೋಡಿ ಮಾಡುವ ಕಲೆ ದೇಶಪಾಂಡೆಗೆ ಕರತಲಾಮಲಕವಾಗಿದೆ. ಹೀಗಾಗಿ ಈ ಎರಡೂ ಬೆಳಗಾವಿ ಜಿಲ್ಲೆಯ ಅಸೆಂಬ್ಲಿ ಕ್ಷೇತ್ರದಲ್ಲಿ ಬಿಜೆಪಿ 50 ಸಾವಿರಕ್ಕಿಂತ ಹೆಚ್ಚು ಹಿನ್ನಡೆ ಅನುಭವಿಸುವುದು ಗ್ಯಾರಂಟಿ. ಹಳಿಯಾಳ ಒಂದರಲ್ಲೇ "ನಮ್ಮೂರ ಹುಡುಗ" ಪ್ರಶಾಂತ್‌ಗೆ 35 ಸಾವಿರ ವೋಟು ಬಿಜೆಪಿಗಿಂತ ಜಾಸ್ತಿ ಬರಲಿದೆ. ಒಟ್ಟಿನಲ್ಲಿ ಅನಂತ್ಮಾಣಿ ಈ ಸಲ ಒಂದು ಲಕ್ಷ ಮತದಂತರದ ಹೀನಾಯ ಸೋಲು ಕಾಣುತ್ತಾನೆಂದೇ ಚರ್ಚೆ-ಬೆಟ್ಟಿಂಗ್ ನಡೆದಿದೆ!!


1996 ರಿಂದ ಎಮ್‌ಇಎಸ್ ಬಿಜೆಪಿ ಪರ ಒಲಿಯುತ್ತ ಬಂದಿತ್ತು. ಈ ಸಲ ಬೆಂಬಲಿಗ ಮರಾಠರಿಗೆ (1.80 ಲಕ್ಷ ವೋಟು) ಎಂಇಎಸ್‌ನವರು ಮತ ಸ್ವಾತಂತ್ರ್ಯ ನೀಡಿದ್ದಾರೆ. ಅಂದರೆ ಕಾಂಗ್ರೆಸ್‌ನ ದೇಶಪಾಂಡೆ ಪರ ಒಳಗೊಳಗೇ ಎಮ್‌ಇಎಸ್ ಶಾಸಕ ಪಾಟೀಲ ಜಾದೂ ನಡೆಸಿದ್ದಾರೆ. ಕಾಂಗ್ರೆಸ್‌ಗೆ ಹಿನ್ನಡೆಯಾಗುವುದು ಯಲ್ಲಾಪುರದಲ್ಲಿ, ಇಲ್ಲಿಯ ಕಾಂಗ್ರೆಸ್ ಶಾಸಕ-ಮ್ಯಾಗಿ ಶಿಷ್ಯ ಶಿವರಾಮ ಹೆಬ್ಬಾರ್ ಬಿಜೆಪಿಯ ಅನಂತ್ಮಾಣಿಯ ರಹಸ್ಯ ಮಿತ್ರ. ಕಳೆದ ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಅನಂತ್ಮಾಣಿ ಸ್ವ-ಪಾರ್ಟಿಯ ವಿ.ಎಸ್. ಪಾಟೀಲ್‌ಗೆ ದೋಖಾ ಕೊಡಲು ಸ್ವಜಾತಿ ಹೆಬ್ಬಾರ್‌ಗೆ ನೆರವಾಗಿದ್ದ. ಆ ಋಣ ಹೆಬ್ಬಾರ್ ತೀರಿಸುತ್ತಿದ್ದಾರೆ. ಅತ್ತ ಪಾಟೀಲ್ ಹಿಂದಿನ ಸೇಡು ಚುಕ್ತಾ ಮಾಡಿಕೊಳ್ಳಲು ಹೊಂಚು ಹಾಕಿದ್ದಾರೆ. ಹೈಗರ ಬಾಹುಳ್ಯದ ಕ್ಷೇತ್ರ ಇದಾದ್ದರಿಂದ ಬಿಜೆಪಿಗೇ ಇಲ್ಲಿ ಪ್ಲಸ್. ದೇಶಪಾಂಡೆಗೆ ಆತನ ಹವ್ಯಕ ಹಿಂಬಾಲಕರಾದ ಶಾಂತರಾಮ ಹೆಗಡೆ ವಗೈರೆ ಹೆಗಡೆ-ಭಟ್ಟಾದಿಗಳಿಂದ ಶಿರಸಿ-ಸಿದ್ದಾಪುರ ಮತ್ತು ಯಲ್ಲಾಪುರದಲ್ಲಿ ಲಾಭ ಏನೂ ಇಲ್ಲ, ಶಿರಸಿಯ ಬಿಜೆಪಿ ಶಾಸಕ ಕಾಗೇರಿ ಮತ್ತು ಅನಂತ್ಮಾಣಿ ಸಂಬಂಧ ಹಾಳಾಗಿ ಅದ್ಯಾವುದೋ ಕಾಲವಾಗಿದೆ. ಹಾಗೆಯೇ ಕಾಗೇರಿಗೆ ಮರಿ ದೇಶಪಾಂಡೆ ಪರ ಕೆಲಸ ಮಾಡಲಿದ್ದಾರೆ.

ನಿರ್ಣಾಯಕ ಸಂಖ್ಯೆಯಲ್ಲಿರುವ ಮೀನುಗಾರರು, ಒಕ್ಕಲಿಗರು, ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಮೇಲೆ ದೇಶಪಾಂಡೆಯ ಇಲೆಕ್ಷನ್ ಬ್ರಿಗೇಡ್ ಗಮನ ಕೇಂದ್ರೀಕರಿಸಿದೆ. ಮಜಾ ಅಂದರೆ, ಸೋಲು ಖಾತ್ರಿಯಾಗಿರುವ ಅನಂತ್ಮಾಣಿ ಪಾರ್ಟಿ ಫಂಡೇ ಬಿಚ್ಚುತ್ತಿಲ್ಲ, ಒಂದು ಕಾಲದಲ್ಲಿ ಭಯಾನಕ ಜಾತಿ ಲೆಕ್ಕಾಚಾರದ ಅಖಾಡವಾಗಿದ್ದ ಕೆನರಾ ಈಗ ಪಕ್ಕಾ ಸೆಕ್ಯುಲರ್ ಕ್ಷೇತ್ರ. ಸಮಬಲದಲ್ಲಿರುವ (1.50 ಲಕ್ಷ) ಹೈಗರು ಮತ್ತು ದೀವರ ಜಾತಿಯತೆ ಜಿದ್ದಾಜಿದ್ದಿ ಬಿಟ್ಟರೆ ಮತ್ತ್ಯಾರಲ್ಲೂ ಈ ದ್ವೇಷಾಸೂಯೆ ಇಲ್ಲ, ಧರ್ಮಕಾರಣ. ಅಲೆ ತಗ್ಗಿದೆ. ಎದ್ದಿರುವುದು ಬದಲಾವಣೆಯ ಪ್ರಚಂಡ ಬಿರುಗಾಳಿ; ಬಿಜೆಪಿಯ ಅಲ್ಪತನದ ಮಾಣಿಯನ್ನು ಮನೆಗಟ್ಟುವ ಸುನಾಮಿ. ಈ ಗಾಳಿಯಲ್ಲಿ ಕಾಂಗ್ರೆಸ್‌ನ ಪ್ರಶಾಂತ್ ದೇಶಪಾಂಡೆ ಪಾರ್ಲಿಮೆಂಟ್‌ಗೆ ತೇಲಿಹೋಗುವುದು ಖಂಡಿತ!

● ನಹುಷ




ಬೆಂಗಳೂರು ಉತ್ತರ
ಜೆಡಿಎಸ್ ಬಿಜೆಪಿ ಭಾಯಿ ಭಾಯಿ?



ಚಂದ್ರೇಗೌಡರ ಬದಲು ಸದಾನಂದಗೌಡ. ಜಾಫರ್ ...ಫ್ ಮರೆಯಾಗಿ ಆ ಜಾಗಕ್ಕೆ ಅಬ್ದುಲ್ ಅಜೀಮ್ ...ಬಂದಿದ್ದಾರೆ. ಹಿಂದೊಮ್ಮೆ ಜೆಡಿಎಸ್ ಅಭ್ಯರ್ಥಿಯಾಗಿದ್ದ ...ರಾಯಣಸ್ವಾಮಿ ಈಗ ಕಾಂಗ್ರೆಸ್ ಅಭ್ಯರ್ಥಿ ಎಂಬುದನ್ನು ...ಟ್ಟರೆ ಬೆಂಗಳೂರು ಉತ್ತರದ ಹಣಾಹಣಿಯಲ್ಲಿ ಹೆಚ್ಚು ...ಸವೇನಿಲ್ಲ. ಆಗ ಬಿಜೆಪಿ ಸರ್ಕಾರವಿತ್ತು ಈಗ ಕಾಂಗ್ರೆಸ್ ...ರ್ಕಾರದಲ್ಲಿದೆ. ಜೆಡಿಎಸ್ ಅವತ್ತಿಗೂ ಇವತ್ತಿಗೂ ಹೆಚ್ಚೂ ...ಒಂದೇ ಸ್ಥಾನದಲ್ಲಿದೆ.

2009ರ ಚುನಾವಣೆಯಲ್ಲಿ ಚಂದ್ರೇಗೌಡರು 55 ...ಸಾ ಮತಗಳ ಅಂತರದಿಂದ ಕಾಂಗ್ರೆಸ್ ಮುತ್ಸದ್ದಿ ಜಾಫರ್ ...ಷರೀಫ್‌ರನ್ನು ಸೋಲಿಸಿದಾಗ ಜೆಡಿಎಸ್‌ಗೆ ಅಭ್ಯರ್ಥಿ ...ಯಾಗಿದ್ದವನು ಸದ್ಯ ಪತ್ನಿ ಕೊಲೆ ಆರೋಪ ಹೊತ್ತು ...ಪರಪ್ಪನ ಅಗ್ರಹಾರ ಜೈಲಲ್ಲಿ ಕಂಬಿ ಎಣಿಸುತ್ತಿರುವ ...ಮಹೇಂದ್ರಬಾಬು. ಆ ಹೊತ್ತಿಗೇ ಜೆಡಿಎಸ್ ಇಲ್ಲಿ 1.20 ...ಲಕ್ಷ ಮತ ಗಳಿಸಿತ್ತು. ಆಗ ಬ್ಯಾಟರಾಯನಪುರದಿಂದ ...ಕೃಷ್ಣಭೈರೇಗೌಡ, ಪುಲಿಕೇಶಿನಗರದಿಂದ ಪ್ರಸನ್ನಕುಮಾರ್ ...ಮಹಾಲಕ್ಷ್ಮೀಲೇಔಟ್‌ನಿಂದ ನರೇಂದ್ರಬಾಬು ಗೆದ್ದು ...ಶಾಸಕರಾಗಿದ್ದರು. ಮಿಕ್ಕಂತೆ ಮಲ್ಲೇಶ್ವರ, ದಾಸರಹಳ್ಳಿ, ...ಯಶವಂತಪುರ, ಹೆಬ್ಬಾಳ ಮತ್ತು ಕೃಷ್ಣರಾಜಪುರಗಳಲ್ಲಿ ...ಐದೂ ಮಂದಿ ಬಿಜೆಪಿ ಶಾಸಕರು ಮಂತ್ರಿಗಳಿದ್ದರು.

ಈಗ ಪರಿಸ್ಥಿತಿಯೇ ಬೇರೆಯಾಗಿದೆ. ಪುಲಿಕೇಶಿನಗರ ...ಕಾಂಗ್ರೆಸ್ಸಿನ ಪ್ರಸನ್ನಕುಮಾರ್ ...ಸೋತು ಜೆಡಿಎಸ್‌ನ ಅಖಂಡ ...ಶ್ರೀನಿವಾಸ್ ಗೆದ್ದರೆ ಇತ್ತ ಮಹಾಲಕ್ಷ್ಮಿ ...ಲೇಔಟ್‌ನಿಂದ ನರೇಂದ್ರಬಾಬುರನ್ನು ...ಸೋಲಿಸಿ ಜೆಡಿಎಸ್‌ನ ಗೋಪಾಲಯ್ಯ ...ಗೆದ್ದುಬಿಟ್ಟರು. ಹೇಳಹೆಸರಿಲ್ಲದ ...ಜೆಡಿಎಸ್ ಈಗ ಇಬ್ಬರು ಎಮ್ಮೆಲ್ಲೆ ...ಗಳನ್ನು ಹೊಂದಿದೆ. ಬಿಜೆಪಿಯಿಂದ ...ಬಂದವರು ಶಾಸಕರಾದರೆ ಕಾಂಗ್ರೆಸ್ ...ಬಿಜೆಪಿಯಿಂದ ಕೃಷ್ಣರಾಜಪುರ ...ಮತ್ತು ಯಶವಂತಪುರಗಳನ್ನು ಕಿತ್ತು ...ಕೊಂಡಿದೆ. ದಾಸರಹಳ್ಳಿ ಶಾಸಕ ...ಮುನಿರಾಜು, ಮಲ್ಲೇಶ್ವರದ ಅಶ್ವತ್ಥ ...ನಾರಾಯಣ ಮತ್ತು ಹೆಬ್ಬಾಳದ ಕಟ್ಟಾ ಶಿಷ್ಯ ಜಗದೀಶ್ ...ಕುಮಾರ್ ಎಂಬ ಮೂವರು ಬಿಜೆಪಿ ಶಾಸಕರೇ ಬೆಂಗಳೂರು ಉತ್ತರದಲ್ಲಿ ಬಿಜೆಪಿಯ ಆಸ್ತಿಯಾದರೆ ಕಾಂಗ್ರೆಸ್ಸಿಗೆ ಕೃಷ್ಣರಾಜಪುರದ ಭೈರತಿ ಬಸವರಾಜ್, ಬ್ಯಾಟರಾಯನಪುರದ ಕೃಷ್ಣಭೈರೇಗೌಡ ಮತ್ತು ಯಶವಂತಪುರದ ಸೋಮಶೇಖರ್ ಎಂಬ ಮೂವರು ಶಾಸಕರ ಬಲವಿದೆ.



ಸಿ. ನಾರಾಯಣಸ್ವಾಮಿ


ಎಮ್ಮೆಲ್ಲೆಗಳ ಸಂಖ್ಯೆಯಲ್ಲಿ ಬಿಜೆಪಿ ಕಾಂಗ್ರೆಸ್ಸಿಗೆ ಸರಿಸಮವಾದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವಾರು ಮತಗಳನ್ನು ಲೆಕ್ಕಹಾಕಿದರೆ ಬಿಜೆಪಿ ಮೂರನೇ ಸ್ಥಾನಕ್ಕೆ ಕುಸಿದು ಜೆಡಿಎಸ್ ಕಾಂಗ್ರೆಸ್ಸಿಗೆ ತೊಡೆ ತಟ್ಟುವಂತಿದೆ. ಅಂದರೆ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಮಧ್ಯೆ 1.64 ಲಕ್ಷ ಮತಗಳ ಅಂತರವಾದರೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ 1.80 ಲಕ್ಷ ಮತಗಳ ಅಂತರವಿದೆ. ಆ ಪ್ರಕಾರವೇ ಪೈಪೋಟಿ ಎಂಬುದಿದ್ದರೆ ಕಾಂಗ್ರೆಸ್ಸಿನ ನಾರಾಯಣಸ್ವಾಮಿ ಮತ್ತು ಜೆಡಿಎಸ್‌ನ ಅಬ್ದುಲ್ ಅಜೀಮ್ ಮಧ್ಯೆ ಜಿದ್ದಾಜಿದ್ದಿಯಿರಬೇಕಲ್ಲವೇ?

ಆದರೆ ಬೆಂಗಳೂರು ಉತ್ತರದ ಹಕೀಕತ್ತೇ ಬೇರೆಯಿದೆ. ಜೆಡಿಎಸ್ ಪಿತಾಮಹ ದೇವೇಗೌಡರಿಗಿಲ್ಲಿ ತಮ್ಮ ಅಭ್ಯರ್ಥಿ ಅಬ್ದುಲ್ ಅಜೀಮ್ ಗೆಲುವಿಗಿಂತಲೂ ಬಿಜೆಪಿಯ ಮಾಜಿ ಮುಖ್ಯಮಂತ್ರಿ ಸದಾನಂದಗೌಡ ಗೆಲ್ಲುವುದೇ ಅತಿ ಮುಖ್ಯ.

ಅದಕ್ಕೆ ನಾನಾ ಕಾರಣಗಳಿವೆ. ಈ ಪೈಕಿ ಒಂದು ಕಾರಣ ತಮಗೆ ಕೈಕೊಟ್ಟು ಕಾಂಗ್ರೆಸ್ ಪಾಳಯ ಸೇರಿದ ನಾರಾಯಣಸ್ವಾಮಿ ಮಾತ್ರ ಯಾವುದೇ ಕಾರಣಕ್ಕೂ ಗೆಲ್ಲಕೂಡದು. ವರ್ಷದ ಹಿಂದಷ್ಟೇ ಜೆಡಿಎಸ್‌ನಲ್ಲಿದ್ದ ಸಿ. ನಾರಾಯಣಸ್ವಾಮಿ ಮಾಜಿ ಸಂಸದರೂ ಹೌದು. ಸಂಭಾವಿತ ಕೂಡ. ಆದರೆ ಕೈಕೊಟ್ಟು ಕಾಂಗ್ರೆಸ್ ಸೇರಿದ್ದಕ್ಕೆ ತಕ್ಕ ಶಾಸ್ತಿ ಮಾಡಿಯೇ ತೀರುವ ಸೇಡು ಕೂಡ ಕೆರಳಿ ನಿಂತಿದೆ. ಇದೆಲ್ಲದರ ಹೊರತಾಗ್ಯೂ ಸದಾನಂದ ಗೌಡ ಮತ್ತು ದೇವೇಗೌಡರ ನಡುವಿನ ಸಂಬಂಧಕ್ಕೆ ನಾನಾ ಅರ್ಥ, ಕಾರಣ ಮತ್ತು ಉದ್ದೇಶಗಳಿವೆ. ಈ ಪೈಕಿ ಅತೀ ಮುಖ್ಯವಾದದ್ದು ಯಡ್ಡಿ ಮೇಲಿನ ದ್ವೇಷ ಮತ್ತು ಮುಖ್ಯಮಂತ್ರಿಯಾಗಿದ್ದಾಗ ಸದಾನಂದಗೌಡರು ದೇವೇಗೌಡರ ಕುಟುಂಬಕ್ಕೆ ಮಾಡಿದ ಉಪಕಾರ.

ಜಾತಿಯ ಕಾರಣಕ್ಕೂ, ದೇವೇಗೌಡ ಮತ್ತು ಸದಾನಂದಗೌಡರ ಮಧ್ಯೆ ಆಪ್ತ ನೆಂಟಸ್ತಿಕೆಯಿದೆ. ಬೆಂಗಳೂರು ಉತ್ತರಕ್ಕೆ ಸದಾನಂದಗೌಡರು ನಿಲ್ಲುತ್ತೇನೆಂದಾಗಲೇ ಕಾಂಗ್ರೆಸ್, ಜೆಡಿಎಸ್‌ಗಳ ಮಧ್ಯೆ ಸೆಣಸಾಟ ತೀವ್ರವಾಗುವ ನಿರೀಕ್ಷೆಯಿತ್ತು, ಸದಾನಂದಗೌಡರನ್ನು ಸೋಲಿಸುವ ಎಲ್ಲಾ ಲೆಕ್ಕಾಚಾರ ಹಾಕಿಯೇ ಸಿದ್ದು ನಾರಾಯಣಸ್ವಾಮಿಯನ್ನು ಅಖಾಡಕ್ಕಿಳಿಸಿದ್ದರು. ಆ ಪ್ರಕಾರ ಇಬ್ಬರು ಒಕ್ಕಲಿಗ ಅಭ್ಯರ್ಥಿಗಳ ಮಧ್ಯೆ ಜೆಡಿಎಸ್ ಯಾರಾದರೂ ಹಿಂದುಳಿದವನನ್ನೋ ಲಿಂಗಾಯತರನ್ನೋ ದಲಿತರನ್ನೋ ಹಾಕಬೇಕಿತ್ತು. ಆದರೆ ದೇವೇಗೌಡರು ಛೂ ಬಿಟ್ಟದ್ದು ಮಾಜಿ ಪೊಲೀಸ್ ಅಧಿಕಾರಿ ಅಬ್ದುಲ್ ಅಜೀಮ್‌ರನ್ನು!

ಇಲ್ಲಿ ಅರ್ಥ ಸ್ಪಷ್ಟವಾಗಿತ್ತು. ಹೇಗಿದ್ದರೂ ಅಜೀಮ್ ಒಂದಷ್ಟು ಮುಸ್ಲಿಂ ಮತಗಳನ್ನಂತೂ ಕಿತ್ತೇ ಕೀಳುತ್ತಾರೆ. ಅಜೀಮ್ ಅದೆಷ್ಟು ಹೆಚ್ಚು ಪ್ರಮಾಣದಲ್ಲಿ ಮುಸ್ಲಿಂ ಮತಗಳನ್ನು ಕೀಳುತ್ತಾರೋ ಅಷ್ಟರಮಟ್ಟಿಗದು ಸದಾನಂದಗೌಡನ ಗೆಲುವಿಗೆ ನೆರವಾಗುತ್ತದೆ. ಕಾಂಗ್ರೆಸ್ ಪಾಲಾಗಲಿರುವ ಮುಸ್ಲಿಂ ಮತಗಳ ಪೈಕಿ ಒಂದು ಗುಂಪಿನ ಅಥವಾ ಒಂದು ಮೊತ್ತದ ಮುಸ್ಲಿಂ ಮತಗಳು ಜೆಡಿಎಸ್‌ಗೆ ಬಂದರೆ ಸಾಕು ನೀರು ಕುಡಿದಷ್ಟೇ ಸಲೀಸಾಗಿ ನಾರಾಯಣಸ್ವಾಮಿ ಸೋಲುತ್ತಾರೆ. ಆ ಮಟ್ಟಿಗೆ ಸಿದ್ದು ದುರಹಂಕಾರಕ್ಕೂ ಬರೆ ಹಾಕಿದಂತಾಗುತ್ತದೆ!



ಅಬ್ದುಲ್ ಅಜೀಮ್

ಇಂಥಾದ್ದೊಂದು ಲೆಕ್ಕ ಹಾಕಿಯೇ ಅಬ್ದುಲ್ ಅಜೀಮ್‌ರನ್ನು ಬೆಂಗಳೂರು ಉತ್ತರಕ್ಕೆ ಜೆಡಿಎಸ್ ಅಭ್ಯರ್ಥಿಯನ್ನಾಗಿಸಿದ ದೇವೇಗೌಡರು ಸದಾನಂದಗೌಡರ ಗೆಲುವಿಗೆ ಚಿತ್ರವಿಚಿತ್ರ ಮಾರ್ಗೋಪಾಯಗಳನ್ನು ರೂಪಿಸುತ್ತಲೇ ಇದ್ದಾರೆ. ಜೆಡಿಎಸ್ ಪಾಲಿನ ರೊಕ್ಕದ ಗಣಿ ಎಂದೇ ಚಾಲ್ತಿಯಲ್ಲಿರುವ ಬಾಗೇಗೌಡ ಎಂಬ ರಿಯಲ್ ಎಸ್ಟೇಟ್ ದೊರೆಯನ್ನು ಬಿಟ್ಟು ಸದಾನಂದಗೌಡರಿಗೆ ಬೇಕಾದ ದುಡ್ಡೂ ಕಾಸಿನ ವ್ಯವಸ್ಥೆಯನ್ನು ಗೌಡರೇ ಮಾಡಿಕೊಟ್ಟಿದ್ದಾರೆ.


ಮಹಾಲಕ್ಷ್ಮಿ ಲೇಔಟ್‌ನ ಜೆಡಿಎಸ್ ಶಾಸಕ ಗೋಪಾಲಯ್ಯನವರ ಪರಮಾಪ್ತ ವಲಯ ಮಾತ್ರವಲ್ಲದೆ ಜೆಡಿಎಸ್ ಪಕ್ಷದ ಬಹುತೇಕ ಕಾರ್ಯಕರ್ತರೆಲ್ಲರೂ ಸದ್ಯ ಹಗಲು ಹೊತ್ತು ಅಬ್ದುಲ್ ಅಜೀಮ್ ಪರ ಓಡಾಡಿಕೊಂಡಿದ್ದರೆ ರಾತ್ರಿಯಾಗುತ್ತಿದ್ದಂತೆಯೇ ಬಿಜೆಪಿ ಬಾವುಟ ಹಿಡಿಯುತ್ತಿದ್ದಾರೆ. ಪುಲಿಕೇಶಿನಗರದ ಜೆಡಿಎಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿಗೂ ಸದಾನಂದಗೌಡರ ಬಳುವಳಿಯಾಗಿ ಕೋಟಿ ಮೊತ್ತದ ಕಂತೆಯೊಂದನ್ನು ಗೌಡರೇ ನಿಂತು ಸಂದಾಯ ಮಾಡಿಸಿದ್ದಾರೆಂಬ ಸುದ್ದಿಯಿದೆ.

ಇಷ್ಟೆಲ್ಲಾ ಒಳತಂತ್ರದ ಹೊರತಾಗಿಯೂ ಬಿಜೆಪಿ ಮತ್ತು ಜೆಡಿಎಸ್‌ಗಳ ಅನೈತಿಕ ಹೊಂದಾಣಿಕೆಯ ಅಪಾಯ ಅರಿತೇ ಕಾಂಗ್ರೆಸ್ ಮುಸ್ಲಿಂ ಮತ್ತು ದಲಿತರ ಮತಗಳತ್ತ ಕಣ್ಣು ಹಾಕಿದೆ. 24 ಲಕ್ಷ ಮತದಾರರ ಪೈಕಿ ಎರಡೂವರೆ ಲಕ್ಷದಷ್ಟಿರುವ ಮುಸ್ಲಿಮರು, ಒಂದೂವರೆ ಲಕ್ಷದಷ್ಟಿರುವ ಕುರುಬರು, ಒಂದೂವರೆ ಲಕ್ಷದಷ್ಟಿರುವ ಕ್ರಿಶ್ಚಿಯನ್ನರು ನಿಸ್ಸಂಶಯವಾಗಿ ಕಾಂಗ್ರೆಸ್ಸಿಗೆ ಓಟು ಹಾಕುತ್ತಾರೆ. ಆದರೆ ಒಕ್ಕಲಿಗರ ಸಂಖ್ಯೆ ಐದು ಲಕ್ಷದಷ್ಟಿದೆ. ನಾರಾಯಣಸ್ವಾಮಿ ಸ್ಥಳೀಯ ಒಕ್ಕಲಿಗನಾದರೆ ಸದಾನಂದ ಗೌಡ ದ.ಕ. ಗೌಡ. ಇಬ್ಬರು ಗೌಡರ ಮಧ್ಯೆ ದೇವೇಗೌಡರ ಒಲವು ಸದಾನಂದಗೌಡರ ಕಡೆಯಿದೆಯಾದ್ದರಿಂದ ಸಹಜವಾಗೇ ಮರಸು ಗೌಡರೆಲ್ಲ ನಿಸ್ಸಂಶಯವಾಗಿ ನಾರಾಯಣಸ್ವಾಮಿಯನ್ನು ಬೆಂಬಲಿಸುತ್ತಾರೆ.

ಇಷ್ಟೆಲ್ಲ ಸಾಧ್ಯತೆಗಳ ಪ್ರಕಾರವೇ ಹೇಳುವುದಾದರೆ ಸದ್ಯ ಕಾಂಗ್ರೆಸ್ ಅಭ್ಯರ್ಥಿ ನಾರಾಯಣಸ್ವಾಮಿಯೇ ಮುಂದಾಗಿದ್ದಾರೆ. ಆದರೆ ಬಿಜೆಪಿ ಮತ್ತು ಜೆಡಿಎಸ್‌ಗಳ ಒಳಹೊಂದಾಣಿಕೆ ಕೊನೆಗಳಿಗೆಯಲ್ಲಿ ಯಾವ್ಯಾವ ಅನಾಹುತಗಳನ್ನು ಸೃಷ್ಟಿಸುತ್ತೋ ಯಾವ ಮಟ್ಟದಲ್ಲಿ ಜೆಡಿಎಸ್ ತನ್ನ ಅಸ್ತಿತ್ವವನ್ನು ಬಿಜೆಪಿಗೆ ಮಾರಿಕೊಳ್ಳುತ್ತದೆ ಎಂಬುದರ ಮೇಲೆ ಕಾಂಗ್ರೆಸ್ ಅಭ್ಯರ್ಥಿ ನಾರಾಯಣಸ್ವಾಮಿಯವರ ಗೆಲುವು ನಿರ್ಧರಿಸಲ್ಪಡಲಿದೆ. ಹಾಗೊಮ್ಮೆ ಕಾಂಗ್ರೆಸ್‌ನ ನಾರಾಯಣಸ್ವಾಮಿ ಗೆದ್ದರೆಂದರೆ ಅದು ಕೇವಲ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗೆಲುವಷ್ಟೇ ಅಲ್ಲ; ಜೆಡಿಎಸ್ ಪಿತಾಮಹ ದೇವೇಗೌಡರ ಸೋಲು ಕೂಡ.

● ರಾ.ಸೋ.

ಚುನಾವಣೆಯ ಸುತ್ತ ಒಂದೆರಡು ದೃಶ್ಯಗಳು



ನಿನ್ನೆ ಉಡುಪಿಯಲ್ಲಿ ಮುಖ್ಯಮಂತ್ರಿ ಸಿದ್ದ...ರಾಮಯ್ಯನವರ ಸಭೆ ಇತ್ತು, ಭಾರಿ ಜನಸ್ತೋಮ ...ಇತ್ತು. ಮುಖ್ಯಮಂತ್ರಿಗಳು ಭಾಷಣ ಮುಗಿಸಿ ...ವೇದಿಕೆಯಿಂದ ಕೆಳಗಿಳಿದು ತಮ್ಮ ವಾಹನದತ್ತ ...ಹೋಗುತ್ತಿದ್ದರು. ಇತರ ಮಂತ್ರಿಗಳು, ಅಭ್ಯರ್ಥಿ ...ಅವರನ್ನು ಹಿಂಬಾಲಿಸುತ್ತಿದ್ದರು.

...ಮುಖ್ಯಮಂತ್ರಿಗಳು ವಾಹನದ ಹತ್ತಿರ ...ಹೋಗುತ್ತಿದ್ದ ಹಾಗೆ ಕಪ್ಪು ಟೀ ಶರ್ಟ್ ಮತ್ತು ಜೀನ್ಸ್ ...ಧರಿಸಿದ್ದ 10-15ರಷ್ಟಿದ್ದ ಯುವಕರ ಗ್ಯಾಂಗ್ ಬಂದು ...ನರೇಂದ್ರ ಮೋದಿ ಕಿ ಜೈ' ಎಂದು ಬೊಬ್ಬೆ ಹೊಡೆಯಲು ...ಶುರು ಮಾಡಿತು. ಅಲ್ಲಿ ನೆರೆದಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ...ಜೈಕಾರ ಯಾರಿಗೆ ಎಂಬುದು ಮೊದಲು ಸ್ಪಷ್ಟವಾಗಿ ...ತಿಳಿಯಲಿಲ್ಲ. ಮುಖ್ಯಮಂತ್ರಿ ನಿರ್ಗಮಿಸುವಾಗ 'ಅಬ್ ಕಿ ...ಬಾರ್ ಮೋದಿ ಸರ್ಕಾರ್', 'ನರೇಂದ್ರ ಮೋದಿ ಕಿ ಜೈ', ...'ವಂದೇ ಮಾತರಂ' ಎಂದು ಮತ್ತೆ ಬೊಬ್ಬೆ ಶುರು ಆಯಿತು. ...ಆಗ ಅಲ್ಲಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ಇದು ...ಮೋದಿ ಪರ ಘೋಷಣೆ ಕೂಗುವ ಗ್ಯಾಂಗ್ ಎಂದು ...ಗೊತ್ತಾಯಿತು. ರೊಚ್ಚಿಗೆದ್ದ ಕಾಂಗ್ರೆಸ್ ಕಾರ್ಯಕರ್ತರು ...ಅವರತ್ತ ನುಗ್ಗಿದರು. ಕೂಡಲೇ ಮಧ್ಯ ಪ್ರವೇಶಿಸಿದ ಕೆಪಿಸಿಸಿ ...ಗಫೂರ್ ಮತ್ತು ಅಭ್ಯರ್ಥಿ ಜಯಪ್ರಕಾಶ ಹೆಗ್ಡೆ ...ಕಾರ್ಯಕರ್ತರನ್ನು ಸಮಾಧಾನಪಡಿಸಿದರು. 'ಅವರು ...ಬೇಕಂತಲೇ ಸಭೆ ಹಾಳು ಮಾಡುವ ಉದ್ದೇಶದಿಂದ ಬಂದಿ...ದ್ದಾರೆ. ನಾವು ಅವರ ಮೈ ಮುಟ್ಟಲಿ, ಆಮೇಲೆ ಅದನ್ನ ...ದೊಡ್ಡ ಇಶ್ಯು ಮಾಡೋಣ ಅಂತ ಕಾಯುತ್ತಿದ್ದಾರೆ. ನೀವೆಲ್ಲ ...ಗೆ ಹೋಗಿ, ಅವರು ಮನಸ್ಸಿಗೆ ಬಂದಂತೆ ಕೂಗಲಿ ...' ಎಂದು ಜಯಪ್ರಕಾಶ ಹೆಗ್ಡೆ ತಮ್ಮ ಕಾರ್ಯಕರ್ತರಿಗೆ ...ಹಿಂದೆ ಸರಿಯುವಂತೆ ವಿನಂತಿಸಿದರು. ಹೆಗ್ಡೆ ಮತ್ತು ಗಫೂರ್ ...ರ ಪ್ರಯತ್ನದಿಂದ ಪರಿಸ್ಥಿತಿ ಶಾಂತವಾಯಿತು.

...ಬಡವರು, ಮಹಾ ಕೋಮುವಾದಿ, ದಲಿತರು ಮತ್ತು ...ಬಡವರ ಪರವಾಗಿ ವಿರೋಧಿಯಾದ ನರೇಂದ್ರ ಮೋದಿಯ ...ಬೆಂಬಲಿಸುವವರಿಗೆ ಈ ನೆಲದ ಮಣ್ಣಿನ ಮಗ ಸಿದ್ದರಾಮಯ್ಯನವರ ಕ್ಲೀನ್ ಇಮೇಜ್, ಅವರ ವ್ಯಕ್ತಿತ್ವ, ಅವರ ಸಾಮರ್ಥ್ಯ, ಅವರ ಜನಪರ ಕೆಲಸಗಳ ಬಗ್ಗೆ ಕಿಂಚಿತ್ ತಿಳಿವಳಿಕೆಯೂ ಇಲ್ಲ, ಅಭಿಮಾನವೂ ಇಲ್ಲ.

ಅದೆಲ್ಲ ಒತ್ತಟ್ಟಿಗಿರಲಿ, ಇನ್ನೊಂದು ಪಕ್ಷದ ಅಷ್ಟೊಂದು ದೊಡ್ಡ ಚುನಾವಣಾ ಸಭೆ ನಡೆಯುತ್ತಿದೆ ಎಂಬ ಪ್ರಜ್ಞೆ ಇರಬೇಕು. ದೊಡ್ಡ ಸಂಖ್ಯೆಯಲ್ಲಿ ಆ ಪಕ್ಷದ ಕಾರ್ಯಕರ್ತರು ಇದ್ದಾರೆ ಎಂಬ ವಿವೇಕ ಇರಬೇಕು. ಇದೆಲ್ಲವನ್ನು ಮರೆತ ಆ ಚೆಡ್ಡಿ ಗ್ಯಾಂಗ್ ಮುಖ್ಯಮಂತ್ರಿಗಳನ್ನೂ ಲೆಕ್ಕಿಸದೆ ನರೇಂದ್ರ ಮೋದಿಯ ಪರ ಘೋಷಣೆ ಕೂಗುತ್ತಿತ್ತು. ನರೇಂದ್ರ ಮೋದಿ ಪ್ರಧಾನಿಯಾಗಬೇಕೆಂದು ಬಯಸುವವರು ಎಂತಹ ಅವಿವೇಕಿಗಳು, ಮತಿಗೇಡಿಗಳು ಎಂಬುದಕ್ಕೆ ಈ ಘಟನೆ ಸಾಕ್ಷಿ. ಬಿಜೆಪಿ ಸಭೆ ನಡೆಯುವಾಗ ಬೇರೆ ಪಕ್ಷದ ಕಾರ್ಯಕರ್ತರು ಹೀಗೆ ಮಾಡಿದ್ದರೆ ಪರಿಸ್ಥಿತಿ ಹೇಗಾಗುತ್ತಿತ್ತು, ಈ ಚೆಡ್ಡಿಗಳು ಆ ಘಟನೆಗೆ ಎಷ್ಟೆಲ್ಲ ಸುಣ್ಣ-ಬಣ್ಣ ಬಳಿದು ದೊಡ್ಡದು ಮಾಡುತ್ತಿದ್ದರು ಎಂಬುದು ಬೇರೆ ಹೇಳಬೇಕಾಗಿಲ್ಲ.

ಕನಿಷ್ಠ ಪಕ್ಷ ನಿನ್ನೆಯ ಸಭೆಯನ್ನು ಹಾಳು ಮಾಡಲು ಬಂದ ಈ ಗ್ಯಾಂಗ್‌ನ ಉದ್ದೇಶ, ಪಿತೂರಿಯನ್ನು ಪೊಲೀಸರು ಪ್ರಶ್ನಿಸಬೇಕಿತ್ತು, ನಿಜವಾಗಿಯೂ ಈ ಗ್ಯಾಂಗ್ ಕಾಂಗ್ರೆಸ್ ಸಭೆಯಲ್ಲಿ ದಾಂಧಲೆ ಮಾಡುವ ಉದ್ದೇಶದಿಂದ ಅಲ್ಲಿಗೆ ಬಂದಿತ್ತೆ ಎಂಬ ಬಗ್ಗೆ ವಿಚಾರಣೆ ನಡೆಸಬೇಕಿತ್ತು, ಕಾಂಗ್ರೆಸ್ ಈ ಕುರಿತು ಪೊಲೀಸರಿಗೆ ದೂರು ನೀಡಬೇಕಿತ್ತು, ಆ ಗ್ಯಾಂಗ್‌ನ ಮಂದಿಯ ಹೆಸರು-ಹಿನ್ನೆಲೆಗಳನ್ನು ತಿಳಿದುಕೊಳ್ಳಬೇಕಿತ್ತು, ಕನಿಷ್ಠ ಇಷ್ಟನ್ನೂ ಮಾಡದ ಬಗ್ಗೆ ಅಲ್ಲಿದ್ದ ಅನೇಕ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಪಕ್ಷದ ಧುರೀಣರು ಮತ್ತು ಪೊಲೀಸರ ಬಗ್ಗೆಯೆ ಸಿಟ್ಟಾಗಿದ್ದದ್ದು ಸಹಜವೇ ಆಗಿತ್ತು.

* * *

ಕಳೆದ ಹಲವು ದಿನಗಳಿಂದ ನೀವು ಸಮಯ 24x7 ಚಾನೆಲ್ ನಡೆಸುತ್ತಿರುವ ಸಮೀಕ್ಷೆಯನ್ನು ಗಮನಿಸಿರಬಹುದು. ಈ ಸಮೀಕ್ಷೆ ಅತ್ಯಂತ ಅಸಂಬದ್ಧ ಮತ್ತು ಅವೈಜ್ಞಾನಿಕವಾಗಿದೆ. ಸಮೀಕ್ಷೆಯನ್ನೇ ಚುನಾವಣಾ ಫಲಿತಾಂಶದ ಹಾಗೆ ತೋರಿಸಿ ಮತದಾರರ ಮೇಲೆ ಪ್ರಭಾವ ಬೀರುವ ಕೆಲಸ ಈ ಚಾನೆಲ್ ಮಾಡುತ್ತಿದೆ. ಮೊನ್ನೆ ಮೈಸೂರಿನ ಸಮೀಕ್ಷೆ ಇವರ ಚಾನೆಲ್‌ನಲ್ಲಿ ನಡೆಯುತ್ತಿತ್ತು, ಇವರ ಸಮೀಕ್ಷೆಯ ಪ್ರಕಾರ ಈಗಾಗಲೇ ಪ್ರತಾಪ ಸಿಂಹ ಗರ್ಜಿಸುತ್ತಿದ್ದಾನಂತೆ. ಆದರೆ ಈ ಸಮೀಕ್ಷೆಗೆ ಒಂದು ಗೊತ್ತುಗುರಿ, ವ್ಯಾಪ್ತಿ, ಮಿತಿ ಏನೂ ಇಲ್ಲ.

ಮೈಸೂರಿನ ಅಭ್ಯರ್ಥಿಗೆ ನೀವು ಕುಂದಾಪುರದಿಂದ ವೋಟ್ ಹಾಕಬಹುದು. ನನಗೂ ಮೈಸೂರಿಗೂ ಸಂಬಂಧವೇ ಇಲ್ಲ. ಆದರೂ ನಾನು ನೋಡೋಣ ಅಂತ ಕಾಲ್ ಮಾಡಿದೆ. ಒಂದೇ ಮೊಬೈಲ್ ನಂಬರ್‌ನಿಂದ ಮೂರು ಸಲ ಕರೆ ಮಾಡಿದೆ. ವಿಶ್ವನಾಥರಿಗೆ ನನ್ನ ವೋಟ್ ಅಂತ ಹೇಳಿದೆ. ಮೂರು ಸಲವೂ ಓಕೆ ಸಾರ್ ಅಂತ ನನ್ನ ವೋಟನ್ನ ವಿಶ್ವನಾಥರ ಲೆಕ್ಕಕ್ಕೆ ಬರ್ಕೊಂಡರು. ನನ್ನ ಮನೆಯ ಲ್ಯಾಂಡ್‌ಲೈನ್‌ನಿಂದ ಕಾಲ್ ಮಾಡಿದೆ. ಕನಿಷ್ಠ ಪಕ್ಷ ನನ್ನ ಎಸ್‌ಟಿಡಿ ಕೋಡ್ ಮೈಸೂರಿನದಲ್ಲ ಅಂತ ಗೊತ್ತಾದರೆ ನನ್ನ ವೋಟ್ ತಿರಸ್ಕರಿಸಬಹುದು ಅಂತ ಭಾವಿಸಿದರೆ ಆ ವೋಟ್ ಕೂಡ ಲೆಕ್ಕಕ್ಕೆ ತಗೊಂಡ್ರು.

ಇದು ಎಂತಹ ಸಮೀಕ್ಷೆ ನೀವೇ ಹೇಳಿ. ಯಾವುದೋ ಕ್ಷೇತ್ರದ ಅಭ್ಯರ್ಥಿಗೆ ಇನ್ನಾವುದೋ ಕ್ಷೇತ್ರದಲ್ಲಿರುವ ಪುರುಸೊತ್ತಿರುವ ಮತದಾರ ಇವರ ಚಾನೆಲ್‌ಗೆ ಕರೆ ಮಾಡಿ ತನ್ನದಲ್ಲದ ಕ್ಷೇತ್ರದ ಅಭ್ಯರ್ಥಿಗೆ ವೋಟ್ ಹಾಕಬಹುದು. ಒಂದೆರಡು ಸಾರಿ ಅಲ್ಲ, ಇಪ್ಪತ್ತೈದು ಸಾರಿ ಬೇಕಾದರೂ ವೋಟ್ ಮಾಡಬಹುದು. ಕ್ಯಾಂಡಿಡೇಟ್‌ಗಳ ಹತ್ತಿರ ದುಡ್ಡಿದ್ದರೆ ಫೋನ್ ಮಾಡಲಿಕ್ಕಾಗಿಯೇ ಹತ್ತಿಪ್ಪತ್ತು ಜನರನ್ನ ಒಂದು ದಿನ ಕೆಲಸಕ್ಕೆ ಹಾಕಿಕೊಂಡರೆ ಆ ಅಭ್ಯರ್ಥಿಯ ವೋಟ್ ಇನ್ನೂ ಹೆಚ್ಚಾಗುತ್ತದೆ.


ಇಂತಹ ಅಸಂಬದ್ಧ ಸಮೀಕ್ಷೆ ನಡೆಸುತ್ತಿರುವ ಸಮಯ ಚಾನೆಲ್ ಏನನ್ನು ಸಾಧಿಸಲು ಹೊರಟಿದೆ? ಈ ಸಮೀಕ್ಷೆ ನೋಡುತ್ತಿದ್ದ ನನ್ನ ಅಮ್ಮ ಮೊನ್ನೆ ಕೇಳುತ್ತಿದ್ದರು 'ಈ ಸಲ ಫೋನ್ ಮಾಡಿ ಕೂಡ ವೋಟ್ ಮಾಡಬಹುದಾ?' ಅಂತ.

ಇಂತಹ ಅಸಂಬದ್ಧ ಸಮೀಕ್ಷೆಯ ಬಗ್ಗೆ ನಾನು ಚುನಾವಣಾ ಆಯೋಗಕ್ಕೆ ಮೂರ್ನಾಲ್ಕು ಬಾರಿ ಫೋನ್ ಮಾಡಿದ್ದೆ, ನೋಡ್ತೀವಿ ಅಂತಂದ್ರು. ಇಮೇಲ್ ಮೂಲಕ ಕಂಪ್ಲೇಂಟ್ ಮಾಡಿ ಎರಡು ವಾರ ಆಯ್ತು.


ಯಾವ ಅಭ್ಯರ್ಥಿ ಎಲ್ಲಿ ಉಪ್ಪಿಟ್ಟು ತಿಂತಾ ಇದ್ದಾನೆ, ಯಾವ ಅಭ್ಯರ್ಥಿ ಇವತ್ತು ಫಿಲ್ಟರ್ ಕಾಫಿ ಕುಡೀತಾ ಇದ್ದಾನೆ, ಯಾವ ಕ್ಷೇತ್ರದಲ್ಲಿ ಕಾರ್ಯಕರ್ತರಿಗೆ ಇವತ್ತು ಬಿಸ್ಲೆರಿ ನೀರು ಕೊಡುತ್ತಿದ್ದಾರೆ ಎಂಬ ಮೂರ್ಖ ಲೆಕ್ಕಾಚಾರದ ಹಿಂದೆ ಬಿದ್ದಿರುವ ಚುನಾವಣಾ ಆಯೋಗಕ್ಕೆ ಇಂತಹ ಸಮೀಕ್ಷೆಗಳ ಬಗ್ಗೆ ಗಮನಹರಿಸಲು ಸಮಯವಾದರೂ ಎಲ್ಲಿದೆ ಪಾಪ!

● ಶ್ರೀಧರ್ ಹೆಮ್ಮಾಡಿ

ಸಕ್ಕರೆಯ ನಾಡಲ್ಲಿ 'ಒಕ್ಕಲಿಗರೇ' ನಿರ್ಣಾಯಕ



ಚುನಾವಣೆಯ ಕಾವು ಸಕ್ಕರೆ ನಾಡಲ್ಲಿ ದಿನೇದಿನೇ ಹೆಚ್ಚಾಗುತ್ತಿದೆ. ಅಭ್ಯರ್ಥಿಯ ಗೆಲುವು ಸೋಲಿಗಿಂತ ಮುಖಂಡರ ವೈಯಕ್ತಿಕ ಪ್ರತಿಷ್ಠೆಗಳೇ ಇಲ್ಲಿ ಕಾದಾಟಕ್ಕಿಳಿದಿರುವುದು ವಿಶೇಷ. ಈ ಸಂದರ್ಭದಲ್ಲಿ ಮಂಡ್ಯದ ಭೌಗೋಳಿಕ, ಆರ್ಥಿಕ, ಸಾಂಸ್ಕೃತಿಕ ಚಿತ್ರಣ ಹಾಗೂ ಸದ್ಯದ ರಾಜಕೀಯ ಸನ್ನಿವೇಶದ ವಿಶ್ಲೇಷಣೆ ಇಲ್ಲಿದೆ...




ಜೀವನಾಡಿ ಕಾವೇರಿ ಮಂಡ್ಯ ಜಿಲ್ಲೆಯಲ್ಲಿ ಸಮೃದ್ಧವಾಗಿ ಹರಿಯುವುದರಿಂದ ಬಹುತೇಕ ಜನತೆ ಕೃಷಿಯನ್ನೇ ಪ್ರಧಾನ ಕಸುಬಾಗಿ ಮಾಡಿಕೊಂಡಿದ್ದಾರೆ. ಕಬ್ಬು ಮತ್ತು ಭತ್ತ ಇಲ್ಲಿಯ ಪ್ರಮುಖ ವಾಣಿಜ್ಯ ಬೆಳೆಗಳು. ಕಾವೇರಿ ಜಿಲ್ಲೆಯಲ್ಲಿ ಹರಿದರೂ ಶೇ.48ರಷ್ಟು ಮಾತ್ರವೇ ವ್ಯವಸಾಯಕ್ಕೆ ಬಳಕೆಯಾದುದು. ಇನ್ನುಳಿದಂತೆ ಶೇ.52ರಷ್ಟು ಭೂಭಾಗಕ್ಕೆ ಕಾವೇರಿ ನೀರು ತಲುಪದೇ ಒಣ ಭೂಮಿಯಾಗಿದೆ. ಅಂದಿನಿಂದ ಇಂದಿನವರೆಗೂ ಗೆದ್ದುಹೋದ ರಾಜಕೀಯ ಪ್ರತಿನಿಧಿಗಳಿಗೆ ಇಚ್ಛಾಶಕ್ತಿ ಇರದಿದ್ದದ್ದೇ ಇದಕ್ಕೆ ಕಾರಣ ಎಂದರೆ ತಪ್ಪಾಗಲಾರದು. ಗೆದ್ದ ಯಾರೊಬ್ಬರೂ ಕಾವೇರಿ ನೀರನ್ನು ಎಲ್ಲಾ ತಾಲ್ಲೂಕುಗಳಿಗೆ ಹರಿಸುವ ಸಂಕಲ್ಪವನ್ನೇ ಮಾಡಲಿಲ್ಲ. ಮದ್ದೂರು, ಕೆ.ಆರ್.ಪೇಟೆ, ಮಳವಳ್ಳಿಯ ಎಷ್ಟೋ ಕಡೆ ಕುಡಿಯುವ ನೀರಿಗೆ ಇಂದಿಗೂ ತತ್ವಾರ. ನಾಗಮಂಗಲ ತಾಲ್ಲೂಕಂತೂ ಬರದ ಬೀಡು. ಹಾಗಾಗಿಯೇ ಇಲ್ಲಿಯ ಜನರಿಗೆ ಚುನಾವಣೆಗಳೆಂದರೆ ತಾತ್ಸಾರ. ಯಾರೇ ಗೆದ್ದರೂ ನಮ್ಮ ಪಾಡು ಇಷ್ಟೆ ಎನ್ನುವ ಈ ಭಾಗದ ಜನ ನಿರುತ್ಸಾಹದಿಂದಲೇ ಮತಹಾಕಿ ಸುಮ್ಮನಾಗುತ್ತಾರೆ. ಸದಾ ಬರದಿಂದ ತತ್ತರಿಸುವ ನಾಗಮಂಗಲದಲ್ಲಿ ಮಳೆಯನ್ನೇ ನಂಬಿ ರಾಗಿ, ಹುರುಳಿ ಚೆಲ್ಲಿ ಅಷ್ಟೋ ಇಷ್ಟೋ ರಾಗಿ, ಹುರುಳಿ ಬೆಳೆ ದಕ್ಕಿಸಿಕೊಳ್ಳುವುದೇ ದೊಡ್ಡ ಸಾಹಸ. ಹಾಗಾಗಿಯೇ ಇಲ್ಲಿಯ ಯುವಜನತೆ ಬೆಂಗಳೂರು, ಮುಂಬೈನಂತಹ ನಗರಗಳಿಗೆ ವಲಸೆ ಹೋಗಿ ಜೀವನ ಕಂಡುಕೊಂಡಿದ್ದಾರೆ.

ಕಾವೇರಿ ಅಸ್ತ್ರ

ಜಿಲ್ಲೆಯಲ್ಲಿ ಸಮೃದ್ಧವಾಗಿ ಹರಿಯುವ ಕಾವೇರಿ, ರಾಜಕೀಯ ಪಕ್ಷಗಳ ಪ್ರಮುಖ ಅಸ್ತ್ರ. ಕಾವೇರಿ ವಿವಾದ ಭುಗಿಲೆದ್ದರೆ ಮೊದಲು ಪ್ರತಿಕ್ರಿಯೆ ನೀಡುವುದೇ ಮಂಡ್ಯ ಜಿಲ್ಲೆ. ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳ ನಡುವೆ ಕಾವೇರಿ ನದಿನೀರು ಹಂಚಿಕೆ ವಿಷಯದಲ್ಲಿ ತಗಾದೆ ನಡೆಯುತ್ತಲೇ ಇದೆ. ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಪಕ್ಷಗಳಿಗೆ ತಮಿಳುನಾಡಿನ ಸಂಸದರ ಬೆಂಬಲ ಬೇಕಿರುವುದರಿಂದ ನಿಷ್ಪಕ್ಷಪಾತವಾಗಿ ನೀರಿನ ಹಂಚಿಕೆ ಮಾಡಲು ಸಾಧ್ಯವಾಗಿಲ್ಲ. ಹಾಗಾಗಿ ಆಗಾಗ್ಗೆ ಕಾವೇರಿ ವಿವಾದ ಧುತ್ತೆಂದು ಹೊತ್ತಿಕೊಳ್ಳುತ್ತದೆ. ಮಳೆ ಬರದಿದ್ದರೆ ಪ್ರತಿ ವರ್ಷವೂ ವಿವಾದ ಜಿಲ್ಲೆಯಲ್ಲಿ ಕಾವೇರಿಸುತ್ತಲೇ ಇರುತ್ತದೆ. ಇದನ್ನೇ ಅಸ್ತ್ರವಾಗಿಟ್ಟುಕೊಂಡಿರುವ ರಾಷ್ಟ್ರೀಯ ಹಾಗೂ ಪ್ರಾದೇಶಿಕ ಪಕ್ಷಗಳು ಕಾವೇರಿ ವಿಚಾರ ಕೆದಕಿ ರಾಜಕೀಯ ಬೇಳೆ ಬೇಯಿಸಿಕೊಳ್ಳುತ್ತಿವೆ. ಕಾವೇರಿಯನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡಿದರಷ್ಟೇ ಇಲ್ಲಿಯ ಜನರನ್ನು ಭಾವನಾತ್ಮಕವಾಗಿ ಕಟ್ಟಿಹಾಕಲು ಸಾಧ್ಯ ಎಂಬುದನ್ನು ಕಂಡುಕೊಂಡಿರುವ ರಾಜಕೀಯ ಪಕ್ಷಗಳ ನಾಯಕರು ಪ್ರತಿ ಚುನಾವಣೆಯಲ್ಲೂ ಕಾವೇರಿ... ಕಾವೇರಿ... ಎಂಬ ಮಂತ್ರ ಜಪಿಸುತ್ತಲೇ ಇರುತ್ತಾರೆ.

ಕಾವೇರಿ ಜಿಲ್ಲೆಯ ಜೀವನಾಡಿಯಾದರೆ, ಸರ್ಕಾರಿ ಸ್ವಾಮ್ಯದ ಮೈಷುಗರ್ ಹಾಗೂ ಪಾಂಡವಪುರದ ಪಿಎಸ್‌ಎಸ್‌ಕೆ ಕಾರ್ಖಾನೆಗಳು ರೈತರ ಎರಡು ಕಣ್ಣುಗಳಿದ್ದಂತೆ. ಈಗಾಗಲೇ ನೂರಾರು ಕೋಟಿ ಸಾಲದಿಂದ ತತ್ತರಿಸಿರುವ ಈ ಕಾರ್ಖಾನೆಗಳು ಕುಟುಕು ಜೀವ ಹಿಡಿದುಕೊಂಡಿವೆ. ಕಬ್ಬನ್ನೇ ಪ್ರಧಾನವಾಗಿ ಬೆಳೆಯುವ ರೈತರಲ್ಲಿ ಈ ಎರಡು ಕಾರ್ಖಾನೆಗಳು ಮುಚ್ಚಿಹೋಗುವ ಆತಂಕ ಎದ್ದು ಕಾಣುತ್ತಿದೆ. ಯಾರೇ ಚುನಾವಣೆಗೂ ನಿಂತರೂ, ಎರಡೂ ಕಾರ್ಖಾನೆಗಳ ಪುನಶ್ಚೇತನ ಮಾಡುವುದಾಗಿ ಆಶ್ವಾಸನೆ ನೀಡುತ್ತಾರೆಯೇ ಹೊರತು ಯಾರೊಬ್ಬರೂ ಈ ಕಾರ್ಖಾನೆಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಕೆಲಸ ಮಾಡಿಲ್ಲ. 10-20 ಕೋಟಿ ರೂಪಾಯಿ ಅನುದಾನ ತಂದು ತಾತ್ಕಾಲಿಕ ಶಮನಕ್ಕೆ ಗಮನ ಕೊಡುತ್ತಾರೆಯೇ ಹೊರತು ಶಾಶ್ವತ ಪರಿಹಾರ ಕಂಡುಹಿಡಿಯುವ ನಿಟ್ಟಿನಲ್ಲಿ ಗಮನಾರ್ಹ ಕೆಲಸವಾಗಿಲ್ಲ. ಇವೆರಡೂ ಕಾರ್ಖಾನೆಗಳು ಮುಚ್ಚಿ ಹೋದರೆ ಮಂಡ್ಯ ಜಿಲ್ಲೆಯ ಆರ್ಥಿಕ ಆಧಾರ ಸ್ತಂಭವೇ ಕುಸಿದು ಜಿಲ್ಲೆ ಮತ್ತಷ್ಟು ಅಧೋಗತಿಗೆ ಇಳಿಯುವುದು ಖಚಿತ.



ಶಿವಲಿಂಗಯ್ಯ

ಇನ್ನು, ಸಕ್ಕರೆ ಕಾರ್ಖಾನೆಗಳ ಹೊರತು ಜಿಲ್ಲೆಯಲ್ಲಿ ಕೈಗಾರಿಕೆಗಳು ಸಾಕಷ್ಟು ಕಡಿಮೆ. ಜಿಲ್ಲೆಯವರೇ ಆದ ಎಸ್.ಎಂ.ಕೃಷ್ಣ ಕೇಂದ್ರಮಂತ್ರಿ, ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗಲೂ ಯಾವುದೇ ಕೈಗಾರಿಕೆಗಳು ಜಿಲ್ಲೆಗೆ ಬರಲಿಲ್ಲ. ವಾಣಿಜ್ಯ ನಗರಿ ಬೆಂಗಳೂರಿಗೆ 100 ಕಿ.ಮೀ.ದೂರದಲ್ಲಿರುವ ಮಂಡ್ಯ ಜಿಲ್ಲೆಯಲ್ಲಿ ಒಂದಷ್ಟು ಕೈಗಾರಿಕೆಗಳು ಬಂದಿದ್ದರೆ ನಿರುದ್ಯೋಗ ಸಮಸ್ಯೆಯೂ ಕಡಿಮೆಯಾಗುತ್ತಿತ್ತು, ಜಿಲ್ಲೆಯೂ ಅಭಿವೃದ್ಧಿಯತ್ತ ಸಾಗುತ್ತಿತ್ತು, ಆದರೆ ಎಸ್.ಎಂ.ಕೃಷ್ಣ ಸೇರಿದಂತೆ ಯಾರೊಬ್ಬರೂ ಆ ನಿಟ್ಟಿನಲ್ಲಿ ಗಮನಹರಿಸಲಿಲ್ಲ. ಇದ್ದುದರಲ್ಲಿ ಕೆ.ವಿ.ಶಂಕರೇಗೌಡರೊಬ್ಬರ ಹೆಸರೇ ಇಂದಿಗೂ ಜಿಲ್ಲೆಯ ಜನ ಹೇಳುವುದು. ಆರ್ಥಿಕವಾಗಿ, ಶೈಕ್ಷಣಿಕವಾಗಿ ಜಿಲ್ಲೆಯ ಅಭಿವೃದ್ಧಿಗೆ ಒಂದಷ್ಟು ಕೆಲಸ ಮಾಡಿದ ಕೆ.ವಿ.ಶಂಕರೇಗೌಡ ಬಿಟ್ಟರೆ ಉಳಿದ ಸಂಸದರಿಂದ ಜಿಲ್ಲೆಗೆ ಅಂತಹ ಪ್ರಯೋಜನವೇನೂ ಇಲ್ಲವೆಂದೇ ಹೇಳಬಹುದು. ಇಂತಹ ಸಕ್ಕರೆ ನಾಡಿನಲ್ಲಿ ಮತ್ತೆ ಲೋಕಸಭಾ ಚುನಾವಣೆಯ ರಂಗು ತುಂಬಿಕೊಂಡಿದೆ. ಕಾಂಗ್ರೆಸ್, ಜಾ.ದಳ, ಬಿಜೆಪಿ ಪಕ್ಷಗಳು ಕಾವೇರಿ, ಸಕ್ಕರೆ ಕಾರ್ಖಾನೆ, ನಿರುದ್ಯೋಗ ಸಮಸ್ಯೆ ಎಂದೆಲ್ಲಾ ಅಸ್ತ್ರಗಳನ್ನು ಬಿಡುತ್ತಾ ಗೆಲ್ಲುವ ಸಂಚು ನಡೆಸಿವೆ.

ಒಕ್ಕಲಿಗರದ್ದೇ ಪಾರುಪತ್ಯ

ಮಂಡ್ಯ, ಶ್ರೀರಂಗಪಟ್ಟಣ, ಮದ್ದೂರು, ಮಳವಳ್ಳಿ, ಪಾಂಡವಪುರ, ಕೆ.ಆರ್.ಪೇಟೆ, ನಾಗಮಂಗಲ ಹಾಗೂ ಮೈಸೂರಿನ ಕೆ.ಆರ್.ನಗರ ಒಳಗೊಂಡ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ 16,41,671 ಮತದಾರರಿದ್ದಾರೆ. 8,25,758 ಪುರುಷ ಹಾಗೂ 8,15,913 ಮಹಿಳಾ ಮತದಾರರಿದ್ದಾರೆ. ಒಟ್ಟು ಮತದಾರರಲ್ಲಿ ಶೇ. 50ರಷ್ಟಿರುವ ಒಕ್ಕಲಿಗರೇ ಕ್ಷೇತ್ರದಲ್ಲಿ ಪಾರುಪತ್ಯ ಹೊಂದಿದ್ದಾರೆ. ಹಾಗಾಗಿ ಇಲ್ಲಿ ಕಾಂಗ್ರೆಸ್, ಜಾ.ದಳ, ಬಿಜೆಪಿ ಪಕ್ಷಗಳು ಒಕ್ಕಲಿಗ ಅಭ್ಯರ್ಥಿಗಳಿಗೇ ಟಿಕೆಟ್ ನೀಡುತ್ತವೆ. ಮಂಡ್ಯ ಲೋಕಸಭಾ ಕ್ಷೇತ್ರದಿಂದ ಗೆದ್ದಹೋದ ಒಕ್ಕಲಿಗ ಸಮುದಾಯದ ಅಭ್ಯರ್ಥಿಗಳು ಮಂಡ್ಯದ ಜನರಿಗೆ ಕೊಟ್ಟ ಕೊಡುಗೆಗಳು ಅಷ್ಟರಲ್ಲೇ ಇದೆ. ಆದ್ರೂ ಜಾತಿ ರಾಜಕೀಯ ಜಿಲ್ಲೆಯಲ್ಲಿ ಬೇರು ಬಿಟ್ಟಿದೆ. ಒಕ್ಕಲಿಗರಲ್ಲದೆ ಶೇ.9ರಷ್ಟು ಲಿಂಗಾಯತರು, ಶೇ.8ರಷ್ಟು ಕುರುಬ, ಶೇ.14ರಷ್ಟು ಪರಿಶಿಷ್ಟ ಜಾತಿ ಮತದಾರರಿದ್ದರೆ, ಶೇ.11ರಷ್ಟು ಇತರೆ ಸಮುದಾಯಗಳ ಮತದಾರರಿದ್ದಾರೆ. ಶೇ.7ರಷ್ಟಿರುವ ಅಲ್ಪಸಂಖ್ಯಾತ ಸಮುದಾಯದ ಮತಗಳು ನಿರ್ಣಾಯಕ ಪಾತ್ರ ವಹಿಸಬಲ್ಲವು.




ರಮ್ಯ

ಮಂಡ್ಯದಲ್ಲಿ ಪ್ರಾಬಲ್ಯ ಹೊಂದಿರುವ ಒಕ್ಕಲಿಗ ಮತಗಳ ಮೇಲೆ ಕಣ್ಣಿಟ್ಟೇ ಕಾಂಗ್ರೆಸ್ ಹಾಗೂ ಜಾ.ದಳ ಪಕ್ಷಗಳು ರಾಜಕಾರಣ ಮಾಡುತ್ತಿವೆ. ಒಕ್ಕಲಿಗರ ಮತಗಳನ್ನು ಸೆಳೆಯುವ ಕಲೆಗಾರಿಕೆ ಹೊಂದಿರುವ ದೇವೇಗೌಡ ಹಾಗೂ ಕುಮಾರಸ್ವಾಮಿಯ ಕಣ್ಣೀರಿನ ಡೈಲಾಗ್‌ಗೇ ಭಾವನಾತ್ಮಕವಾಗಿ ಮುಗಿಬೀಳುವ ಒಕ್ಕಲಿಗರು ಜಾ.ದಳ ಪಕ್ಷದ ಪರ ನಿಂತಿರುವುದರಿಂದಲೇ ಕ್ಷೇತ್ರದ ವ್ಯಾಪ್ತಿಯಲ್ಲಿ 5 ಮಂದಿ ಜಾ.ದಳ ಶಾಸಕರು ಗೆದ್ದು ಬಂದಿದ್ದಾರೆ. ಆದರೂ ಕಳೆದ ಉಪಚುನಾವಣೆಯಲ್ಲಿ ಜಾ.ದಳ ಅಭ್ಯರ್ಥಿಯಾಗಿದ್ದ ಪುಟ್ಟರಾಜು ಕಾಂಗ್ರೆಸ್‌ನ ರಮ್ಯಾ ಎದುರು ಸೋಲು ಕಂಡಿದ್ದರು.

ಜಾ.ದಳಗೆ ಅಳಿವು-ಉಳಿವಿನ ಪ್ರಶ್ನೆ

ಕಾಂಗ್ರೆಸ್ ಅಭ್ಯರ್ಥಿ ರಮ್ಯಾ ಎದುರು ಶತಾಯಗತಾಯ ಜಾ.ದಳ ಅಭ್ಯರ್ಥಿ ಸಿ.ಎಸ್.ಪುಟ್ಟರಾಜು ಗೆಲ್ಲಿಸುವ ಮೂಲಕ ಮತ್ತೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಜಾ.ದಳ ಬಾವುಟ ಹಾರಿಸುವುದು ದೇವೇಗೌಡರ ಗುರಿ. ಈಗಾಗಲೇ ಮಂಡ್ಯ ಲೋಕಸಭಾ ಕ್ಷೇತ್ರದಾದ್ಯಂತ ಬಿರುಸಿನ ಪ್ರಚಾರ ನಡೆಸಿರುವ ದೇವೇಗೌಡರು ಚುನಾವಣೆ ಜಾ.ದಳ ಪಕ್ಷದ ಅಳಿವು-ಉಳಿವಿನ ಪ್ರಶ್ನೆಯಾಗಿದೆ ಎನ್ನುವ ಮೂಲಕ ಒಕ್ಕಲಿಗರ ಸ್ವಾಭಿಮಾನವನ್ನು ಕೆಣಕಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಜಾ.ದಳ ಪಕ್ಷಕ್ಕೆ ಒಂದೇ ಒಂದು ಸ್ಥಾನವನ್ನು ಗೆಲ್ಲಲು ಬಿಡುವುದಿಲ್ಲ ಎನ್ನುವ ಮಾತನ್ನು ಪದೇಪದೇ ಉಚ್ಚರಿಸುತ್ತಾ ದೇವೇಗೌಡರು, ಒಕ್ಕಲಿಗರು ಭಾವನಾತ್ಮಕವಾಗಿ ಪ್ರಚೋದನೆಗೊಳ್ಳುವಂತೆ ಮಾಡಿದ್ದಾರೆ. ಶೇ.50ರಷ್ಟಿರುವ ಒಕ್ಕಲಿಗರು ದೇವೇ ಗೌಡರ ಭಾವನಾತ್ಮಕ ಭಾಷಣಕ್ಕೆ ಕಟ್ಟುಬಿದ್ದರೆ ಜಾ.ದಳದ ಪುಟ್ಟರಾಜುಗೆ ವರವಾಗಬಹುದು. ಜೊತೆಗೆ ಎಸ್‌ಡಿಪಿಐ ಎಂಬ ರಾಜಕೀಯ ಸಂಘಟನೆಯೂ ಜೆಡಿಎಸ್‌ಗೆ ಬೆಂಬಲ ಸೂಚಿಸಿ ಪ್ರಚಾರದಲ್ಲಿ ತೊಡಗಿರುವುದರಿಂದ ಜಿಲ್ಲೆಯಲ್ಲಿರುವ ಶೇ.7ರಷ್ಟು ಮುಸ್ಲಿಂ ಮತದಾರರಲ್ಲಿ ಒಂದಷ್ಟು ಭಾಗವಾದರೂ ಜೆಡಿಎಸ್‌ಗೆ ಬೀಳಲಿವೆ. ಕಳೆದ ಬಾರಿ ಸೋತ ಸಿಂಪಥಿಯೂ ಈ ಎಲ್ಲಾ ಲೆಕ್ಕಾಚಾರದೊಂದಿಗೆ ತಾಳೆಯಾದರೆ ಪುಟ್ಟರಾಜು ವಿಜಯ ಪತಾಕೆ ಹಾರಿಸಲು ಕಷ್ಟವೇನೂ ಆಗದು.

ಕಳೆದ ಬಾರಿಯ ಸೋಲಿನಿಂದ ಪಾಠ ಕಲಿತಿರುವ ಜಾ.ದಳ ಎಚ್ಚರಿಕೆಯ ಹೆಜ್ಜೆಗಳನ್ನು ಇಟ್ಟಿದೆ. ಕಾಂಗ್ರೆಸ್ ಪಕ್ಷದಲ್ಲಿ ಎದ್ದಿರುವ ಭಿನ್ನಮತವನ್ನು ಅಂದಾಜಿಸಿರುವ ದೇವೇಗೌಡರು ಈ ಬಾರಿ ಆಂತರಿಕ ಭಿನ್ನಮತಕ್ಕೆ ಬಲವಾದ ಛಾಟಿ ಬೀಸಿದ್ದಾರೆ. ಪುಟ್ಟರಾಜು ಗೆಲ್ಲಿಸುವ ಹೊಣೆಯನ್ನು ಶಾಸಕ ಚಲುವರಾಯಸ್ವಾಮಿ ಹಾಗೂ ಡಿ.ಸಿ.ತಮ್ಮಣ್ಣ ಹೆಗಲಿಗೆ ಹಾಕಿರುವ ಅವರು ಗೆಲ್ಲಿಸಿಯೇ ತರಬೇಕೆಂದು ಫರ್ಮಾನು ಹೊರಡಿಸಿದ್ದಾರೆ. ಅದರಂತೆ ಪ್ರತಿ ತಾಲ್ಲೂಕಿನಲ್ಲಿಯೂ ಅದ್ದೂರಿ ನೆಟ್‌ವರ್ಕ್ ಸೃಷ್ಟಿಸಿರುವ ಚಲುವರಾಯಸ್ವಾಮಿ ಹಣ ಹಂಚಿಕೆ, ಪ್ರಚಾರ ಎಲ್ಲವನ್ನು ತಮ್ಮ ಹಿಡಿತಕ್ಕೆ ತಂದುಕೊಂಡಿದ್ದಾರೆ. ಪುಟ್ಟರಾಜು ಸೋತರೆ ತನ್ನ ನಾಯಕತ್ವಕ್ಕೆ ಜಿಲ್ಲೆಯಲ್ಲಿ ಬೆಲೆ ಇರುವುದಿಲ್ಲ ಎಂಬುದನ್ನು ಅರಿತಿರುವ ಚಲುವರಾಯಸ್ವಾಮಿ ಈ ಬಾರಿ ಶತಾಯಗತಾಯ ಪುಟ್ಟರಾಜು ಗೆಲ್ಲಿಸುವ ಪಣ ತೊಟ್ಟಿದ್ದಾರೆ. ಶ್ರೀರಂಗಪಟ್ಟಣದ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಕಾಂಗ್ರೆಸ್‌ನ ರವೀಂದ್ರ ಶ್ರೀಕಂಠಯ್ಯ ಹಾಗೂ ಎಸ್.ಎಲ್.ಲಿಂಗರಾಜು ಬಣಗಳ ಕಾದಾಟದ ಲಾಭ ಪಡೆದು ಜೆಡಿಎಸ್‌ಗೆ ಲೀಡ್ ಕೊಡಿಸಲು ಹೆಣಗಾಡುತ್ತಿದ್ದಾರೆ. ಕೆ.ಆರ್.ಪೇಟೆಯಲ್ಲೂ ಕಾಂಗ್ರೆಸ್‌ನ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಮತ್ತು ಕಿಕ್ಕೇರಿ ಸುರೇಶ್ ಕಿತ್ತಾಟದ ಲಾಭ ಪಡೆದು ಜೆಡಿಎಸ್ ಅಭ್ಯರ್ಥಿಯತ್ತ ಮತ ಸೆಳೆಯಲು ಶಾಸಕ ನಾರಾಯಣಗೌಡ ಶ್ರಮಿಸುತ್ತಿದ್ದಾರೆ. ಕೆ.ಆರ್.ನಗರದಲ್ಲಿ ಶಾಸಕ ಸಾ.ರಾ.ಮಹೇಶ್ ಪುಟ್ಟರಾಜು ಪರ ಭರ್ಜರಿ ಪ್ರಚಾರ ನಡೆಸುತ್ತಿದ್ದಾರೆ. ಪುಟ್ಟರಾಜು ಚುನಾವಣೆಯ ಖರ್ಚು-ವೆಚ್ಚವನ್ನು ಸ್ವತಃ ಚಲುವರಾಯಸ್ವಾಮಿಯೇ ನೋಡಿಕೊಳ್ಳುತ್ತಿದ್ದು ಜೆಡಿಎಸ್‌ನಲ್ಲಿ ಉತ್ತಮ ವಾತಾವರಣ ನಿರ್ಮಾಣವಾಗಿದೆ.



ಪುಟ್ಟರಾಜು

ಕಾಂಗ್ರೆಸ್‌ಗೂ ಛಾನ್ಸ್ ಇದೆ

ಕಳೆದ ಉಪಚುನಾವಣೆಯಲ್ಲಿ ಚಿತ್ರನಟಿ ರಮ್ಯಾ ಪರ ಇದ್ದ ಕಾಂಗ್ರೆಸ್ ಮುಖಂಡರ ಒಗ್ಗಟ್ಟು ಈ ಬಾರಿ ಇಲ್ಲ. ಅಂಬಿ ಮತ್ತು ಕೃಷ್ಣ ಬಣಗಳ ಕಾದಾಟ ಹೆಚ್ಚಾಗುತ್ತಲೇ ಇದೆ. ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಅನಾರೋಗ್ಯದಿಂದ ಚೇತರಿಸಿಕೊಂಡು ಚುನಾವಣೆಗೆ 5 ದಿನಗಳಿದ್ದಾಗಷ್ಟೇ ಮಂಡ್ಯಕ್ಕೆ ಕಾಲಿಟ್ಟಿದ್ದಾರೆ. ರಮ್ಯಾ ವಿರುದ್ಧ ಮುನಿಸಿಕೊಂಡಿರುವ ತನ್ನ ಬೆಂಬಲಿಗರನ್ನು ಸಮಾಧಾನಪಡಿಸಿರುವ ಅಂಬಿ ಭಿನ್ನಮತ ನಿವಾರಣೆ ಮಾಡಿದ್ದಾರೆ. ಇದು ಎಷ್ಟರಮಟ್ಟಿಗೆ ಫಲ ಕೊಡುವುದೋ ಕಾದು ನೋಡಬೇಕು.

ತನ್ನ ರಾಜಕೀಯ ಬೆಳವಣಿಗೆಗೆ ತೊಡರುಗಾಲು ಹಾಕಿದ ದೇವೇಗೌಡರನ್ನು ಅವರದ್ದೇ ಭದ್ರಕೋಟೆಯಲ್ಲಿ ಕೆಡವಬೇಕೆನ್ನುವ ಉದ್ದೇಶದಿಂದ ಮಂಡ್ಯ ಕ್ಷೇತ್ರದಲ್ಲಿ ರಮ್ಯಾರನ್ನು ಮತ್ತೆ ಗೆಲ್ಲಿಸಲೇಬೇಕೆಂದು ಹಠ ತೊಟ್ಟಂತಿರುವ ಸಿಎಂ ಸಿದ್ದರಾಮಯ್ಯ ಈಗಾಗಲೇ ನಾಲ್ಕು ಬಾರಿ ಮಂಡ್ಯ ಕ್ಷೇತ್ರದಲ್ಲಿ ಪ್ರಚಾರ ನಡೆಸಿದ್ದಾರೆ. ಇದಕ್ಕಾಗಿ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರನ್ನು ಪ್ರಚಾರಕ್ಕೆ ಕರೆತಂದಿರುವ ಸಿದ್ದರಾಮಯ್ಯ ತಮ್ಮ ಆಪ್ತ ಲೋಕೋಪಯೋಗಿ ಸಚಿವ ಮಹದೇವಪ್ಪ ಹಾಗೂ ಮಳವಳ್ಳಿ ಶಾಸಕ ನರೇಂದ್ರಸ್ವಾಮಿಯವರ ಕೈಗೆ ರಮ್ಯಾ ಗೆಲ್ಲಿಸುವ ಭಾರ ಹಾಕಿದ್ದಾರೆ. ಒಕ್ಕಲಿಗರ ಬಹುತೇಕ ಮತ ಕೈಬಿಟ್ಟರೂ ಅಹಿಂದ ವರ್ಗಗಳ ಮೇಲೆ ಕಣ್ಣಿಟ್ಟಿರುವ ಸಿದ್ದರಾಮಯ್ಯ ತಮ್ಮ ಸರ್ಕಾರದಲ್ಲಿ ತಂದಿರುವ ಅನ್ನಭಾಗ್ಯ, ಕ್ಷೀರಭಾಗ್ಯ, ಸಾಲಮನ್ನಾ ಮೊದಲಾದ ಯೋಜನೆಗಳ ಮೂಲಕ ಮತದಾರರನ್ನು ತಲುಪುವ ಪ್ರಯತ್ನ ನಡೆಸಿದ್ದಾರೆ. ಹಾಗಾಗಿ ಪರಿಶಿಷ್ಟಜಾತಿ-ವರ್ಗ, ಕುರುಬ, ಹಿಂದುಳಿದವರು ಹೆಚ್ಚಾಗಿರುವ ಮಳವಳ್ಳಿ, ಕೆ.ಆರ್.ಪೇಟೆಯಲ್ಲಿ ಪ್ರಚಾರಕ್ಕೆ ರಮ್ಯಾ ಸಾಕಷ್ಟು ಆದ್ಯತೆ ಕೊಟ್ಟಿದ್ದಾರೆ. ಮಳವಳ್ಳಿ ಶಾಸಕ ನರೇಂದ್ರಸ್ವಾಮಿ ಕಳೆದ ಬಾರಿ 23,000 ಮತಗಳ ಲೀಡ್ ಕೊಡಿಸಿದ್ದು ಈ ಬಾರಿಯೂ ಅದೇ ಲೀಡ್ ಕಾಯ್ದುಕೊಳ್ಳಲು ಯಶಸ್ವಿಯಾದರೆ ರಮ್ಯಾ ಪಾಲಿಗೆ ಪ್ಲಸ್ ಪಾಯಿಂಟ್ ಆಗಲಿದೆ. ತಮ್ಮ ಗಾಡ್‌ಫಾದರ್‌ನಂತಿರುವ ಎಸ್.ಎಂ.ಕೃಷ್ಣ ಹಾಗೂ ಡಿ.ಕೆ.ಶಿವಕುಮಾರ್ ಜಿಲ್ಲೆಯಲ್ಲಿ ಪ್ರಚಾರ ಮಾಡಿರುವುದು ರಮ್ಯಾಗೆ ಹುಮ್ಮಸ್ಸು ನೀಡಿದೆ. ಆಡಳಿತಾರೂಢ ಕಾಂಗ್ರೆಸ್ ಪಕ್ಷಕ್ಕೆ ಜಿಲ್ಲೆಯ ಮತದಾರರು ಅಭಿವೃದ್ಧಿ ದೃಷ್ಟಿಯಿಂದ ಮತ ನೀಡಲಿದ್ದಾರೆ ಎಂಬ ವಿಶ್ವಾಸವೂ ರಮ್ಯಾರಲ್ಲಿದೆ.

ರೈತಸಂಘ ಬೆಂಬಲ

ರೈತಸಂಘದ ನಾಯಕ, ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಬೆಂಬಲ ನೀಡಿರುವುದು ರಮ್ಯಾಗೆ ದೊಡ್ಡ ಪ್ಲಸ್ ಪಾಯಿಂಟ್. ಕಳೆದ ಉಪಚುನಾವಣೆಯಲ್ಲೂ ಪುಟ್ಟಣ್ಣಯ್ಯ ಬೆಂಬಲ ನೀಡಿದ್ದು ರಮ್ಯಾ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮೇಲುಕೋಟೆ ಕ್ಷೇತ್ರದ ಶಾಸಕರಾಗಿರುವ ಪುಟ್ಟಣ್ಣಯ್ಯನವರ ರೈತಸಂಘದ ಮತಗಳೇ 1 ಲಕ್ಷಕ್ಕೂ ಹೆಚ್ಚಿವೆ. ಕಳೆದ ಸಲ ಇದರಲ್ಲಿ ಬಹುತೇಕ ಮತಗಳು ರಮ್ಯಾ ಕೈ ಹಿಡಿದಿದ್ದರಿಂದ ನಿರಾಯಾಸವಾಗಿ ಗೆದ್ದು ಬಂದಿದ್ದರು. ಈ ಬಾರಿಯೂ ರೈತನಾಯಕರಾದ ಪುಟ್ಟಣ್ಣಯ್ಯ ಹಾಗೂ ನಂಜುಂಡೇಗೌಡ ರಮ್ಯಾ ಪರ ಬೆವರು ಹರಿಸುತ್ತಿದ್ದಾರೆ. ಈ ಸಲವೂ 50ರಿಂದ 60 ಸಾವಿರ ರೈತಸಂಘ ಮತಗಳು ರಮ್ಯಾ ಪರ ಚಲಾವಣೆಯಾದರೆ ಕಾಂಗ್ರೆಸ್ ಗೆಲುವಿಗೆ ಅನುಮಾನವಿಲ್ಲ.

ಸಂಸದೆಯಾಗಿ ರಮ್ಯಾ ಕಳೆದ 6 ತಿಂಗಳಲ್ಲಿ ಕ್ಷೇತ್ರದ ನೂರಾರು ಹಳ್ಳಿಗಳನ್ನು ಸುತ್ತಿರುವುದು, ಸಂಸತ್ತಿನಲ್ಲಿ ಕಬ್ಬು

ಹಾವೇರಿ: ಉದಾಸಿ ಸೋಲಿಗೆ ಪಂಚಮಸಾಲಿಗಳ ಫರ್ಮಾನು

ಚುನಾವಣೆ ಸಮೀಪಿಸುತ್ತಿದ್ದಂತೆಯೇ ಹಾವೇರಿ ...ಜಾತಿ ಲೆಕ್ಕಾಚಾರದ ರಾಜಕಾರಣ ಬಿರುಸಾ... ಕಳೆದ ಬಾರಿ ಇದೇ ...ಲೆಕ್ಕದಲ್ಲಿ ಗೆದ್ದಿದ್ದ ...ಕುಮಾರ್ ಉದಾಸಿಗೆ ಈ ...ಅದೇ ಜಾತಿ ಕೈಕೊಡುವ ...ವಿದೆ. ಯಾಕೆಂದರೆ ಈ ...ಬಿಜೆಪಿಯ ಶಿವಕುಮಾರ ...ಉದಾಸಿಯನ್ನು ಸೋಲಿಸಲು ...ವ ಪಂಚಮಸಾಲಿಗಳು ...ವಾಗಿ ನಿರ್ಧರಿಸಿದ್ದಾರೆ.


...ಇಂಬು ನೀಡುವಂತೆ ...ಚೆಗೆ ಶಿಗ್ಗಾಂವಿ ಪಟ್ಟಣದಲ್ಲಿ ...ಗೋಷ್ಠಿ ನಡೆಸಿದ ರಾಜ್ಯ ...ವ ಪಂಚಮಸಾಲಿ ...ದ ರಾಜ್ಯಾಧ್ಯಕ್ಷ ಬಸವರಾಜ ...ಾರ ತಮ್ಮ ಸ್ವಜಾತಿಯ ...ಸ್ ಅಭ್ಯರ್ಥಿ ರವಿ ...ಣಸಿನಕಾಯಿಗೆ ಬೆಂಬಲ ಘೋಷಿಸಿದ್ದಲ್ಲದೆ ...ಕುಮಾರ್ ಉದಾಸಿ ವಿರುದ್ಧ ...ಚಲಾಯಿಸುವಂತೆ ತಮ್ಮ ಸಮಾಜದ ...ದಾರರಿಗೆ ಫರ್ಮಾನು ಹೊರಡಿಸಿದ್ದಾರೆ. ಜಾತಿಯ ...ಮಿಸ್ತ್ರಿಯಿಂದಾಗಿ ಕಾಂಗ್ರೆಸ್ ಅಭ್ಯರ್ಥಿ ಸಲೀಮ್ ...ದ್ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

...ಂದಹಾಗೆ, ಕಳೆದ ಬಾರಿ ಮರಿ ಉದಾಸಿಯನ್ನು ...ದ್ದೇ ಪಂಚಮಸಾಲಿ ವೀರಶೈವ ಮತಗಳು. ...ೇರಿ ಲೋಕಸಭಾ ಕ್ಷೇತ್ರದಲ್ಲಿ ಐದು ಲಕ್ಷಕ್ಕೂ ... ಮತದಾರರನ್ನು ಹೊಂದಿರುವ ಲಿಂಗಾಯತ ...ದಾಯದ ಒಳ ಪಂಗಡವಾದ ಪಂಚಮಸಾಲಿಗಳ ...ಗಳೆ 1.65 ಲಕ್ಷದಷ್ಟಿವೆ. ಕಳೆದ ... ಇವರೆಲ್ಲಾ ಒಟ್ಟಾಗಿ ಮರಿ ...ಸಿಯ ಬೆಂಬಲಕ್ಕೆ ನಿಂತಿದ್ದರು. ...ಾಗೇ ಶಿವಕುಮಾರ್ ಉದಾಸಿ ...ಮೆಂಟ್ ಮೆಟ್ಟಲು ತುಳಿದಿದ್ದ. ... ಹೀಗೆ ಗೆದ್ದುಹೋದ ...ಕುಮಾರ ನಂತರದಲ್ಲಿ ಈ ಪಂಚಮ...ಗಳನ್ನು ಕ್ಯಾರೇ ಎನ್ನಲಿಲ್ಲ. ತನ್ನದು ...ಬಿಜಿ ಪಾಲಿಟಿಕ್ಸ್ ಎಂದು ...ಕೊಳ್ಳುವ ಮರಿ ಉದಾಸಿ ...ಮುಲ್ಲಿ ಕುಳಿತು ಕಂಪ್ಯೂಟರಿನ ...್ ಅಲ್ಲಾಡಿಸಿದನೇ ಹೊರತು ... ಕಳಿಸಿದ ತನ್ನ ಜಾತಿಯ ...ಧವರನ್ನೂ ಹತ್ತಿರಕ್ಕೂ ...ಕೊಳ್ಳಲಿಲ್ಲ, ಮುಟ್ಟಿದರೆ ಎಲ್ಲಿ ಕೈ ...ಮುತ್ತೋ ಎಂದು ಪಾಶ್ ಆಗಿ ...ದಲ್ಲೇ ನಿಂತು ಜನರನ್ನು ...ತನಾಡಿಸುತ್ತಿದ್ದ ಮರಿ ಉದಾಸಿಗೆ ... ಕಲಿಸಲು ಪಂಚಮಸಾಲಿಗಳು ಈ ... ಒಂದಾಗಿದ್ದಾರೆ.

...ಪಂಚಮಸಾಲಿಗಳ ಈ ಆಕ್ರೋಶ ... ಸಿ.ಎಂ.ಉದಾಸಿಯ ಪಾಲೂ ಇದೆ. ...ಚನ್ನಬಸಪ್ಪ ಉದಾಸಿ ಮಂತ್ರಿಯಾ... ಸಂದರ್ಭದಲ್ಲಿ ಹಾನಗಲ್ ಕ್ಷೇತ್ರದ ಲಿಂಗಾಯತ ...ಚಮಸಾಲಿಗಳನ್ನು ಹರಿದು ಮುಕ್ಕಿದ್ದ. ಅವರ ...ಗಳಿಂದಲೇ ಗೆದ್ದು ಅವರಿಗೇ ಬೆನ್ನು ತೋರಿದ್ದ ... ಚನ್ನಮ್ಮನ ಮೂರ್ತಿ ಸ್ಥಾಪನೆಗೆ ಅಡ್ಡಗಾಲು ಹಾಕಿ ...ಂಗದ ವಿರೋಧವನ್ನೂ ಕಟ್ಟಿಕೊಂಡಿದ್ದ. ಅದರ ಪರಿಣಾಮವನ್ನು ಆತ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕಾಣಬೇಕಾಯಿತು. ಯಡ್ಡಿಯ ಕೆಜೆಪಿಗೆ ಜನ್ಮ ನೀಡಿದ್ದ ಹಾವೇರಿ ನೆಲದಲ್ಲೇ ಮತದಾರರು ಸಿ.ಎಂ ಉದಾಸಿಯ ತೆಂಗಿನ ಕಾಯಿ ಎರಡು ಹೋಳಾಗುವಂತೆ ನಿಷ್ಕಾಳಿಸಿ ಹೊಡೆದಿದ್ದರು. ಆ ಸೋಲಿನಲ್ಲಿ ಪಂಚಮಸಾಲಿಗಳ ಆಕ್ರೋಶವೂ ಸೇರಿತ್ತು. ಅಪ್ಪನಿಗೆ ಸೋಲಿನ ರುಚಿ ತೋರಿಸಿರುವ ಪಂಚಮಸಾಲಿ ಮತದಾರರು ಈ ಬಾರಿ ಮಗನಿಗೂ ಅದೇ ಗತಿ ಕಾಣಿಸಲು ಹಾತೊರೆಯುತ್ತಿದ್ದಾರೆ. ಹಾಗಾಗಿ ತಮ್ಮ ಸ್ವಜಾತಿಯ ರವಿ ಮೆಣಸಿನಕಾಯಿಯನ್ನು ಬೆಂಬಲಿಸಿ ಉದಾಸಿ ವಿರುದ್ಧ ಅಖಾಡಕ್ಕಿಳಿಸಿದ್ದಾರೆ.




ಸಲೀಂ ಅಹಮದ್



ಶಿವಕುಮಾರ ಉದಾಸಿ

ಹಣ ಕೊಟ್ಟರೆ ಹೆಣವೂ ಓಟು ಹಾಕುತ್ತೆ ಎನ್ನುವ ಖದರ್‌ನಲ್ಲಿ ಫೀಲ್ಡಿಗಿಳಿದಿರುವ ರೊಕ್ಕಸ್ತ ಉದಾಸಿಗೆ ಈ ಬಾರಿ ಹಣವಿರಲಿ ಹೆಣವೂ ಒಲಿಯುತ್ತಿಲ್ಲ. ಈತ ಬಿಟ್ಟಿರುವ ಕೋಟ್ಯಾಂತರ ಹಣ ಮುಖಂಡರ ತಳದಲ್ಲಿ ಭದ್ರವಾಗಿದೆ. ಜನರಿಗೆ ಹಂಚುವ ನೆಪದಲ್ಲಿ ಉದಾಸಿಯ ತಿಜೋರಿಯನ್ನು ಖಾಲಿ ಮಾಡುತ್ತಿರುವ ಕ್ಷೇತ್ರದ ಸೋತ ಶಾಸಕರುಗಳು ಚುನಾವಣೆಯಲ್ಲಿ ತಾವು ಹಾಕಿದ ಬಂಡವಾಳವನ್ನು ಈಗ ಉದಾಸಿಯಿಂದ ಕಕ್ಕಿಸುತ್ತಿದ್ದಾರೆ. ಅಲ್ಪಸ್ವಲ್ಪ ದುಡ್ಡು ಮತದಾರನ ಕೈತಲುಪಿದರೂ ಉದಾಸಿಯ ಹೈಟೆಕ್ ಪಾಲಿಟಿಕ್ಸ್‌ನಿಂದ ರೋಸಿಹೋದ ಮತದಾರ ಕಾಂಗ್ರೆಸ್‌ನ ಸಲೀಂ ಅಹ್ಮದ್‌ರತ್ತಲೇ ಹೆಚ್ಚು ಒಲವು ತೋರುತ್ತಿದ್ದಾನೆ.



ಮನೋಹರ ತಹಶೀಲ್ದಾರ




ರವಿ ಮೆಣಸಿನಕಾಯ್


ಕೈ ಪಾಳಯದಲ್ಲಿ ಒಗ್ಗಟ್ಟಿನ ಮಂತ್ರ

ಟಿಕೆಟ್ ವಿಚಾರವಾಗಿ ಕಾಂಗ್ರೆಸ್ ಪಾಳಯದಲ್ಲಿ ಒಂಚೂರು ತಾಳಮೇಳ ತಪ್ಪಿದ್ದುಂಟು. ಆದರೆ ಸಿಎಂ ಸಿದ್ದರಾಮಯ್ಯ ಚುನಾವಣಾ ಪ್ರಚಾರಕ್ಕೆಂದು ಜಿಲ್ಲೆಗೆ ಬಂದು ಹೋದ ನಂತರ ಅದ್ಯಾವ ಫಾರ್ಮುಲಾ ಉಸುರಿಹೋಗಿದ್ದಾರೊ ಒಗ್ಗಟ್ಟಿನ ಝೇಂಕಾರ ಭರ್ಜರಿಯಾಗಿ ಮೊಳಗುತ್ತಿದೆ. ತನ್ನ ಸೋದರನಿಗೆ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಎಚ್.ಕೆ.ಪಾಟೀಲರು ಪ್ರಚಾರದಲ್ಲಿ ಅಷ್ಟಕ್ಕಷ್ಟೇ ಆಸಕ್ತಿ ತೋರುತ್ತಿದ್ದರು. ಇದರಿಂದಾಗಿ ಸಲೀಂ ಅಹ್ಮದ್‌ರ ಸೋಲನ್ನು ಸ್ವತಃ ಪಾಟೀಲರೆ ಎದುರು ನೋಡುತ್ತಿದ್ದಾರೆನ್ನುವ ಗುಲ್ಲು ಕೂಡಾ ಎದ್ದಿತ್ತು. ಬ್ಯಾಡಗಿಯ ಬಸವರಾಜ ಶಿವಣ್ಣವರ, ಹಾವೇರಿಯ ರುದ್ರಪ್ಪ ಲಮಾಣಿ, ಹಾನಗಲ್ಲಿನ ಮನೋಹರ ತಹಶೀಲ್ದಾರ, ಮೊದಲ ಬಾರಿಗೆ ಗೆದ್ದಿರುವ ಶಿರಹಟ್ಟಿಯ ರಾಮಕೃಷ್ಣ ದೊಡ್ಡಮನಿಯಂತಹ ಶಾಸಕರು ಎಚ್.ಕೆ ಸಾಹೇಬರ ಹಾದಿಯಲ್ಲೇ ಹೆಜ್ಜೆ ಹಾಕಿದ್ದರು. ಅಲ್ಲದೆ ಸತತ ಎರಡು ಬಾರಿ ಸೋತು ಬಿಜೆಪಿಯ ವಿರೋಧಿ ಅಲೆಯಲ್ಲಿ ಗೆದ್ದು ಬಂದಿರುವ ರಾಣೆಬೆನ್ನೂರಿನ ಕೆ.ಬಿ.ಕೋಳಿವಾಡರು ಮಂತ್ರಿ ಪದವಿ ಸಿಕ್ಕಿಲ್ಲ ಅಂತ ಬೇಸರಿಸಿಕೊಂಡು ಪ್ರಚಾರದಿಂದ ದೂರವೇ ಉಳಿದಿದ್ದರು. ಕಾಂಗ್ರೆಸ್‌ನ ಒಡಕು ಉದಾಸಿಗೆ ವರದಾನವಾಗಲಿದೆ ಎಂತಲೇ ಆರಂಭದಲ್ಲಿ ಸಮೀಕರಿಸಲಾಗಿತ್ತು.

ಆದರೆ ಇದೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿದ್ದ ಸಿಎಂ ಸಿದ್ದರಾಮಯ್ಯ ಮೊನ್ನೆ ಹಾನಗಲ್ಲಿನ ಬಹಿರಂಗ ಸಭೆ ಮುಗಿಸಿಕೊಂಡವರೇ ಎಚ್.ಕೆ.ಪಾಟೀಲರನ್ನು ಕೂರಿಸಿಕೊಂಡು ಹೈಕಮಾಂಡ್ ಮಂತ್ರವನ್ನು ಬೋಧಿಸಿ ಹೋಗಿದ್ದಾರೆ. ಅಂದಿನಿಂದ ಕಾಂಗ್ರೆಸ್ ಕ್ಯಾಂಪೇನ್ ಆಕ್ಟಿವ್ ಆಗಿ ಕಾಣುತ್ತಿದೆ. ಒಂದು ವೇಳೆ ಸಲೀಂ ಅಹ್ಮದ್ ಸೋತರೆ, ಮಂತ್ರಿಯಾಗಿರುವವರು ಸಚಿವ ಸ್ಥಾನ ಕಳೆದುಕೊಳ್ಳಬೇಕಾಗುತ್ತಲ್ಲದೆ ಕ್ಯಾಬಿನೆಟ್‌ನ ಕನಸು ಕಾಣುತ್ತಿರುವವರು ಕರೆನ್ಸಿಗೂ ಗತಿಯಿಲ್ಲದಂತಹ ಪರಿಸ್ಥಿತಿಗೆ ಬರಬೇಕಾಗುತ್ತದೆಂದು ಸಿಎಂ ಸಾಹೇಬರು ಹೈಕಮಾಂಡ್‌ನ ಆದೇಶವನ್ನು ಉದುರಿಸಿ ಹೋಗಿದ್ದಾರೆಂದೇ ಸುದ್ದಿ ಇದೆ. ಒಟ್ಟಿನಲ್ಲಿ ಒಡೆದ ಮನೆಯಂತಾಗಿದ್ದ ಕಾಂಗ್ರೆಸ್‌ನಲ್ಲಿ ಇದೀಗ ಒಗ್ಗಟ್ಟಿನದೇ ಮಂತ್ರ. ಸದ್ಯ ಹಾವೇರಿ ಕ್ಷೇತ್ರದ ಕಾಂಗ್ರೆಸ್ ಮೈಕೊಡವಿ ಎದ್ದು ನಿಂತಿದ್ದು ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಹುಟ್ಟಿಸಿದೆ.



ಎಚ್.ಕೆ. ಪಾಟೀಲ್




ಕೋಳಿವಾಡ

ಚೆಡ್ಡಿಗಳಿಗೆ ನಡುಕ

ಕಾಂಗ್ರೆಸ್ಸಿನ ಒಗ್ಗಟ್ಟು ಉದಾಸಿ ಪಡೆಯ ನಿದ್ದೆಗೆಡಿಸಿದೆ. ಅಸಮಾಧಾನದಲ್ಲಿದ್ದ ಕಾಂಗ್ರೆಸ್ ಮುಖಂಡರನ್ನು ಪ್ರಚಾರಕ್ಕಿಳಿಯದಂತೆ ವ್ಯವಸ್ಥಿತ ತಂತ್ರಗಾರಿಕೆ ರೂಪಿಸಿ ಗೆಲ್ಲಲು ಹವಣಿಸಿದ್ದ ಉದಾಸಿ ಚೆಡ್ಡಿ ಬಳಗದ ಕುತಂತ್ರಕ್ಕೆ ಸ್ಪಷ್ಟವಾಗಿ ಹಿನ್ನಡೆಯಾಗಿದೆ. ಕಳೆದಬಾರಿಯಂತೆ ಈ ಬಾರಿಯೂ ಕಾಂಗ್ರೆಸ್ ಅನ್ನು ಒಡೆದು ಗದ್ದುಗೆ ಹಿಡಿಯುವ ಉದಾಸಿ ಅಪ್ಪ ಮಕ್ಕಳ ಕನಸು ಸಧ್ಯ ನುಚ್ಚು ನೂರಾಗಿದ್ದು, ಗದಗ ಭಾಗದಲ್ಲಿ ಬಳ್ಳಾರಿಯ ರೌಡಿ ಶ್ರೀರಾಮುಲುಗೆ ಮುಖ ತೋರಿಸಿ ಮತ ಪಡೆಯುವ ಇವರ ಇರಾದೆ ಕೂಡ ಠುಸ್ ಆಗಿದೆ. ಮಣ್ಣು ಮಾರಿ ಕದ್ದ ಹಣದಲ್ಲಿ ಮಾಸ್ ಲೀಡರ್ ನಂತೆ ಮೆರೆದಿದ್ದ ರಾಮುಲುವನ್ನು ಈಗ ಗದಗಿನ ಜನ ನಂಬುತ್ತಿಲ್ಲ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಆತನ ಬಿಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿಗಳು ಹೀನಾಯವಾಗಿ ಸೋಲು ಕಂಡದ್ದು ರಾಮುಲು ವರ್ಚಸನ್ನು ಅಕ್ಷರಶಃ ಬೆತ್ತಲಾಗಿಸಿದೆ. ಸಧ್ಯ ಈಗಲೂ ಅದೇ ಪರಿಸ್ಥಿತಿ ಇದ್ದು ರಾಮುಲು ಶೋ ತೋರಿಸಲು ಹೋದರೆ, ಬಿಜೆಪಿಗೆ ಬೀಳುವ ಮತಗಳೂ ಕೈಕೊಡುವುದು ಗ್ಯಾರಂಟಿ ಎಂಬ ವಾತಾವರಣ ಸೃಷ್ಟಿಯಾಗಿದೆ.

ಇತ್ತ ಬಿಜೆಪಿ ಲೀಡರ್‌ಗಳ ವರ್ಚಸ್ಸು ಸಂಪೂರ್ಣ ಪಾತಾಳದ ಹಾದಿ ಹಿಡಿದಿದ್ದರೆ ಕಾಂಗ್ರೆಸ್ ಅಭ್ಯರ್ಥಿ ಸಲೀಮ್ ಅಹ್ಮದ್ ಮತದಾರರಿಂದ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿದ್ದಾರೆ. ವಿದ್ಯಾರ್ಥಿ ಮುಖಂಡರಾಗಿ ಕಾಂಗ್ರೆಸಿಗೆ ಪಾದಾರ್ಪಣೆ ಮಾಡಿದ್ದ ಸಲೀಂ ಅಹ್ಮದ್ ಎಲ್ಲ ಜನಾಂಗದ ಜನರೊಂದಿಗೆ ಬೆರೆತು ನಡೆಯುವ ಸ್ವಭಾವ ಹೊಂದಿರುವ ಸಜ್ಜನ ರಾಜಕಾರಣಿ ಎಂತಲೇ ಹಾವೇರಿ ಜನರಿಂದ ಗುರುತಿಸಿಕೊಳ್ಳುತ್ತಿದ್ದಾರೆ. ಕಳೆದ ಮೂವತ್ತು ವರ್ಷಗಳಿಂದ ಹಾವೇರಿಯನ್ನು ತಮ್ಮ ಕರ್ಮಭೂಮಿಯನ್ನಾಗಿಸಿಕೊಂಡಿರುವ ಸಲೀಂ ಈ ಭಾಗದ ಶೈಕ್ಷಣಿಕ, ಆರೋಗ್ಯ, ಸಾಂಸ್ಕೃತಿಕ, ಸಹಕಾರಿ ರಂಗಗಳಿಗೆ ತಮ್ಮದೇ ಕೊಡುಗೆ ನೀಡುತ್ತಾ ವಿಶ್ವಾಸ ಗಳಿಸಿಕೊಂಡಂತವರು. ಈ ಹಿಂದೆ ವಿಧಾನ ಪರಿಷತ್ ಸದಸ್ಯರಾಗಿದ್ದಾಗ ಕ್ಷೇತ್ರಕ್ಕೆ ಸಾಕಷ್ಟು ಅನುದಾನವನ್ನು ಕೊಡಿಸಿದ್ದೂ ಅವರ ಕೈ ಹಿಡಿಯಲಿದೆ. ಅಲ್ಲದೆ, ಕಳೆದ ಎರಡು ವರ್ಷದಿಂದ ನೆಹರು ಯುವ ಕೇಂದ್ರದ ಮಹಾನಿರ್ದೇಶಕರಾಗಿ ಈ ಭಾಗದ ಯುವಕರ ಕ್ರೀಡಾ ಬದುಕಿಗೆ ಹೊಸ ಆಯಾಮ ಕಲ್ಪಿಸಿದ ಸಲೀಮ್ ಯುವ ಮತದಾರರ ಮನಸ್ಸನ್ನೂ ಗೆದ್ದಿದ್ದಾರೆ.

ಉದಾಸಿ ಫ್ಯಾಮಿಲಿಯ ಭಂಡ ರಾಜಕಾರಣದಿಂದ ಬೇಸತ್ತು ಹೋಗಿದ್ದ ಹಾವೇರಿ ಮತದಾರರಿಗೆ ಸಲೀಮ್ ಪರ್ಯಾಯ ಆಯ್ಕೆಯಾಗಿ ಕಾಣುತ್ತಿರುವುದರಲ್ಲಿ ಅಚ್ಚರಿಯೇನೂ ಇಲ್ಲ. ಅದಕ್ಕೆ ತಕ್ಕಂತೆ ವೀರಶೈವ ಪಂಚಮಸಾಲಿಗಳೂ ಉದಾಸಿಯ ಸೋಲಿಗೆ ಟೊಂಕಕಟ್ಟಿ ಮೊಳೆ ಹೊಡೆದಿರೋದು ಚುನಾವಣೆಗೂ ಮುನ್ನವೇ ಫಲಿತಾಂಶವನ್ನು ಸ್ಪಷ್ಟವಾಗಿಸಿವೆ.



ಉದಾಸಿ

● ವಿನಯ್

...ಶುಗರ್ ಸಮಸ್ಯೆ ಬಗ್ಗೆ ಮಾತನಾಡಿರುವುದು, ...ಯುವಜನರನ್ನು ತಮ್ಮ ಮಾತಿನ ಸಂವಾದದಿಂದ ...ಸೆಳೆಯುವುದು, ಚಿತ್ರನಟಿ ಎಂಬ ಗ್ಲಾಮರ್ ಹೊಳಪು ...ಹೊಂದಿರುವುದು ಪ್ಲಸ್‌ಪಾಯಿಂಟ್ ಆದರೆ ಈ ಬಾರಿಯೂ ...ರಮ್ಯಾ ಆಯ್ಕೆಯಾಗಿ ಪುಟ್ಟರಾಜು ಮಕಾಡೆ ಮಲಗುವ ...ಸಾಧ್ಯತೆಗಳೇ ಅಧಿಕ. ಮತ್ತೊಂದು ಗಮನಾರ್ಹ ...ಸಂಗತಿಯೆಂದರೆ ಮಹಿಳಾ ಮತದಾರರು ರಮ್ಯಾ ಪರ ...ಒಲವು ತೋರುತ್ತಿದ್ದಾರೆ.

ಉಳಿದವರ ಪಾಡು

...ಕಾಂಗ್ರೆಸ್-ಜೆಡಿಎಸ್‌ನ ನೇರಾನೇರ ಹಣಾಹಣಿಯ ...ಹೊರತಾಗಿ ಉಳಿದವರು ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ. ...ಬಿಜೆಪಿಯಿಂದ ಸ್ಪರ್ಧಿಸಿರುವ ಬಿ.ಶಿವಲಿಂಗಯ್ಯ, ಮಂಡ್ಯ ...ಕ್ಷೇತ್ರದಲ್ಲೆಲ್ಲೂ ಕಾಣದ ಮೋದಿ ಅಲೆಯಲ್ಲಿ ತೇಲುವ ...ಹಗಲುಗನಸು ಕಾಣುತ್ತಿದ್ದಾರೆ. ಶಿವಲಿಂಗಯ್ಯನವರ ...ಬಳಿಯಿರುವ ಹಣದ ಥೈಲಿ ಕಂಡೇ ಅವರನ್ನು ಮರಳು ...ಮಾಡಿ ಚುನಾವಣೆಗೆ ನಿಲ್ಲಿಸಿರುವ ಮೂರು ಮುಕ್ಕಾಲಷ್ಟಿರುವ ...ಬಿಜೆಪಿ ನಾಯಕರ ವರ್ತನೆ ಶಿವಲಿಂಗಯ್ಯನಿಗೆ ಈಗಾಗಲೇ ...ಬೇಸರ ತರಿಸಿದೆ. ತಮ್ಮ ಕೈಗೆ ಪಾರ್ಟಿ ಫಂಡ್ ನೀಡದೆ ...ಕೆಳಹಂತದ ಮೂಲ ನಾಯಕರ ಕೈಗೆ ಹಣ ನೀಡಿರುವುದು ಅಭ್ಯರ್ಥಿ ಶಿವಲಿಂಗಯ್ಯನಿಗೆ ಅಸಮಾಧಾನ ತರಿಸಿದೆ. ಬಿಜೆಪಿ ಏನೇ ಬೊಂಬಡಾ ಹೊಡೆದರೂ ಶಿವಲಿಂಗಯ್ಯ 3ನೇ ಸ್ಥಾನಕ್ಕೆ ಕುಸಿಯುವುದನ್ನು ಯಾರೂ ತಪ್ಪಿಸಲಾಗದು.


ಇನ್ನು ಬಿಎಸ್‌ಪಿಯ ಕೃಷ್ಣಮೂರ್ತಿ ದಲಿತರ ಮತಗಳನ್ನು ಒಂದಷ್ಟು ಪ್ರಮಾಣದಲ್ಲಿ ಬಾಚಿಕೊಂಡರೆ, ಆಮ್‌ಆದ್ಮಿ ಪಕ್ಷದ ಡಾ.ಹನುಮಂತಪ್ಪ ಪಡೆಯುವ ಮತಗಳು ಕೆಲವು ಸಾವಿರ ಅಷ್ಟೇ. ಒಟ್ಟಾರೆ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಈ ಬಾರಿ ಕಾಂಗ್ರೆಸ್ ಹಾಗೂ ಜೆಡಿಎಸ್‌ಗೆ ಸಮಾನ ಅವಕಾಶಗಳಿದ್ದು, ಯಾರೇ ಗೆದ್ದರೂ ಅಂತರ 15 ರಿಂದ 20 ಸಾವಿರ ಮಾತ್ರ ಎಂಬುದು ಇವತ್ತಿನ ಚಿತ್ರಣ. ಚುನಾವಣೆಯ ಹಿಂದಿನ ಒಂದೆರಡು ದಿನಗಳಲ್ಲಿ ಹಂಚಿಕೆಯಾಗುವ ಹಣದ ಕರಾಮತ್ತೇ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಕಾಂಗ್ರೆಸ್-ಜೆಡಿಎಸ್ ಪಕ್ಷಗಳೆರಡೂ ಹಣವನ್ನು ಸುರಿಯಲು ಸಜ್ಜಾಗಿವೆ.

ಈ ಚುನಾವಣೆ ಹೆಚ್ಚೆಂದರೆ ಮಂಡ್ಯದ ರಾಜಕೀಯ ಚಿತ್ರಣವನ್ನು ಬದಲಿಸಬಹುದೇ ಹೊರತು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ನಿಟ್ಟಿನಿಂದ ಅಂತಹ ಮಹತ್ವದ್ದೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ.

● ಮಂಡ್ಯ ನಾಗೇಶ್


ಮೋದಿ ಏಕೆ ಪ್ರಧಾನಿಯಾಗುವುದಿಲ್ಲ?

ನರೇಂದ್ರ ಮೋದಿ ಪ್ರಧಾನಿಯಾಗಬಾರದು ಎನ್ನುವುದು 'ಪತ್ರಿಕೆ'ಯ ಆಶಯ; ಹಾಗಾಗಿ ಪ್ರತೀ ಕ್ಷೇತ್ರದಲ್ಲೂ ಬಿಜೆಪಿ ಸೋಲುತ್ತದೆ ಎನ್ನುವ ರೀತಿಯಲ್ಲಿ ಬಿಂಬಿಸಲಾಗುತ್ತದೆ ಎಂದು ಬಿಜೆಪಿಯ ಬೆಂಬಲಿಗರು ಹೇಳುತ್ತಾರೆ. ಅವರ ಪ್ರಕಾರ ಈಗಾಗಲೇ ಮೋದಿ ಪ್ರಧಾನಿಯಾಗಿ ಆಗಿದೆ. ಆದರಲ್ಲೂ



ಎನ್‌ಡಿಟಿವಿ, ಸಿಎನ್‌ಎನ್-ಐಬಿಎನ್ ಮತ್ತು ಲೋಕನೀತಿ-ವೀಕ್ ಮಾಡಿದ ಸಮೀಕ್ಷೆಗಳು ಎನ್‌ಡಿಎ ಯನ್ನು 230ರ ಗಡಿ ದಾಟಿಸಿವೆ. ಇದು ಮೋದಿ ವೇವ್ (ಅಲೆ) ಅನ್ನು ಏರಿಸುವ ಪ್ರಯತ್ನಗಳಂತೆಯೇ ತೋರಲು ಕಾರಣಗಳಿವೆ. ಚುನಾವಣೆ ಹತ್ತಿರ ಬಂದಹಾಗೆ ಏನಾಗುತ್ತೋ ಗೊತ್ತಿಲ್ಲ, ಸ್ವಲ್ಪ ಹೀಗೂ ಆಗಬಹುದು, ಸ್ವಲ್ಪ ಹಾಗೂ ಆಗಬಹುದು ಎಂದು ಎಲ್ಲರೂ ಹೇಳುತ್ತಾರೆ. ಅದು ತಮ್ಮ ನಿರೀಕ್ಷೆಗಿಂತ ವಾಸ್ತವ ಭಿನ್ನ ಆದರೆ ಯಾವುದಕ್ಕೂ ಇರಲಿ ಎಂದು. ಆದರೆ ಈ ಎಲ್ಲಾ ಸಮೀಕ್ಷೆಗಳು, ಸಮೀಕ್ಷೆ ಗಳಾಚೆಗೂ ಮೋದಿಯನ್ನು ಪಕ್ಷಕ್ಕೂ, ದೇಶಕ್ಕೂ ಮೀರಿ ಬಿಂಬಿಸುತ್ತಿರುವುದು ಮೋದಿ ಅಲೆಯನ್ನು ಕೃತಕವಾಗಿ ಸೃಷ್ಟಿಸು ವುದಕ್ಕೋಸ್ಕರ ಮಾತ್ರವೇ ಆಗಿದೆ. ಇದರಲ್ಲಿ ಮೋದಿಯ ಕೂಟ ಯಶಸ್ಸನ್ನು ಪಡೆದಿಲ್ಲ ಎನ್ನುವುದಕ್ಕೆ ಹಲವು ನಿದರ್ಶನಗಳಿವೆ. ಲೋಕನೀತಿ-ವೀಕ್ ಜೊತೆ ಸಿಎಸ್‌ಡಿಎಸ್ ನಡೆಸಿದ ಇನ್ನೊಂದು ಸಮೀಕ್ಷೆಯೇ ಅದನ್ನು ಹೇಳುತ್ತದೆ. ಆದರೆ ಸಮೀಕ್ಷೆಗಳನ್ನೂ ಕೊಳ್ಳಬಹುದು ಎನ್ನುವುದು ವೇವ್ ಸೃಷ್ಟಿಸುವ ತಮ್ಮ ಕಾಯಕವನ್ನು ಮುಂದುವರೆಸಿದ್ದಾರೆ.

2004 ಮತ್ತು 2009ರಲ್ಲಿ ಎನ್‌ಡಿಎ ಇನ್ನೊಂದು ಅವಧಿಗೆ ಮುಂದುವರೆಯುತ್ತದೆ ಮತ್ತು ಯುಪಿಎ-1 ಸೋಲುತ್ತದೆ ಎಂದು ಹೇಳಿದ ಸಮೀಕ್ಷೆಗಳ ಅನಿಸಿಕೆಗಳು




ಅವರ ನಿರೀಕ್ಷೆಗೂ ಮೀರಿ 'ಮೋದಿ ಅಲೆ' ದೇಶಾದ್ಯಂತ ಎದ್ದಿದೆ. ಅವರು ನಿರೀಕ್ಷೆಯೇ ಮಾಡಿರದ ಕಡೆ ಸಹ ಬಿಜೆಪಿ ಗೆಲ್ಲುತ್ತದೆ. ಬಿಜೆಪಿಯೇ 272ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲದಿದ್ದರೂ, ಎನ್‌ಡಿಎ ಗೆದ್ದುಬಿಡುತ್ತದೆ. ಇನ್ನು ಅದಕ್ಕೂ ಹೆಚ್ಚಿನ ಪಕ್ಷಗಳು ಕೊನೆಗೆ ಅನಿವಾರ್ಯವಾಗಿ ಮೋದಿ ಪ್ರಧಾನಿಯಾಗುವುದಕ್ಕೆ ಬೆಂಬಲ ಕೊಡುತ್ತಾರೆ.

ಆದರೆ ವಾಸ್ತವವೇನು?

ಮೋದಿ ಪ್ರಧಾನಿಯಾಗುವುದು ದೇಶಕ್ಕೆ ಅಪಾಯ ಎನ್ನುವ ಕಾರಣಕ್ಕೆ ಅವರು ಆಗಬಾರದು ಎಂಬ ಬಯಕೆಯಿಂದ ಆಗುವುದಿಲ್ಲ ಎಂದು ಬಿಂಬಿಸಬೇಕೇ? ಇಲ್ಲ, ಸರಳ ಅಂಕಗಣಿತ ಮತ್ತು ಸಾಮಾನ್ಯ ಜ್ಞಾನವಷ್ಟೇ ಎನ್‌ಡಿಎ ಬಹುಮತ ಪಡೆಯಲು ಸಾಧ್ಯವಿಲ್ಲ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ. ಆದರೆ ಅಂಕಗಣಿತವನ್ನಾಗಲೀ, ಸಾಮಾನ್ಯ ಜ್ಞಾನವನ್ನಾಗಲೀ ಅಥವಾ ಲೆಕ್ಕಾಚಾರವನ್ನಾಗಲೀ ಮಾಡಕೂಡದು; ಸುಮ್ಮನೆ ನಾವು ಹೇಳಿದ್ದನ್ನೇ ಕೇಳಬೇಕು ಎಂದು ಮಾಧ್ಯಮಗಳು ಅಪ್ಪಣೆ ಕೊಡಿಸುತ್ತಿವೆ.

ಸಿ-ವೋಟರ್ ಸಂಸ್ಥೆಯ ಮೇಲೆ ನಡೆಸಿದ ಕುಟುಕು ಕಾರ್ಯಾಚರಣೆಯಲ್ಲಿ ಬಯಲಾಯಿತು. ಆ ನಂತರ ಸಿ-ವೋಟರ್ ಮಾತ್ರ ಸಮೀಕ್ಷೆ ಮಾಡುವುದನ್ನು ನಿಲ್ಲಿಸಿತು. ಉಳಿದವರು





ರಾಜ್ಯ	ಒಟ್ಟು	ಕಾಂಗ್ರೆಸ್	ಬಿಜೆಪಿ	ಇತರೆ	ಬಿಜೆಪಿಯ ಅತ್ಯಂತ ಹೆಚ್ಚಿನ ಸಾಧ್ಯತೆ
		(2009)	(2009)	(2009)	(2014)
ಆಂಧ್ರ	42	33	00	(ತೆಲುಗುದೇಶಂ 6)	01
ಅಸ್ಸಾಂ	14	07	04		05
ಬಿಹಾರ	40	02	12	(ಜೆಡಿಯು 20)	17
ಗುಜರಾತ್	26	11	15		22
ಹರಿಯಾಣ	10	09	00		05
ಹಿಮಾಚಲಪ್ರದೇಶ	04	01	03		03
ಕರ್ನಾಟಕ	28	06	19		10
ಕೇರಳ	20	13	00		00
ಮ.ಪ್ರದೇಶ	29	16	12		20
ಮಹಾರಾಷ್ಟ್ರ	48	17	09	(ಶಿವಸೇನೆ 11, ಎನ್‌ಸಿಪಿ 8)	14
ಒರಿಸ್ಸಾ	21	06	00	(ಬಿಜು ಜನತಾದಳ 14)	05
ಪಂಜಾಬ್	13	08	01		03
ರಾಜಸ್ಥಾನ	25	20	04		21
ತಮಿಳುನಾಡು	39	08	00	(ಡಿಎಂಕೆ 18, ಅಣ್ಣಾ ಡಿಎಂಕೆ 9)	00
ಉ.ಪ್ರದೇಶ	80	21	10	(ಬಿಎಸ್‌ಪಿ 20, ಎಸ್‌ಪಿ 21)	35
ಪ.ಬಂಗಾಳ	42	06	01	(ಟಿಎಂಸಿ 19, ಸಿಪಿಎಂ 9)	02
ಛತ್ತೀಸ್‌ಗಢ	11	01	10		11
ಜಾರ್ಖಂಡ್	14	01	08		11
ಉತ್ತರಖಂಡ	05	05	00		03
ದೆಹಲಿ	07	07	00		03

ಸುಳ್ಳಾದವು ಎನ್ನುವುದೊಂದೇ ಮೇಲಿನ ಮಾತುಗಳಿಗೆ ಕಾರಣವಲ್ಲ, ಅಕ್ಟೋಬರ್‌ನಲ್ಲಿ ಇದೇ ಪತ್ರಿಕೆಯ ಅಂಕಣದಲ್ಲಿ 'ಈ ಸಾರಿ ಮೋದಿ ಗೆಲ್ಲುವುದಿಲ್ಲ; ಆದರೆ...' ಎಂಬ ಲೇಖನದಲ್ಲಿ ಇದಕ್ಕೆ ರಾಜ್ಯವಾರು ಲೆಕ್ಕಾಚಾರವನ್ನು ನೀಡ ಲಾಗಿತ್ತು. ಅಲ್ಲಿಂದ ಇಲ್ಲಿಗೆ ಪ್ರಮಾಣಾತ್ಮಕವಾದ ಬದಲಾವಣೆ ಆಗಿದೆ ಮತ್ತು ಅದು ಬಿಜೆಪಿಯ ಪರವಾಗಿದೆ. ಆದರೆ ಅದು ಗುಣಾತ್ಮಕವಾದ ಬದಲಾವಣೆಯಾಗಿಲ್ಲ ಹಾಗೂ ಅದೇ ಲೇಖನದಲ್ಲಿ ಹೇಳಲಾಗಿದ್ದ ಅಸ್ಥಿರ ಸರ್ಕಾರದ ಸೂಚನೆ ಇಂದಿಗೂ ವಾಸ್ತವದಂತೆಯೇ ತೋರುತ್ತಿದೆ.

ಅಕ್ಟೋಬರ್‌ನಲ್ಲಿ 'ಪತ್ರಿಕೆ'ಯಲ್ಲಿ ಬಂದಿದ್ದ ಲೇಖನದ ಸಾರಾಂಶವನ್ನು ನೋಡೋಣ.

ಈ ಸಾರಿ ಮೋದಿ ಗೆಲ್ಲುವುದಿಲ್ಲ; ಆದರೆ...

ಆದರೆ ಈ ಸಾರಿ ಮೋದಿ ಪ್ರಧಾನಿಯಾಗಲು ಸಾಧ್ಯವೇ ಇಲ್ಲ, ಸದ್ಯದ ದೇಶದ ರಾಜಕೀಯ ಪರಿಸ್ಥಿತಿ ಮತ್ತು ಲಭ್ಯವಿರುವ ಅಂಕಿ-ಅಂಶ ಅದಕ್ಕೆ ಪೂರಕವಾಗಿಲ್ಲ, ಕೆಲವು ಸಮೀಕ್ಷೆಗಳು ಕಾಂಗ್ರೆಸ್‌ಗಿಂತ ಬಿಜೆಪಿ, ಯುಪಿಎಗಿಂತ ಎನ್‌ಡಿಎ ಹೆಚ್ಚಿನ ಸೀಟುಗಳನ್ನು ಗೆಲ್ಲುತ್ತವೆ ಎಂದು ಹೇಳಿರುವುದು ವಾಸ್ತವಕ್ಕೆ ದೂರವಾಗಿದೆ. ಎಲ್ಲಾ ಲೆಕ್ಕಾಚಾರಗಳನ್ನೂ ಬಿಜೆಪಿಯ ಪರವಾಗಿ ನಾವು ಮಾಡಿದರೂ ಬಿಜೆಪಿ 150 ಸೀಟುಗಳನ್ನು ದಾಟುವುದು ಕಷ್ಟ. ಹಾಗಾಗಿಯೇ ಅವರೂ ಸಹ 272+ ಎಂಬ ಒಂದು ಗುರಿಯನ್ನು ಇಟ್ಟುಕೊಂಡು ತಿಣುಕುತ್ತಿದ್ದಾರೆ. ಅದು ಯಾಕೆ ಎಂಬುದನ್ನು ಅರ್ಥಮಾಡಿಕೊಳ್ಳುವ ಮುನ್ನ 2009ರ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ಸಾಧನೆ ಏನು ಎಂಬುದನ್ನು ನೋಡೋಣ. ಮುಖ್ಯವಾಗಿ 518 (ಒಟ್ಟು ಸೀಟುಗಳು 543+2) ಲೋಕಸಭಾ ಕ್ಷೇತ್ರಗಳಿರುವ 20 ಪ್ರಮುಖ ರಾಜ್ಯಗಳ ಅಂಕಿ-ಅಂಶಗಳನ್ನು (ಬಾಕ್ಸ್ ನೋಡಿ) ನೋಡಿದರೆ ಕಾಂಗ್ರೆಸ್‌ಗೆ 194 ಸೀಟುಗಳೂ (28% ಮತಗಳಿಕೆ), ಬಿಜೆಪಿಗೆ 112 ಸೀಟುಗಳೂ (18.8% ಮತಗಳಿಕೆ) ಬಂದಿದ್ದವು. ಈಗ ಬಿಜೆಪಿ 200 ಸೀಟುಗಳನ್ನು ಪಡೆಯಬೇಕೆಂದರೆ ಏನಾಗಬೇಕು?

ಮೊದಲು ಅದು ಇರುವ ಸೀಟುಗಳನ್ನು ಉಳಿಸಿಕೊಳ್ಳಬೇಕು ಮತ್ತು ತನ್ನ ಪ್ರಾಬಲ್ಯವಿರುವ ಕಡೆ ಸೀಟುಗಳನ್ನು ಹೆಚ್ಚಿಸಿಕೊಳ್ಳಬೇಕು ಮತ್ತು ಇತರೆಡೆ ಕಾಂಗ್ರೆಸ್ ಅಥವಾ ಇತರ ಪಕ್ಷಗಳ ಸೀಟುಗಳನ್ನು ಕಸಿದುಕೊಳ್ಳಬೇಕು. ಈ ಮೂರರಲ್ಲಿ ಯಾವ್ಯಾವುದರ ಸಾಧ್ಯತೆ ಎಷ್ಟೆಷ್ಟು ನೋಡೋಣ.

ಬಿಜೆಪಿಯ ಪ್ರಾಬಲ್ಯವಿರುವ ಕಡೆ ಸೀಟು ಹೆಚ್ಚಿಸಿಕೊಳ್ಳುವುದು: 2009ರ ಚುನಾವಣೆಯ ಫಲಿತಾಂಶದ ಆಧಾರದಲ್ಲಿ ಹೇಳುವುದಾದರೆ ಅದರ ಪ್ರಬಲ ರಾಜ್ಯಗಳು ಕರ್ನಾಟಕ (ಅತ್ಯಂತ ಹೆಚ್ಚು ಎಂಪಿಗಳು ಇದ್ದದ್ದು ಕರ್ನಾಟಕದಿಂದಲೇ 28ರಲ್ಲಿ 19), ಮಧ್ಯ ಪ್ರದೇಶ (29ರಲ್ಲಿ 16), ಗುಜರಾತ್ (26ರಲ್ಲಿ 15), ಛತ್ತೀಸ್‌ಗಢ (11ರಲ್ಲಿ 10), ಜಾರ್ಖಂಡ್ (14ರಲ್ಲಿ 8). ಅಂದರೆ ಅದು ಒಟ್ಟು ಪಡೆದುಕೊಂಡ ಸೀಟುಗಳಲ್ಲಿ ಅರ್ಧಕ್ಕೂ ಹೆಚ್ಚು (68)ಅನ್ನು ಈ ರಾಜ್ಯಗಳಿಂದಲೇ ಪಡೆದುಕೊಂಡಿತ್ತು,

⏭ 15

ಮೋದಿ ಅಲೆ ಇಲ್ಲ ಅಂತ ಬಿಜೆಪಿಯವರಿಗೆ ಗೊತ್ತು

ಹೌದು, ಬಿಜೆಪಿಯಲ್ಲಿ ಆಂತರಿಕವಾಗಿ ನಡೆಯುವ ಗಹನವಾದ ಚರ್ಚೆಗಳಲ್ಲಿ ಇದು ಪ್ರಮುಖ ವಿಷಯ. ಏಕೆಂದರೆ ಮೋದಿ ಅಲೆಯೇ ಬಿಜೆಪಿಯನ್ನು ಗೆಲ್ಲಿಸುವುದಾಗಿದ್ದರೆ, ಕೋಮು ಗಲಭೆ ಸೃಷ್ಟಿಸಲು ಅಮಿತ್ ಷಾನನ್ನು ಉತ್ತರ ಪ್ರದೇಶಕ್ಕೆ ಕಳಿಸುವ ಅಗತ್ಯವೇನಿತ್ತು? ಸ್ವತಃ ಮೋದಿಗೇ ತಾನು ಸೋಲಬಹುದು ಎಂಬ ಸ್ವಲ್ಪವಾದರೂ ಆತಂಕ ಇಲ್ಲದಿದ್ದರೆ, ಈಚಿನ ವರ್ಷಗಳಲ್ಲೆಲ್ಲಾ ಬಿಜೆಪಿಯೇ ಗೆಲ್ಲುತ್ತಾ ಬಂದಿರುವ ವಾರಣಾಸಿ ಮತ್ತು ವಡೋದರಾ ಎರಡೂ ಕಡೆ ಸ್ಪರ್ಧಿಸುವ ಅಗತ್ಯವೇನಿತ್ತು? ಎಲ್ಲಾ ಪಕ್ಷಗಳೂ ಪ್ರಣಾಳಿಕೆ ಬಿಡುಗಡೆ ಮಾಡುವ ತನಕ ಕಾದಿದ್ದು ಏಕೆ? ಮೋದಿಯನ್ನು ಎನ್‌ಡಿಯೇತರ ಪಕ್ಷಗಳು ಒಪ್ಪಲಿಕ್ಕಿಲ್ಲ ಎನ್ನುವ ಭಯದ ಕಾರಣದಿಂದಲೇ ಮೋದಿಯ ಕಟ್ಟಾ ಬೆಂಬಲಿಗ ಅರುಣ್ ಜೇಟ್ಲಿಯನ್ನು ಮೊಟ್ಟಮೊದಲ ಬಾರಿಗೆ ಲೋಕಸಭಾ ಚುನಾವಣೆಗೆ (ಇಲ್ಲಿಯವರೆಗೆ ಅತ ರಾಜ್ಯಸಭಾ ಸದಸ್ಯನಾಗಿದ್ದದ್ದು) ನಿಲ್ಲಿಸಿದ್ದೇಕೆ? ಇವಕ್ಕೆ ಕಾರಣ ಸ್ಪಷ್ಟವಾಗಿದೆ. ಬಿಜೆಪಿಯ ನಾಯಕತ್ವಕ್ಕೆ ಅಲೆಯ ಬಗ್ಗೆ ಖಾತರಿಯಿಲ್ಲ.

ಆದರೆ ಕಾರ್ಪೊರೇಟ್ ಮೀಡಿಯಾ ಮತ್ತು ಬಿಜೆಪಿಯ ಸಂಬಳದ ಮೇಲೆ ಕೆಲಸ ಮಾಡುವ ಅಂತರ್ಜಾಲಿಗರು ಈ ಅಲೆಯನ್ನು ಸೃಷ್ಟಿಸಲು ಇನ್ನಿಲ್ಲದ ಶ್ರಮ ಹಾಕಿ ಪ್ರಯತ್ನ ಪಟ್ಟಿದ್ದಾರೆ. ಮತ್ತು ಅದರಲ್ಲಿ ಯಶಸ್ವಿಯಾಗಿದ್ದಾರೆ; ಮಾಧ್ಯಮಗಳಲ್ಲಿ ಮತ್ತು ಅಂತರ್ಜಾಲದಲ್ಲಿ ಈ ಅಲೆ ಸೃಷ್ಟಿಯಾಗಿದೆ. ಆದರೆ ಅದೇ ಅಲೆ ದೇಶದ ಜನತೆಯ ಮಧ್ಯೆ ಸೃಷ್ಟಿಯಾಗಿದೆ ಎಂದು ಹೇಳಲು ಬರುವುದಿಲ್ಲ, ಆದರೆ ಒಂದೆರಡು ಲಾಭಗಳು ಬಿಜೆಪಿಗೆ ಆಗಿವೆ. ಬಿಜೆಪಿಯ ಸ್ಥಿತಿ ತೀರಾ ಕೆಳಗೆ ಇಳಿದಿತ್ತು; ಯುಪಿಎಯ ಕಳಪೆ ಸಾಧನೆ ಮತ್ತು ಹಗರಣಗಳ ಹೊರತಾಗಿಯೂ ಬಿಜೆಪಿಯ ಕಾರ್ಯಕರ್ತರ ಮನೋಸ್ಥೈರ್ಯ ಕುಸಿದಿತ್ತು. ಅದನ್ನು ಮೇಲೆ ತರುವಲ್ಲಿ ಮೋದಿ ಅಲೆಯ ಮಾಧ್ಯಮ ಸೃಷ್ಟಿಯು ಸಫಲವಾಗಿದೆ. ಅದರ ಫಲವಾಗಿ ಮೋದಿ, ಮೋದಿ ಎನ್ನುವ ಜಪವನ್ನು ಬಿಜೆಪಿಯ ಕಾರ್ಯಕರ್ತರು ಮತ್ತು ಬಿಜೆಪಿಯ ಮತದಾರರು ಗಟ್ಟಿಯಾಗಿ ಮಾಡುತ್ತಿದ್ದಾರೆ.


ಈ ರೀತಿ ಬಿಜೆಪಿಯ ಖಚಿತ ಮತದಾರರು ಪಡೆದುಕೊಂಡಿರುವ ಸ್ಥೈರ್ಯವು ಅವರ ಗಂಟಲಿಗೆ ಬಲ ತುಂದುಕೊಟ್ಟಿದ್ದು, ಆ ಗಂಟಲಿನ ಶಕ್ತಿ ಕೆಲವರಲ್ಲಿ ಮೋದಿ ಅಲೆ ಸೃಷ್ಟಿಯಾಗಿದೆಯೆಂಬ ಆತಂಕವನ್ನೂ, ಮತ್ತೆ ಕೆಲವರಲ್ಲಿ ಸಂತಸವನ್ನೂ ತಂದಿದೆ. ಇದನ್ನು ಸಿಎಸ್‌ಡಿಎಸ್‌ನ ಒಂದು ಸಮೀಕ್ಷೆಯು ನಿರಾಕರಿಸುತ್ತದೆ. ಅದರ ಪ್ರಕಾರ ಬಿಜೆಪಿಯ ಮತದಾರರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ತಾವು ಮತ ಹಾಕುತ್ತಿರುವುದು ಮೋದಿ ಕಾರಣಕ್ಕಲ್ಲ ಎಂದು ಹೇಳಿದ್ದಾರೆ. ಕಾಂಗ್ರೆಸ್ ನೇತೃತ್ವದ ಯುಪಿಎ ವಿರುದ್ಧ ಮಡುಗಟ್ಟಿದ್ದ ಸಿಟ್ಟು, ಅದರ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಇರುವ ಆಕ್ರೋಶ ಪರ್ಯಾಯವಾಗಿ ಬಿಜೆಪಿಗೆ ಓಟು ಹಾಕುವಂತೆ ಮಾಡಿರುವುದು ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ. ಇದು ದೇಶಾದ್ಯಂತ ಕಂಡುಬರುತ್ತಿರುವ ವಿದ್ಯಮಾನವಾದರೆ, ಒಂದೊಂದು ರಾಜ್ಯದಲ್ಲೂ ಭಿನ್ನವಾದ ಅಂಶಗಳು ವ್ಯಕ್ತವಾಗಿವೆ.

ಉದಾಹರಣೆಗೆ ಮಧ್ಯಪ್ರದೇಶದಲ್ಲಿ ಬಿಜೆಪಿಯ ಮತದಾರರಲ್ಲಿ 32% ಜನರು ಮೋದಿಯ ಕಾರಣಕ್ಕೆ ಮತ ಹಾಕುತ್ತೇವೆಂದು ಹೇಳಿದ್ದರೆ, 43% ಜನರು ಪಕ್ಷಕ್ಕೆ ಮತ ಹಾಕುವುದಾಗಿ ಹೇಳಿದ್ದಾರೆ. ಪ್ರಧಾನಿ ಯಾರಾಗಬೇಕು ಎಂದು ಈ ಜನರನ್ನು ಕೇಳಿದಾಗಲೂ ಅವರು ಮೋದಿಗಿಂತ ಹೆಚ್ಚು ಶಿವರಾಜ್‌ಸಿಂಗ್ ಚೌಹಾಣ್‌ರನ್ನು ಆಯ್ಕೆ ಮಾಡಿಕೊಂಡಿದ್ದಾರೆ. ರಾಜಸ್ಥಾನದಲ್ಲೂ ಬಿಜೆಪಿಯ ಮತದಾರರಲ್ಲಿ 29% ಜನರು ಮಾತ್ರ ಮೋದಿಯ ಕಾರಣಕ್ಕೆ ಬಿಜೆಪಿಗೆ ಮತ ಹಾಕುತ್ತೇವೆಂದು ಹೇಳಿದ್ದಾರೆ.

ಆದರೆ ಬಿಜೆಪಿ ಅಧಿಕಾರದಲ್ಲಿಲ್ಲದ ರಾಜ್ಯಗಳಲ್ಲಿ, ಅಂದರೆ ತಮಿಳುನಾಡು, ಪ.ಬಂಗಾಳ ಮತ್ತು ಆಂಧ್ರಪ್ರದೇಶದಲ್ಲಿ ಬಿಜೆಪಿಗೆ ಮತ ಹಾಕುವವರು ಮೋದಿಯ ಕಾರಣಕ್ಕೆ ಹಾಕುತ್ತೇವೆಂದು ಹೇಳಿರುವವರು ಹೆಚ್ಚು. ಆದರೆ ಇವು ಎಂಪಿ ಸೀಟುಗಳಾಗಿ ಪರಿವರ್ತನೆಯಾಗುವ ಸಾಧ್ಯತೆ ಕಡಿಮೆ. ಮೋದಿಯ ಸುತ್ತ ಖರ್ಚು ಮಾಡಿರುವ ಸಾವಿರಾರು ಕೋಟಿ ಬಿಜೆಪಿಗೆ ತಂದುಕೊಟ್ಟಿರುವುದು ಇಷ್ಟೇ ಆಗಿದೆ. ●







ನಾವಿರೋದೇ ಹೀಗೆ

ಸುಮ್ಮನೆ ತರ್ಕಕ್ಕೆ, ಮಮತಾ ಅಥವಾ ಜಯಲಲಿತ ಅಥವಾ ಮಾಯಾವತಿ, ಇವರಲ್ಲಿ ಯಾರಾದರೊಬ್ಬರು ಮೋದಿ ಪ್ರಧಾನಿ ಆಗುವುದು ತಮಗೆ ಅನುಕೂಲಕರವಲ್ಲ ಎಂದು ತೀರ್ಮಾನಿಸಿದರೆ ಬಿಜೆಪಿ ಉಭಯ ಸಂಕಟದಲ್ಲಿ ಸಿಲುಕಿಕೊಳ್ಳಲಿದೆ.

...ೇ 16ರಂದು ...ಣೆಯ ಫಲಿತಾಂಶ ...ದಾಗ ಯಾವ ಪಕ್ಷಗಳು ..., ನಾಲ್ಕನೆ ಮತ್ತು ...ಸ್ಥಾನ ಪಡೆದಿರುತ್ತವೆ? ...ಮೊದಲೆರಡು ಸ್ಥಾನಗಳ ...ಜಯಲಲಿತಾರ ಆಲ್ ...ಯಾ ಅಣ್ಣಾ ದ್ರಾವಿಡ ...ತ್ರ ಖಜಗಂ, ಮಮತಾ ...' ಅವರ ಆಲ್ ...ಯಾ ತೃಣಮೂಲ ... ಮತ್ತು ಮಾಯಾವತಿ ...ಬಹುಜನ್ ಸಮಾಜ ...ಯುತ್ತವೆಯೇ? ಈ ...ಯ ಮಹಿಳಾ ...ಯಕರು ಮುಂದಿನ ಸರ್ಕಾರದ ...ಷಗಳನ್ನಲ್ಲದೆ ಯಾರು ಪ್ರಧಾನಿ ಆಗುತ್ತಾರೆ ...ನನ್ನೂ ನಿರ್ಧರಿಸಲಿದ್ದಾರೆಯೇ?


... ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ...ಯೇ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದೆ ಎಂಬುದೇ ...ಲ್ಲರ ಅಭಿಪ್ರಾಯವಾಗಿದೆ. ಆದರೆ, ಸಾರ್ವಜನಿಕವಾಗಿ ...ಯ ವಕ್ತಾರರು ಏನನ್ನೇ ಹೇಳುತ್ತಿದ್ದರೂ, ಕೇಸರಿ ...ಲ್ಲಿರುವವರು ಖಾಸಗಿಯಾಗಿ ಹೇಳುತ್ತಿರುವುದೇನೆಂದರೆ ...9 ಮತ್ತು 1999ರಲ್ಲಿ ಬಿಜೆಪಿ ಪಡೆದದ್ದಕ್ಕಿಂತ ಸಾಕಷ್ಟು ...ಸ್ಥಾನಗಳನ್ನು ಈ ಬಾರಿ ಬಿಜೆಪಿ ಗೆದ್ದರೆ ಮಾತ್ರ ... ಮೋದಿ ಪ್ರಧಾನಿ ಆಗುವ ಸಾಧ್ಯತೆಗಳಿವೆ.

...ಜೆಪಿ ನೇತೃತ್ವದ ನ್ಯಾಷನಲ್ ಡೆಮಾಕ್ರಾಟಿಕ್ ...ನ್ಸ್ ಮೈತ್ರಿಕೂಟ ಹೆಚ್ಚು ಸ್ಥಾನಗಳನ್ನು ಗೆದ್ದರೂ ...ಸಭೆಯಲ್ಲಿ 272 ಸಂಸದರ ಬೆಂಬಲವನ್ನು ...ಬೇಕಾದರೆ ಅದು ಇನ್ನೊಂದು ಪಕ್ಷದ ನೆರವನ್ನು ...ಬೇಕಾಗುತ್ತದೆ ಎಂಬುದನ್ನು ಇವರು ಒಪ್ಪುತ್ತಾರೆ. ...ಅಂತಹ ನೆರವು ಪುಕ್ಕಟೆಯಾಗಿ ಸಿಗುವುದಿಲ್ಲ. ...ದರೆ ಅವರು ಮೋದಿಯ ಬದಲಾಗಿ ಬೇರೆ ...ದರೂ ಪ್ರಧಾನಿ ಆಗಲಿ ಎಂದು ಕರಾರು ಹಾಕುತ್ತಾರೆ. ...ದರು ಆದರೆ, ಈ ಚುನಾವಣೆಯ ಪ್ರಚಾರದಲ್ಲಿ ... ಮೋದಿಯನ್ನೇ ದೊಡ್ಡದಾಗಿ ಬಿಂಬಿಸಿರುವ ... ಮುಖಭಂಗವಾಗಿ ಗುಜರಾತಿನ ಮುಖ್ಯಮಂತ್ರಿಗೆ ...ಹೊಡೆತ ಬೀಳಲಿದೆ.

...ನನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ...ಯನ್ನು ಪ್ರಧಾನಿ ಹುದ್ದೆಯಿಂದ ದೂರವಿಟ್ಟು ...ಅವರನ್ನು ಆ ಸ್ಥಾನದಲ್ಲಿ ಕೂರಿಸಿ ಎನ್‌ಡಿಎ ಸರ್ಕಾರ ... ಬಂದರೆ ಪಕ್ಷದ ಒಳಗೇ ನಾಯಕರ ಚಕಮಕಿ ...ಲಿದೆ. ರಾಜಕೀಯ ಶಾಸ್ತ್ರಜ್ಞ ಧಿರೂಭಾಯ್ ಎಲ್ ...ಅವರು ಊಹಿಸಿರುವಂತೆ ಬಿಜೆಪಿ ಮತ್ತು ಅದರ ...ತಿಕ ಪಿತೃ ಆರೆಸ್ಸೆಸ್ ನಡುವೆಯೇ ಬಿರುಕು ...ಬಹುದು.

...ತಹ ಪರಿಸ್ಥಿತಿಯಲ್ಲಿ ಎಂತಹ ಬೆಳವಣಿಗೆಗಳು ...ಸಬಹುದು? ಸುಮ್ಮನೆ ತರ್ಕಕ್ಕೆ ಮಾತ್ರ ತರ್ಕಿಸಿದರೆ ...ಾ ಅಥವಾ ಜಯಲಲಿತ ಅಥವಾ ಮಾಯಾವತಿ ...ಮಾಗಿ ಅಥವಾ ಪ್ರತ್ಯೇಕವಾಗಿ ಮೋದಿಯನ್ನು ...ಸುವುದು ತಮಗೆ ಅನುಕೂಲಕರವಲ್ಲ ಎಂದು ...ಸಿ, ಆತನ ಬದಲಾಗಿ (ಮತ್ತೆ ತರ್ಕಕ್ಕೆ ಮತ್ತೋರ್ವ ... ನಾಯಕಿಯಾದ) ಸುಷ್ಮಾ ಸ್ವರಾಜ್ ಅವರನ್ನು ... ಮಾಡಿದರೆ ಮಾತ್ರ ಎನ್‌ಡಿಎ ಸರ್ಕಾರಕ್ಕೆ ನೇರವಾಗಿ ... ಹೊರಗಿನಿಂದ ಬೆಂಬಲಿಸುವುದಾಗಿ ಹೇಳಿದರೆ ... ಸಂದಿಗ್ಧತೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತದೆ.

ಇಂತಹ ಕರಾರು ಎದುರಾದರೆ ಬಿಜೆಪಿ ಅಧಿಕಾರದಿಂದ ದೂರ ಉಳಿಯಬೇಕೆ? ಮುಸಲ್ಮಾನರು ಮೋದಿಯನ್ನು ಸಹಿಸುವುದಿಲ್ಲ ಎಂಬುದು ಭಾವಿ ಮೈತ್ರಿ ಪಕ್ಷಗಳು ಕೊಡುವ ಕಾರಣವಾಗಿರುತ್ತದೆ ಅಥವಾ ಆತನಿಗಿಂತ 'ಅಶಕ್ತ' ವ್ಯಕ್ತಿ



ಪ್ರಧಾನಿ ಸ್ಥಾನದಲ್ಲಿದ್ದರೆ ಹೊಸ ಸರ್ಕಾರದ ಮೇಲೆ ತಮ್ಮ ಪ್ರಭಾವ ಬೀರುವುದು ಸುಲಭವಾಗುತ್ತದೆ ಎಂಬುದು ಇನ್ನೊಂದು ಕಾರಣವಾಗಿರುತ್ತದೆ. ಇಲ್ಲಿ ನೆನಪಿಡಬೇಕಾದ ಅಂಶ ಯಾವುದೆಂದರೆ ಮೇಲೆ ಉದಾಹರಿಸಿರುವ ಮೂರೂ ಪಕ್ಷಗಳು ಈ ಹಿಂದೆ ಬೇರೆಬೇರೆ ಸಂದರ್ಭಗಳಲ್ಲಿ ಅವಕಾಶವಾದಿ ರಾಜಕೀಯ ಮಾರ್ಗವನ್ನು ಹಿಡಿದು ಕಾಂಗ್ರೆಸ್ ಅಥವಾ ಬಿಜೆಪಿ ನೇತೃತ್ವದ ಮೈತ್ರಿ ಕೂಟಗಳು ಭಾಗಿ ಆಗಿದ್ದವು ಎಂಬುದು.

ಆಷ್ಟೇ ಮುಖ್ಯವಾಗಿ ಇನ್ನೆರಡು ಅಂಶಗಳನ್ನೂ ನೆನಪಿಟ್ಟುಕೊಳ್ಳಬೇಕು. ಮೊದಲನೆಯದು, 1996ರ ಮೇ ತಿಂಗಳಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರಕ್ಕೆ ಕನಿಷ್ಠ 272 ಸಂಸದರ ಬೆಂಬಲವೂ ಸಿಗದೆ 13 ದಿನಗಳಲ್ಲಿ ಪತನಗೊಂಡಿತ್ತು. ಎರಡನೆಯದು, 1999ರ ಏಪ್ರಿಲ್ ತಿಂಗಳಲ್ಲಿ ಜಯಲಲಿತಾರ ಎಐಎಡಿಎಂಕೆ ಪಕ್ಷವು ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ಕೊಟ್ಟಿದ್ದ ಬೆಂಬಲವನ್ನು ಹಿಂಪಡೆದಾಗ 543 ಸದಸ್ಯರಿದ್ದ ಸಂಸತ್ತಿನಲ್ಲಿ ಕೇವಲ ಒಂದು ಮತದ ಅಂತರದಿಂದ ವಿಶ್ವಾಸ ಮತವನ್ನು ಗೆಲ್ಲದೆ ಸರ್ಕಾರ ಪತನಗೊಂಡಿತ್ತು.

ಇತಿಹಾಸ ಮತ್ತೆಮತ್ತೆ ಪುನರಾವರ್ತನೆ ಆಗುವುದಿಲ್ಲ ನಿಜ. ಆದರೆ ಆಗಿ ಹೋಗಿರುವ ಘಟನೆಗಳಿಂದ ಪಾಠ ಕಲಿಯುವುದು ಮುಖ್ಯ. 1996, 1998, 1999, 2004 ಮತ್ತು 2009ರಲ್ಲಿ ಜರುಗಿದ ಐದು ಚುನಾವಣೆಗಳಲ್ಲಿ ಎರಡು ದೊಡ್ಡ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ (ಚುನಾವಣೆಗೆ ಮುನ್ನ ಅಥವಾ ಆನಂತರ ಮಾಡಿಕೊಂಡ ಮೈತ್ರಿಗಳನ್ನು ಹೊರತುಪಡಿಸಿ) ಜೊತೆಯಾಗಿ ಗೆದ್ದ ಸ್ಥಾನಗಳು (ಶೇಕಡಾವಾರು ಮತಗಳನ್ನೂ ನೀಡಲಾಗಿದೆ) ಹೀಗಿದ್ದವು: 301 (49.09 %), 323 (51.41 %), 296 (52.05 %), 283 (48.69%), ಮತ್ತು 322 (47.35 %)

ಅದನ್ನು ಇನ್ನೊಂದು ರೀತಿ ನೋಡುವುದಾದರೆ, ಕಳೆದ ಐದು ಚುನಾವಣೆಗಳಲ್ಲಿ ಮತ ಚಲಾಯಿಸಿದ ಸುಮಾರು ಅರ್ಧದಷ್ಟು ಮತದಾರರು ಕಾಂಗ್ರೆಸ್ ಅಥವಾ ಬಿಜೆಪಿಯನ್ನು ಬೆಂಬಲಿಸಿರಲಿಲ್ಲ. ಇದರರ್ಥ ಎನ್‌ಡಿಎ ಮೈತ್ರಿಕೂಟಕ್ಕೆ ಬಹುಮತ ಸಿಗದಿದ್ದರೆ ಈ ಮೂರು ಪಕ್ಷಗಳ ಬೆಂಬಲ ನಿರ್ಣಾಯಕವಾಗುತ್ತದೆ. 2009ರಲ್ಲಿ ತಮಿಳುನಾಡು ಮತ್ತು ಪುದುಚೇರಿಯಲ್ಲಿರುವ ಒಟ್ಟು 40 ಲೋಕಸಭಾ ಸ್ಥಾನಗಳಲ್ಲಿ ಎಐಎಡಿಎಂಕೆ ಕೇವಲ ಒಂಭತ್ತನ್ನು ಗೆದ್ದಿತ್ತು. ಹಾಗೆಯೇ ತೃಣಮೂಲ್ ಕಾಂಗ್ರೆಸ್ ಮತ್ತು ಅದರ ಮೈತ್ರಿ ಪಕ್ಷವಾದ ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ ಪಶ್ಚಿಮ ಬಂಗಾಳದಲ್ಲಿರುವ 42 ಸ್ಥಾನಗಳಲ್ಲಿ 20ರಲ್ಲಿ ಗೆದ್ದಿದ್ದವು. ಉತ್ತರ ಪ್ರದೇಶದಲ್ಲಿರುವ 80 ಸ್ಥಾನಗಳಲ್ಲಿ ಬಿಎಸ್‌ಪಿ 21ರಲ್ಲಿ ಗೆದ್ದಿತ್ತು.

ಈ ಮೂರು ಪಕ್ಷಗಳ ನೇತೃತ್ವವನ್ನು ವಹಿಸಿಕೊಂಡಿರುವ ಮೂವರೂ ಮಹಿಳೆಯರು ಮಹತ್ವಾಕಾಂಕ್ಷಿಗಳು. ಮಾಯಾವತಿಯವರು ಹಲವಾರು ಬಾರಿ ತನ್ನಂತಹ ದಲಿತ ಮಹಿಳೆ ಈ ದೇಶದ ಪ್ರಧಾನಿ ಆಗಬೇಕೆಂದು ಹೇಳಿದ್ದಾರೆ. ಜಯಲಲಿತಾ ಮತ್ತು ಮಮತಾ ನೇತೃತ್ವದ ಎರಡೂ ಪಕ್ಷಗಳು ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮಾತ್ರ ಪ್ರಭಾವಿ ಪಕ್ಷಗಳಾಗಿದ್ದರೂ ಅವುಗಳ ಹೆಸರುಗಳಲ್ಲಿ 'ಆಲ್ ಇಂಡಿಯಾ' ಎಂಬ ಪದಗಳಿದ್ದು ಅವರಿಬ್ಬರ ರಾಷ್ಟ್ರೀಯ ಆಕಾಂಕ್ಷೆಗಳನ್ನು ಬಿಂಬಿಸುತ್ತವೆ.

ಈ ಮೂರೂ ಪಕ್ಷಗಳು ಮತ್ತು ಎಡಪಕ್ಷಗಳು ಈ ಬಾರಿಯ ಚುನಾವಣೆಯಲ್ಲಿ ತಲಾ 30 ಸ್ಥಾನಗಳನ್ನು ಗೆಲ್ಲುವ ಆಶೆಗಳನ್ನು ಹೊಂದಿದ್ದು ಅವುಗಳ ಒಟ್ಟು ಸಂಖ್ಯೆಯೇ 120 ಆಗುತ್ತದೆ. ಅವರೆಲ್ಲರೂ ಅಷ್ಟು ಸ್ಥಾನಗಳನ್ನು ಗೆಲ್ಲುತ್ತಾರೆಯೋ ಇಲ್ಲವೋ ಎಂಬುದು ಬೇರೆ ಮಾತು.

ಆದರೆ ಕಳೆದ ಚುನಾವಣೆಗಳಲ್ಲಿ ಅರ್ಧದಷ್ಟು ಮತದಾರರು ಕಾಂಗ್ರೆಸ್ ಮತ್ತು ಬಿಜೆಪಿಯನ್ನು ಬೆಂಬಲಿಸದಂತೆ ಈ ಬಾರಿಯೂ ಮಾಡುತ್ತಾರೆಯೇ? ಈ ದೇಶದ ಉದ್ದಗಲಕ್ಕೂ ಚಾಚಿಕೊಂಡಿರುವ ವಿಭಿನ್ನ ನಿಲುವಿನ ಮತದಾರರಿಗೆ ಬಹುಸಂಖ್ಯೆಯಲ್ಲಿ ರಾಜಕೀಯ ಭದ್ರತೆಯೇ ಮುಖ್ಯವಾಗುತ್ತದೆಯೇ? ಅಂದಹಾಗೆ, 10ರಿಂದ ಸುಮಾರು 20 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವ ಇನ್ನೂ ಐದು ರಾಜಕೀಯ ಪಕ್ಷಗಳಿವೆ ಎಂಬುದನ್ನು ಮರೆಯದಿರೋಣ. ಅವುಗಳೆಂದರೆ ನವೀನ್ ಪಟ್ನಾಯಕ್ ನೇತೃತ್ವದ ಬಿಜು ಜನತಾದಳ (ಒಡಿಶಾದ 21 ಸ್ಥಾನಗಳಲ್ಲಿ 14ರಲ್ಲಿ ಗೆದ್ದಿತ್ತು), ಮುಲಾಯಂ ಸಿಂಗ್ ಯಾದವ್ ಅವರ ಸಮಾಜವಾದಿ ಪಕ್ಷ (ಉತ್ತರ ಪ್ರದೇಶದ 80 ಸ್ಥಾನಗಳಲ್ಲಿ 22ರಲ್ಲಿ ಗೆದ್ದಿತ್ತು), ನಿತೀಶ್ ಕುಮಾರ್ ಅವರ ಸಂಯುಕ್ತ ಜನತಾದಳ (ಬಿಹಾರದ 40 ಸ್ಥಾನಗಳಲ್ಲಿ 20ನ್ನು ತನ್ನದಾಗಿಸಿಕೊಂಡಿತ್ತು), ಜೊತೆಗೆ ರಾಜಕೀಯ ರಂಗಕ್ಕೆ ಈಗ ತಾನೆ ಕಾಲಿಟ್ಟಿರುವ ಆಂಧ್ರ ಪ್ರದೇಶದಲ್ಲಿನ ವೈಎಸ್‌ಆರ್ ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷ.

ಎರಡನೆ ಯುಪಿಎ ಸರ್ಕಾರದಿಂದ 2012ರ ಸೆಪ್ಟೆಂಬರ್‌ನಲ್ಲಿ ತೃಣಮೂಲ್ ಕಾಂಗ್ರೆಸ್ ದೂರವಾದ ನಂತರ ಮನಮೋಹನ್ ಸಿಂಗ್ ಅವರ ಸರ್ಕಾರಕ್ಕೆ ಬಿಎಸ್‌ಪಿ ಮತ್ತು ಎಸ್‌ಪಿ ಬೆಂಬಲ ನೀಡಿದ್ದರೂ ಹೊಸ ಸರ್ಕಾರ ರಚಿಸುವ ಮೈತ್ರಿಕೂಟವನ್ನು ಇವೆರಡೂ ಜೊತೆಯಾಗಿ ಬೆಂಬಲಿಸುವ ಸಾಧ್ಯತೆಗಳು ಕಡಿಮೆಯೇ. ಹಾಗೆಯೇ ಪಶ್ಚಿಮ ಬಂಗಾಳದಲ್ಲಿ ಎಡ ಪಕ್ಷಗಳು ಮತ್ತು ತೃಣಮೂಲ್ ಕಾಂಗ್ರೆಸ್ ಬದ್ಧ ವೈರಿಗಳಾಗಿದ್ದರೂ 2004ರಿಂದ 2009ರ ತನಕ ಹಲವು ಸಂಭರ್ಗಗಳಲ್ಲಿ ಇವೆರಡೂ ಪಕ್ಷಗಳು ಕೇಂದ್ರದಲ್ಲಿದ್ದ ಯುಪಿಎ ಸರ್ಕಾರಕ್ಕೆ ಬೆಂಬಲ ನೀಡಿದ್ದವು ಎಂಬುದೂ ಗಮನಾರ್ಹ.

ಅದಕ್ಕೆ ಮೊದಲೇ ಹೇಳಿದ್ದು, ನಾವಿರೋದೆ ಹೀಗೆ ಅಂತ. ಯಾಕೆಂದರೆ ಭಾರತದ ರಾಜಕೀಯದಲ್ಲಿ ಏನು ಬೇಕಾದರೂ ಸಂಭವಿಸಬಹುದು!

● ಪರಂಜೋಯ್ ಗುಹಾ ಥಾಕುರ್ತ

ರಾಜ್ಯದಲ್ಲಿ ಕಾಂಗ್ರೆಸ್ ಮುಂದೆ, ಹಿಂದೆಯೇ ಬಿಜೆಪಿ



15-17



8-10



2-3

ಈ ಬಾರಿಯ ಲೋಕಸಭಾ ಚುನಾವಣೆಯು ಕರ್ನಾಟಕದಲ್ಲಿ ಒಂದು ರೀತಿಯಲ್ಲಿ ಜಾತಿಗಳ ಮತ್ತು ಸಮುದಾಯಗಳ ನಡುವಿನ ಪೈಪೋಟಿ ಎಂಬಂತೆ ನಡೆಯುತ್ತಿದೆ. ಒಂದು ಕಡೆ, ಯಡಿಯೂರಪ್ಪನಿಂದಾಗಿ ಹೆಚ್ಚಿನ ಲಿಂಗಾಯತರು ಬಿಜೆಪಿ ಪಕ್ಷವನ್ನು, ದೇವೇಗೌಡ ಮತ್ತು ಕುಮಾರಸ್ವಾಮಿಗಳಿಂದಾಗಿ ಒಕ್ಕಲಿಗರು ಜಾತ್ಯತೀತ ಜನತಾ ದಳವನ್ನು ಮತ್ತು ಸಿದ್ದರಾಮಯ್ಯನವರಿಂದಾಗಿ ಹಿಂದುಳಿದ, ಅಲ್ಪಸಂಖ್ಯಾತ ಮತ್ತು ದಲಿತ ಸಮುದಾಯಗಳು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಿರುವುದು ಹಲವಾರು ಸಮೀಕ್ಷೆಗಳಲ್ಲಿ ಎದ್ದು ಕಾಣಿಸುತ್ತಿದೆ. ಇದನ್ನು ಮೀರಿಸಬಲ್ಲ ಮೋದಿ ಅಲೆಯೂ ಇಲ್ಲ, ಅಭಿವೃದ್ಧಿಯ ಮಿಥ್ಯಾಲಾಪಗಳು ಯಾವ ಪ್ರಭಾವನ್ನೂ ಬೀರಿರುವಂತೆ ಕಾಣುತ್ತಿಲ್ಲ.

ಜನಗಣತಿಯಲ್ಲಿ ಜಾತಿಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದನ್ನು ನಿಲ್ಲಿಸಲಾಗಿದ್ದರೂ ವಿವಿಧ ಅಂದಾಜುಗಳ ಪ್ರಕಾರ ನಮ್ಮ ರಾಜ್ಯದಲ್ಲಿನ ವಿವಿಧ ಜಾತಿ ಮತ್ತು ಸಮುದಾಯಗಳ ಲೆಕ್ಕಾಚಾರ ಹೀಗಿದೆ: ಲಿಂಗಾಯತರು 15-17 %, ಒಕ್ಕಲಿಗರು 10-12 %, ಪರಿಶಿಷ್ಟ ಜಾತಿ 16 %, ಪರಿಶಿಷ್ಟ ವರ್ಗ 7 %, ಮುಸಲ್ಮಾನರು 11 %, ಕುರುಬರು 8 %, ಈಡಿಗರು 7 %, ಬ್ರಾಹ್ಮಣರು 2 %, ಕ್ರಿಶ್ಚಿಯನ್ನರು 1.8 %, ಜೈನರು 1 %, ಉಳಿದವರು ಇತರೆ ಹಿಂದುಳಿದ ಜಾತಿಗಳಿಗೆ ಸೇರಿರುವರು.

ಎನ್‌ಡಿಟಿವಿ ಕಳೆದ ವಾರ ನಡೆಸಿದ ಸಮೀಕ್ಷೆ ಪ್ರಕಾರ ವಿವಿಧ ಪಕ್ಷಗಳಿಗೆ ಆಯಾ ಜಾತಿಗಳ ಬೆಂಬಲ ಹೀಗಿದೆ:

	ಲಿಂಗಾಯತ	ಒಕ್ಕಲಿಗ	ಪರಿಶಿಷ್ಟ ಜಾತಿ	ಕುರುಬ	ಮುಸ್ಲಿಮ್
ಬಿಜೆಪಿ	69%	22%	22%	17%	9%
ಕಾಂಗ್ರೆಸ್	13%	20%	63%	64%	67%
ಜೆಡಿಎಸ್	9%	44%	9%	3%	10%

ಈ ಅಂದಾಜು ಒಂದು ರೀತಿಯಲ್ಲಿ ಸರಿಯಾಗಿದೆ ಎಂದೇ ಕಾಣಿಸುತ್ತದೆ. ಜೊತೆಗೆ ಐದು ವರ್ಷ ಬಿಜೆಪಿಯ ಆಡಳಿತ ರಾಜ್ಯದ ಜನರಲ್ಲಿ ಹೇಸಿಗೆ ಮೂಡಿಸಿದೆ. ಯಾವ ರೀತಿಯಲ್ಲೂ ಬಿಜೆಪಿ ವಿಭಿನ್ನವಾಗಲಿ, ಸ್ಥಿರವಾಗಲಿ ಇಲ್ಲ ಎಂಬುದು ರಾಜ್ಯದ ಜನರೆದುರು ಸಾಬೀತಾಗಿದೆ.

ಹಾಗೆಯೇ ಕರ್ನಾಟಕದಲ್ಲಿ ಈಗ ಕಾಂಗ್ರೆಸ್ ಬಗ್ಗೆ ಅಭಿಮಾನವಿದೆ. ಕಳೆದ 10 ತಿಂಗಳಲ್ಲಿ ಸಿದ್ದರಾಮಯ್ಯನವರ ಸರ್ಕಾರ ಯಾವುದೇ ಹಗರಣದಲ್ಲಿ ಭಾಗಿಯಾಗಿಲ್ಲ, ಜೊತೆಗೆ ಅವರು ಜಾರಿಗೆ ತಂದಿರುವ 'ಅನ್ನ ಭಾಗ್ಯ' ಮತ್ತು 'ಕ್ಷೀರ ಭಾಗ್ಯ' ಯೋಜನೆಗಳು ಕಾಂಗ್ರೆಸ್‌ನ ಜನಪ್ರಿಯತೆಯನ್ನು ಹೆಚ್ಚಿಸಿವೆ. ಸಾಮಾನ್ಯವಾಗಿ ಕರ್ನಾಟಕದ ಜನ ಇಲ್ಲಿ ಅಧಿಕಾರದಲ್ಲಿರುವ ಪಕ್ಷವನ್ನೇ ಕೇಂದ್ರದಲ್ಲೂ ಬೆಂಬಲಿಸುತ್ತಾರೆಂಬ ಅಂಶವನ್ನೂ ಮರೆಯದಿರೋಣ. ಈ ಎಲ್ಲದರ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ವಿವಿಧ ಕ್ಷೇತ್ರಗಳ ಸ್ಥಿತಿಗತಿಗಳತ್ತ ಈಗ ಗಮನ ಹರಿಸೋಣ.

ಚಿಕ್ಕೋಡಿ

ಲಿಂಗಾಯತರು 4 ಲಕ್ಷ, ಕುರುಬರು 2 ಲಕ್ಷ, ಪರಿಶಿಷ್ಟ ಜಾತಿ 1.5 ಲಕ್ಷ, ಮುಸ್ಲಿಮರು 2 ಲಕ್ಷ, ಮರಾಠರು 60,000, ಜೈನರು 1.5 ಲಕ್ಷ, ಪರಿಶಿಷ್ಟ ಪಂಗಡ 1 ಲಕ್ಷ.

ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರಾಜ್ಯ ಸಕ್ಕರೆ ಮಂತ್ರಿ ಪ್ರಕಾಶ್ ಹುಕ್ಕೇರಿ, ಬಿಜೆಪಿಯ ರಮೇಶ್ ಕತ್ತಿ ಮತ್ತು ಜೆಡಿಎಸ್‌ನ ಶ್ರೀಮಂತ್ ಪಟೀಲ ಕಣದಲ್ಲಿದ್ದಾರೆ. ಈ ಮೂವರು ಲಿಂಗಾಯತರಾಗಿದ್ದಾರೆ. ಹುಕ್ಕೇರಿಯವರು ಹೋದ ವರ್ಷ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 70,000ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆದ್ದಿದ್ದರು. ಆ ಕಾರಣಕ್ಕೇ ಅವರನ್ನು ಲೋಕಸಭಾ ಚುನಾವಣೆಗೂ ಕಾಂಗ್ರೆಸ್ ಇಳಿಸಿದೆ. ಆದರೆ ಅವರಿಗೆ ಇಲ್ಲಿ ಮಂತ್ರಿಯಾಗಿರುವುದೇ ಇಷ್ಟವಾಗಿರುವುದರಿಂದ ಅವರು ಮನಸ್ಸಿಲ್ಲದೆ ಸ್ಪರ್ಧಾ ಕಣದಲ್ಲಿದ್ದಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಕೇವಲ ಇಬ್ಬರು ಶಾಸಕರನ್ನು ಹೊಂದಿದ್ದರೆ ಬಿಜೆಪಿ ಐದು ಶಾಸಕರನ್ನು ಹೊಂದಿದೆ. ಇಲ್ಲಿ ಲಿಂಗಾಯತರೇ ನಿರ್ಣಾಯಕ ಪಾತ್ರವಹಿಸುವುದರಿಂದ, ಹುಕ್ಕೇರಿ ನಾಮಕಾವಸ್ತೆಗೆ ಸ್ಪರ್ಧಿಸುತ್ತಿರುವುದರಿಂದ ಮತ್ತು ಯಡಿಯೂರಪ್ಪ ಬಿಜೆಪಿಗೆ ವಾಪಸ್ ಬಂದಿರುವುದರಿಂದ ಬಿಜೆಪಿಯ ರಮೇಶ್ ಕತ್ತಿ ಗೆಲುವು ಸಾಧಿಸುವ ಸಾಧ್ಯತೆಯೇ ಹೆಚ್ಚಿದೆ.



ಪ್ರಕಾಶ್ ಹುಕ್ಕೇರಿ




ರಮೇಶ್ ಕತ್ತಿ

ಬೆಳಗಾವಿ

ಲಿಂಗಾಯತರು 5.4 ಲಕ್ಷ, ಮರಾಠರು 2.5 ಲಕ್ಷ, ಕುರುಬರು 1.5 ಲಕ್ಷ, ಮುಸ್ಲಿಮರು 2.2 ಲಕ್ಷ, ಪರಿಶಿಷ್ಟ ಜಾತಿ 2.2 ಲಕ್ಷ

ಜೆಡಿಎಸ್ ಪಕ್ಷದ ನರೇಶ್ ಭಗವಾನ್ ಕಣದಿಂದ ಹಿಂದೆ ಸರಿದಿದ್ದರಿಂದ ಇಲ್ಲಿ ಕಾಂಗ್ರೆಸ್‌ನ ಲಕ್ಷ್ಮಿ ಹೆಬ್ಬಾಳಕರ್ ಮತ್ತು ಬಿಜೆಪಿಯ ಸುರೇಶ್ ಅಂಗಡಿ ನಡುವೆ ಸ್ಪರ್ಧೆ ನಡೆಯುತ್ತಿದೆ. ಇಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮೂರನ್ನು ಪಡೆದಿದ್ದರೆ, ಬಿಜೆಪಿ ಮೂರರಲ್ಲಿದೆ. ಕೆಜೆಪಿ ಮತ್ತು ಸ್ವತಂತ್ರ ಅಭ್ಯರ್ಥಿಗಳು ಇನ್ನುಳಿದ ಎರಡರಲ್ಲಿದ್ದಾರೆ.



ಸುರೇಶ್ ಅಂಗಡಿ



ಲಕ್ಷ್ಮಿ ಹೆಬ್ಬಾಳಕರ್

ಈ ಬಾರಿ ಇಲ್ಲಿ ಎರಡು 'ಎಂ' ಮತ್ತು ಒಂದು 'ಬಿ' ಫ್ಯಾಕ್ಟರ್ ಕೆಲಸ ಮಾಡುತ್ತಿದೆ. 'ಮೋದಿ ಫ್ಯಾಕ್ಟರ್' ಬಿಜೆಪಿಗೆ ಸಹಾಯ ಮಾಡಿದರೆ 'ಮುತಾಲಿಕ್ ಫ್ಯಾಕ್ಟರ್'. ಫ್ಯಾಕ್ಟರ್ ಅದರ ವಿರುದ್ಧವಾಗಿ ಕೆಲಸ ಮಾಡಲಿದೆ. ಹಾಗೆಯೇ ಬಿಜೆಪಿ ವಿರುದ್ಧವಾಗಿ ಕೆಲಸ ಮಾಡುತ್ತಿರುವ ಮುಖ್ಯ 'ಬಿ' ಫ್ಯಾಕ್ಟರ್ ಬಾಲಚಂದ್ರ ಜಾರಕಿಹೊಳಿಯವರದ್ದು. ಬಿಜೆಪಿಯ ಅಭ್ಯರ್ಥಿಯ ವಿರುದ್ಧ ಅವರು ಬಹಿರಂಗವಾಗಿಯೇ ತಮ್ಮ ಅಸಮಾಧಾನವನ್ನು ಹೊರಹಾಕಿದ್ದಾರೆ.

ಲಿಂಗಾಯತ ಮತಗಳು ಇಲ್ಲಿ ಮುಖ್ಯವಾಗಿದ್ದು, ಉಳಿದ ಸಮುದಾಯಗಳು ಯಾರನ್ನು ಬೆಂಬಲಿಸುತ್ತವೆ ಎಂಬುದರ ಮೇಲೆ ಫಲಿತಾಂಶ ನಿರ್ಧಾರವಾಗಲಿದೆ. ಲಕ್ಷ್ಮಿ ಹೆಬ್ಬಾಳಕರ್ ಮತ್ತು ಸುರೇಶ್ ಅಂಗಡಿ ಇಬ್ಬರೂ ಲಿಂಗಾಯತರಾಗಿದ್ದು, ಲಿಂಗಾಯತ ಮತಗಳು ಹಂಚಿಹೋದರೆ, ಉಳಿದ ಸಮುದಾಯಗಳು ಕಾಂಗ್ರೆಸ್ ಬೆಂಬಲಿಸಿದರೆ ಲಕ್ಷ್ಮಿಗೆ ಗೆಲುವು ಸಿಗುತ್ತದೆ.

ಒಟ್ಟು ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಟೈಟ್ ಫೈಟ್ ನಡೆಯುತ್ತಿದೆ.

ಬಾಗಲಕೋಟೆ

ಕುರುಬರು 3 ಲಕ್ಷ, ಪಂಚಮಸಾಲಿ 1.6 ಲಕ್ಷ, ಗಾಣಿಗರು 1.5 ಲಕ್ಷ, ಎಸ್ಸಿ, ಎಸ್ಟಿ 3 ಲಕ್ಷ.

ಬಾಗಲಕೋಟೆ ಬಹಳ ವರ್ಷಗಳಿಂದ ಕಾಂಗ್ರೆಸ್ ವಿರೋಧಿ ಪಾಳಯದಲ್ಲಿದ್ದ ಕ್ಷೇತ್ರ. ಆದರೆ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಯಡಿಯೂರಪ್ಪ ಕೆಜೆಪಿಯನ್ನು ಕಟ್ಟಿದ್ದರಿಂದ ಇಲ್ಲಿ ಬಿಜೆಪಿ ನೆಲ ಕಚ್ಚಿತ್ತು, ಪರಿಣಾಮವಾಗಿ ಇಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಒಂದರ ಹೊರತಾಗಿ ಮಿಕ್ಕೆಲ್ಲ ಕಡೆ ಕಾಂಗ್ರೆಸ್ ಗೆದ್ದಿತ್ತು.

ಈ ಕ್ಷೇತ್ರದಲ್ಲಿ ಗಾಣಿಗ ಲಿಂಗಾಯತರು ಹೆಚ್ಚಿನ ಸಂಖ್ಯೆಯಲ್ಲಿದ್ದು ಮೋದಿಯೂ 'ಗಾಂಚಿ' ಸಮುದಾಯದವರಾದ್ದರಿಂದ 'ಮೋದಿ ಫ್ಯಾಕ್ಟರ್' ಇಲ್ಲಿ ಕೆಲಸ ಮಾಡುವ ಸಾಧ್ಯತೆ ಇದೆ. ಯಡಿಯೂರಪ್ಪ ಬಿಜೆಪಿಗೆ ವಾಪಸ್ ಬಂದಿರುವುದರಿಂದಲೂ ಗದ್ದಿಗೌಡರ್ ಗೆಲ್ಲುವ ಚಾನ್ಸ್ ಹೆಚ್ಚಾಗಿದೆ. ಕಾಂಗ್ರೆಸ್‌ನ ಎಲ್ಲಾ ಶಾಸಕರು ಒಗ್ಗಟ್ಟಾಗಿ ಕೆಲಸ ಮಾಡಿದರೆ ಕಾಂಗ್ರೆಸ್ ಈ ಕ್ಷೇತ್ರವನ್ನು ತನ್ನದಾಗಿಸಿಕೊಳ್ಳುತ್ತದೆ.



ಅಜಯ್ ಕುಮಾರ್



ಗದ್ದಿಗೌಡರ್




ಶಂಕರ್ ಬಿದರಿ

ಬಿಜಾಪುರ (ಮೀಸಲು)

ಲಿಂಗಾಯತರು 4.5 ಲಕ್ಷ, ಎಸ್‌ಸಿ 3 ಲಕ್ಷ, ಮುಸ್ಲಿಂ 2.5 ಲಕ್ಷ, ಕುರುಬ 2 ಲಕ್ಷ, ಹಿಂದುಳಿದ ವರ್ಗ 2.7 ಲಕ್ಷ.


ಇದು ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾಗಿದ್ದು ಇಲ್ಲಿ ಕಾಂಗ್ರೆಸ್‌ನ ಏಳು ಜನ ಶಾಸಕರಿದ್ದಾರೆ. ಬಿಜೆಪಿಗೆ ಒಬ್ಬನೆ ಒಬ್ಬ ಶಾಸಕ. ಇಲ್ಲಿ ಲಿಂಗಾಯತರು ಮತ್ತು ಮುಸ್ಲಿಮರು ನಿರ್ಣಾಯಕ. ಚುನಾವಣಾ ಕಣದಲ್ಲಿ ಬಿಜೆಪಿಯ ರಮೇಶ್ ಜಿಗಜಿಣಗಿ ಮತ್ತು ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್ ನಡುವೆ ತೀವ್ರ ಸ್ಪರ್ಧೆ ನಡೆಯಲಿದೆ. ಸಿದ್ದರಾಮಯ್ಯನವರನ್ನು ಸೋಲಿಸುವುದೇ ತಮ್ಮ ಗುರಿಯಾಗಿಸಿಕೊಂಡಿರುವ ದೇವೇಗೌಡರು ಜೆಡಿಎಸ್‌ನಿಂದ ಮಾಜಿ ಐಎಎಸ್ ಅಧಿಕಾರಿ ಮತ್ತು ಚಿತ್ರ ನಟ ಶಿವರಾಮ್ ಅವರನ್ನು ನಿಲ್ಲಿಸಿದ್ದಾರೆ. ಶಿವರಾಮ್ ಅವರು ಛಲವಾದಿ ಸಮುದಾಯದವರಾಗಿದ್ದು ತಮ್ಮ ಸಮುದಾಯದ ಒಂದು ಸಂಘಟನೆಯನ್ನೂ ಕಟ್ಟಿದ್ದಾರೆ. ಒಂದು ಕಡೆ ಯಡಿಯೂರಪ್ಪ ಫ್ಯಾಕ್ಟರ್ ರಮೇಶ್ ಜಿಗಜಿಣಗಿ ಅವರಿಗೆ ನೆರವಾದರೆ, ಇನ್ನೊಂದು ಕಡೆ ಶಿವರಾಮು ದಲಿತರ ಮತಗಳನ್ನು ಕಿತ್ತುಕೊಂಡು ಕಾಂಗ್ರೆಸ್‌ಗೆ ಹೊಡೆತ ಕೊಡಲಿದ್ದಾರೆ. ಆದರೆ ಕುರುಬರು, ಮುಸ್ಲಿಮರು ಮತ್ತು ಇತರೆ ಹಿಂದುಳಿದ ವರ್ಗಗಳ ಕಾಂಗ್ರೆಸ್ ಕೈಹಿಡಿದರೆ ರಾಥೋಡ್ ಗೆಲ್ಲುವ ಸಾಧ್ಯತೆ ಇದೆ. ಒಟ್ಟಾರೆ ಇಲ್ಲಿ ಸಮಬಲದ ಸ್ಪರ್ಧೆ ನಡೆಯುತ್ತಿದೆ.



ಶಿವರಾಮ್



ಪ್ರಕಾಶ್ ರಾಥೋಡ್



ರಮೇಶ್ ಜಿಗಜಿಣಗಿ

ಗುಲ್ಬರ್ಗಾ


ದಲಿತರು 4 ಲಕ್ಷ, ಮುಸ್ಲಿಮರು 3 ಲಕ್ಷ, ಲಿಂಗಾಯತರು 3 ಲಕ್ಷ, ಕುರುಬರು 1.3 ಲಕ್ಷ

ಪರಿಶಿಷ್ಟ ಜಾತಿಗೆ ಮೀಸಲಾದ ಈ ಕ್ಷೇತ್ರದಲ್ಲಿ ಈಗ ಕಾಂಗ್ರೆಸ್ ಪ್ರಾಬಲ್ಯ ಹೊಂದಿದೆ. ಇಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಓರ್ವ ಬಿಜೆಪಿ ಹೊರತುಪಡಿಸಿದರೆ ಮಿಕ್ಕ ಎಲ್ಲರೂ ಕಾಂಗ್ರೆಸಿಗರು.

ಕಾಂಗ್ರೆಸ್ ಪಕ್ಷದಿಂದ ಮಲ್ಲಿಕಾರ್ಜುನ್ ಖರ್ಗೆ, ಬಿಜೆಪಿಯಿಂದ ರೇವುನಾಯಕ್ ಬೆಳಮಗಿ ಮತ್ತು ಜೆಡಿಎಸ್‌ನಿಂದ ಡಿ.ಜಿ.ಸಾಗರ್ ಸ್ಪರ್ಧಿಸುತ್ತಿದ್ದರೂ ಖರ್ಗೆ ಗೆಲುವು ಈಗಾಗಲೆ ನಿಶ್ಚಿತವಾಗಿದೆ. ಹೈದರಾಬಾದ್ ಕರ್ನಾಟಕಕ್ಕೆ 371 (ಜೆ) ತಂದುಕೊಟ್ಟಿದ್ದು, ಕಾರ್ಮಿಕ ವಿಭಾಗ ಮತ್ತು ರೈಲು ವಿಭಾಗದಲ್ಲಿ ಉತ್ತಮ ಕೆಲಸ ಮಾಡಿರುವುದು ಖರ್ಗೆ ಅವರ ಕೈಹಿಡಿಯಲಿದೆ. ಜೊತೆಗೆ ಇಲ್ಲಿ ಮುಸ್ಲಿಂರ ಮತದಾರರ ಸಂಖ್ಯೆಯೂ ಗಣನೀಯವಾಗಿದ್ದು ಅವರೆಲ್ಲ ಖರ್ಗೆಯ ಬೆಂಬಲಕ್ಕೆ ನಿಲ್ಲಲಿದ್ದಾರೆ. ಅಷ್ಟೇ ಅಲ್ಲದೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಚಿತ್ತಾಪುರದ ಶಾಸಕರಾಗಿರುವುದು ಮತ್ತು ಮಿತ್ರ ಧರ್ಮ್ ಸಿಂಗ್ ಅವರ ಪುತ್ರ ಅಜಯ್ ಜೇವರ್ಗಿಯನ್ನು ಪ್ರತಿನಿಧಿಸುತ್ತಿರುವುದು ಖರ್ಗೆ ಗೆಲುವನ್ನು ಸುಲಭವಾಗಿಸಿದೆ.



ಮಲ್ಲಿಕಾರ್ಜುನ ಖರ್ಗೆ



ರೇವುನಾಯಕ ಬೆಳಮಗಿ

ರಾಯಚೂರು

ಪರಿಶಿಷ್ಟ ಪಂಗಡ 3.5 ಲಕ್ಷ, ಪರಿಶಿಷ್ಟ ಜಾತಿ 2.3 ಲಕ್ಷ, ಲಿಂಗಾಯತರು 2.27 ಲಕ್ಷ, ಮುಸ್ಲಿಮರು 2.1 ಲಕ್ಷ, ಕುರುಬರು 1.35 ಲಕ್ಷ, ಗಂಗಾಮತಸ್ಥರು 3.7 ಲಕ್ಷ.

ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಬಿ.ವಿ.ನಾಯಕ್ ಮತ್ತು ಬಿಜೆಪಿಯಿಂದ ಶಿವನಗೌಡ ನಾಯಕ್ ಸ್ಪರ್ಧಿಸುತ್ತಿದ್ದಾರೆ.


[illegible] ನಾಯಕ್


ಡಿ.ಬಿ. ನಾಯಕ್


ಶಿವನಗೌಡ ನಾಯಕ್

ಜೆಡಿಎಸ್ ಅಭ್ಯರ್ಥಿ ಡಿ.ಬಿ.ನಾಯಕ್ ಇಲ್ಲಿ ಲೆಕ್ಕಕ್ಕಿಲ್ಲ. ಶಿವಾನಂದ ನಾಯಕ್ ಅವಕಾಶವಾದಿ ರಾಜಕೀಯ ಮಾಡಿ ಕೈ ಮತ್ತು ಬಾಯಿ ಹೊಲಸು ಮಾಡಿಕೊಂಡಿದ್ದಾರೆ. ಕಳೆದ ಬಾರಿ ಇಲ್ಲಿಂದ ಬಳ್ಳಾರಿ ರೆಡ್ಡಿಗಳ ಭಂಟ ಸಣ್ಣ ಫಕೀರಪ್ಪ ಎಂಬುವವರು ಶ್ರೀರಾಮುಲು ಅವರ ಜನಪ್ರಿಯತೆ ಮತ್ತು ಹಣಬಲವನ್ನಾಧರಿಸಿ ಗೆದ್ದಿದ್ದರು. ಆದರೀಗ ಶಿವಾನಂದ ನಾಯಕ್‌ಗೆ ಬಳ್ಳಾರಿಯಿಂದ ಹಣ ಹರಿದುಬರುತ್ತಿಲ್ಲ.

371 (ಜೆ) ಇಲ್ಲಿ ಕಾಂಗ್ರೆಸ್ ಜನಪ್ರಿಯತೆಯನ್ನು ಹೆಚ್ಚಿಸಿದೆ. ಈಗಾಗಲೇ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಮಾದಿಗರ ಸಂಘಟನೆಗಳು ಕಾಂಗ್ರೆಸ್ ಅಭ್ಯರ್ಥಿ ಬಿ.ವಿ.ನಾಯಕ್ ಅವರಿಗೆ ತಮ್ಮ ಬೆಂಬಲವನ್ನು ಘೋಷಿಸಿದ್ದು ಸಿದ್ದರಾಮಯ್ಯನವರ ಕಾರಣಕ್ಕೆ ಕುರುಬರು ಮತ್ತು ಮುಸ್ಲಿಮರು ಕಾಂಗ್ರೆಸ್ ಕೈಹಿಡಿಯಲಿದ್ದು ಕಾಂಗ್ರೆಸ್ ಗೆಲ್ಲುವ ನಿರೀಕ್ಷೆ ಇದೆ.

ಬೀದರ್

ಲಿಂಗಾಯತರು 4.5 ಲಕ್ಷ, ಮರಾಠ 2.7 ಲಕ್ಷ, ಮುಸ್ಲಿಂ 3 ಲಕ್ಷ, ದಲಿತ 1.2 ಲಕ್ಷ, ಕುರುಬರು 2 ಲಕ್ಷ.

ಇಲ್ಲಿ ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ಕಾಂಗ್ರೆಸ್ ಪಕ್ಷದಿಂದಲೂ,


ಧರ್ಮಸಿಂಗ್


ಕಾಶಪ್ಪನವರ್


ಖೂಬಾ

ಭಗವತ್ ಖೂಬಾ ಎಂಬುವವರು ಬಿಜೆಪಿಯಿಂದಲೂ, ಬಂಡೆಪ್ಪ ಕಾಶೆಂಪುರ್ ಜೆಡಿಎಸ್ ಪಕ್ಷದಿಂದಲೂ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್ ಇಲ್ಲಿ ಮೂವರು ಶಾಸಕರನ್ನು ಹೊಂದಿದ್ದರೆ ಬಿಜೆಪಿ ಓರ್ವ ಶಾಸಕನನ್ನು ಮಾತ್ರ ಹೊಂದಿದೆ. ಒಂದು ವಿಧಾನಸಭಾದಿಂದ ಅಶೋಕ್ ಖೇಣಿ, ಮತ್ತೊಂದರಿಂದ ಕೆಜೆಪಿ ಪರವಾಗಿ ಬಿ.ಆರ್.ಪಾಟೀಲ್ ಮತ್ತು ಕೆಜೆಪಿಯಿಂದ ಗೆದ್ದು ಬಿಜೆಪಿಗೆ ಹೋಗಿರುವ ಗುರುಪಾದಪ್ಪ ನಾಗಮಾರಪಳ್ಳಿ ಶಾಸಕರಾಗಿದ್ದರೆ.

ಖುಬಾ ಎಂಬ ಬಿಜೆಪಿ ಅಭ್ಯರ್ಥಿ ಕಟ್ಟಾ ಆರೆಸ್ಸೆಸ್ ಆಸಾಮಿ ಆಗಿದ್ದು ಅವರ ಬಗ್ಗೆ ಇಲ್ಲಿನ ಜನಕ್ಕೆ ಹೆಚ್ಚು ಪರಿಚಯವೇ ಇಲ್ಲ. ಅವರು 'ಮೋದಿ ಅಲೆ'ಯನ್ನು ನಂಬಿ ಕಣಕ್ಕೆ ಇಳಿದಿದ್ದಾರೆ. ಆದರೆ ಅದರಿಂದ ಹೆಚ್ಚು ಲಾಭ ಬಿಜೆಪಿಗೆ ಈ ಕ್ಷೇತ್ರದಲ್ಲಿ ಆಗುವುದಿಲ್ಲ.

371 (ಜೆ) ಕಾಂಗ್ರೆಸ್ ಕೈಹಿಡಿಯಲಿದೆ. ಜೊತೆಗೆ ಇಲ್ಲಿನ ಗಮನಾರ್ಹ ಸಂಖ್ಯೆಯಲ್ಲಿರುವ ದಲಿತ ಕ್ರಿಶ್ಚಿಯನ್ನರು, ಮಾದಿಗರು ಮತ್ತು ಕುರುಬರು ಕಾಂಗ್ರೆಸ್ ಪರ ನಿಲ್ಲಲ್ಲಿದ್ದಾರೆ. ಮುಸಲ್ಮಾನ ಸಮುದಾಯದ ನಾಯಕರು ತಾವು ಯಾರನ್ನು ಬೆಂಬಲಿಸುತ್ತೇವೆ ಎಂಬುದನ್ನು ಇನ್ನೂ ಸ್ಪಷ್ಟಪಡಿಸದಿರುವುದು ಧರ್ಮಸಿಂಗ್ ಅವರಿಗೆ ಕಗ್ಗಂಟಾಗಿದೆ.

ಒಟ್ಟಾರೆ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ಇದ್ದು ಧರ್ಮಸಿಂಗ್ ಸದ್ಯಕ್ಕೆ ಮುಂದಿದ್ದಾರೆ ಎನ್ನಬಹುದು.

ಕೊಪ್ಪಳ

ಲಿಂಗಾಯತರು 4.2 ಲಕ್ಷ, ಮರಾಠಾ 3.7 ಲಕ್ಷ, ಮುಸ್ಲಿಮರು 3.1 ಲಕ್ಷ, ಕುರುಬರು 2.5 ಲಕ್ಷ, ದಲಿತರು 2.2 ಲಕ್ಷ, ನಾಯಕರು 1.3 ಲಕ್ಷ, ಮುಸ್ಲಿಮರು 1.5 ಲಕ್ಷ.

ಇಲ್ಲಿ ಕಾಂಗ್ರೆಸ್ ಪರವಾಗಿ ಕುರುಬ ಸಮುದಾಯದ ಬಸವರಾಜ ಹಿಟ್ನಾಳ್ ಮತ್ತು ಬಿಜೆಪಿ ಪರವಾಗಿ ಲಿಂಗಾಯತ ಸಮುದಾಯದ ಸಂಗಣ್ಣ ಕರಡಿ ಸ್ಪರ್ಧಿಸುತ್ತಿದ್ದಾರೆ. ಇಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಆರರಲ್ಲಿ ಗೆದ್ದಿದ್ದರೆ ಬಿಜೆಪಿ ಮತ್ತು ಜೆಡಿಎಸ್ ತಲಾ ಒಂದರಲ್ಲಿ ಗೆದ್ದಿವೆ.

ಇಲ್ಲಿರುವ ಕುರುಬರು, ನಾಯಕರು, ದಲಿತರು ಮತ್ತು ಮುಸ್ಲಿಮರು ಕಾಂಗ್ರೆಸ್‌ಗೆ ಓಟು ಹಾಕಲಿದ್ದು ಕಾಂಗ್ರೆಸ್ ಗೆಲ್ಲುವ ಎಲ್ಲಾ ನಿರೀಕ್ಷೆಗಳಿವೆ.


ಬಸವರಾಜ್ ಹಿಟ್ನಾಳ್


ಸಂಗಣ್ಣ ಕರಡಿ

ಬಳ್ಳಾರಿ

ಲಿಂಗಾಯತರು 4.3 ಲಕ್ಷ, ವಾಲ್ಮೀಕಿ (ಬೇಡರು) 4 ಲಕ್ಷ, ಮುಸ್ಲಿಮರು 1 ಲಕ್ಷ, ಕ್ರಿಶ್ಚಿಯನ್ನರು 2 ಲಕ್ಷ, ಕುರುಬರು 25,000


ಶ್ರೀರಾಮುಲು


ಹನುಮಂತಪ್ಪ

ಇದು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದು ಕಳೆದ ಬಾರಿ ಶ್ರೀರಾಮುಲು ಮತ್ತು ರೆಡ್ಡಿ ಸಹೋದರರು ಹಣದ ಹೊಳೆಯನ್ನೇ ಹರಿಸಿದ್ದರು. ಪರಿಣಾಮವಾಗಿ ಶ್ರೀರಾಮುಲು ಸಹೋದರಿ ಜೆ. ಶಾಂತಾ ಕೇವಲ ಎರಡು ಸಾವಿರ ಮತಗಳ ಅಂತರದಿಂದ ಗೆದ್ದಿದ್ದರು. ಆದರೀಗ ಬಳ್ಳಾರಿಯ ಗಣಿಯ ಧೂಳೇ ಬಿಜೆಪಿಯ ಅಭ್ಯರ್ಥಿ ಶ್ರೀರಾಮುಲು ಅವರನ್ನು ಸೋಲಿನ ಭಯದಲ್ಲಿ ನಿಲ್ಲಿಸಿದೆ.

ಯಾಕೆಂದರೆ ಶ್ರೀರಾಮುಲು ಅವರ ಗೆಳೆಯ ಜನಾರ್ದನ ರೆಡ್ಡಿ ಕಳೆದ ಎರಡು ವರ್ಷಗಳಿಂದ ಜೈಲಿನಲ್ಲಿ ಬದ್ದಿದ್ದಾನೆ. ಜೊತೆಗೆ ಅವರ ತಂಡದಲ್ಲಿದ್ದು ಶಾಸಕರಾಗಿ ಗೆದ್ದಿದ್ದ ಆನಂದ್ ಸಿಂಗ್, ಸುರೇಶ್ ಬಾಬು ಮತ್ತು ನಾಗೇಂದ್ರ ಕೂಡ ಕಂಬಿ ಎಣಿಸುತ್ತಿದ್ದಾರೆ. ಈ ಹಿಂದೆ ಇದ್ದಷ್ಟು ಗಣಿ ಹಣವೂ ಶ್ರೀರಾಮುಲು ಕೈಯಲ್ಲಿ ಈಗಿಲ್ಲ, ಜೊತೆಗೆ ಗಣಿ ಹಗರಣದಿಂದ ಅವರ ಹೆಸರೂ ಕೆಟ್ಟಿದೆ. ಮಾತ್ರವಲ್ಲ ಶ್ರೀರಾಮುಲು ಅವರನ್ನು ವಾಪಸ್ ಬರಮಾಡಿಕೊಂಡ ಬಿಜೆಪಿ ಅವರ ಬೆಂಬಲಿಗರನ್ನು ಹೊರಗಿಟ್ಟಿದೆ. ಈಗ ಅವರೆಲ್ಲ ಬಿಜೆಪಿ ವಿರುದ್ಧ ಹಾರಾಡುತ್ತಿದ್ದಾರೆ.

ಕಾಂಗ್ರೆಸ್‌ನ ಎನ್.ವೈ. ಹನುಮಂತಪ್ಪ ಮತ್ತೆ ಕಣವನ್ನು ಪ್ರವೇಶಿಸಿದ್ದಾರೆ. ಅವರ ಪರ ಅನುಕಂಪದ ಅಲೆ ಇದ್ದು ಬಿಜೆಪಿ ಪರ ಇಲ್ಲಿ 'ಮೋದಿ ಅಲೆ' ಇಲ್ಲದಂತಾಗಿದೆ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಟೈಟ್ ಫೈಟ್ ಇದೆ.

ಹಾವೇರಿ

ಲಿಂಗಾಯತರು 4 ಲಕ್ಷ, ಮುಸ್ಲಿಮರು 2.3 ಲಕ್ಷ, ಪರಿಶಿಷ್ಟ ಪಂಗಡದವರು 1.5 ಲಕ್ಷ, ಪರಿಶಿಷ್ಟ ಜಾತಿ 1 ಲಕ್ಷ, ಹಿಂದುಳಿದ ವರ್ಗಗಳು 4 ಲಕ್ಷ.


ಸಲೀಂ ಅಹಮದ್


ಶಿವಕುಮಾರ ಉದಾಸಿ

ಇಲ್ಲಿ ಬಿಜೆಪಿಯ ಶಿವಕುಮಾರ್ ಉದಾಸಿ ಮತ್ತು ಕಾಂಗ್ರೆಸ್ ಪಕ್ಷದ ಸಲೀಂ ನಡುವೆ ಸ್ಪರ್ಧೆ ನಡೆಯುತ್ತಿದೆ. ಇಲ್ಲಿ ಯಡಿಯೂರಪ್ಪ ಫ್ಯಾಕ್ಟರ್ ಕೆಲಸ ಮಾಡುತ್ತಿದ್ದು ಲಿಂಗಾಯತರೇ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಸಂಸದನಾಗಿ ಕ್ಷೇತ್ರಕ್ಕೆ ಏನನ್ನು ಮಾಡಿರದಿದ್ದರೂ ಜಾತಿ ಕಾರಣಕ್ಕಾಗಿ ಸದ್ಯ ಉದಾಸಿ ಸ್ವಲ್ಪ ಮುಂದಿದ್ದಾರೆ.

ಧಾರವಾಡ

ಲಿಂಗಾಯತರು 4 ಲಕ್ಷ, ಮುಸ್ಲಿಮರು 3.5 ಲಕ್ಷ, ದಲಿತರು 3 ಲಕ್ಷ, ಕುರುಬರು 1 ಲಕ್ಷ, ಮರಾಠರು 84,000

ಸಂಘಪರಿವಾರಿಗಳ ಕೋಮು ಕಿತಾಪತಿಗೆ ಕುಖ್ಯಾತಿ ಗಳಿಸಿರುವ ಕ್ಷೇತ್ರವಿದು. ಸದ್ಯ ಇಲ್ಲಿನ ವಿಧಾನ ಸಭಾ ಕ್ಷೇತ್ರಗಳಲ್ಲಿ ನಾಲ್ಕು ಕಾಂಗ್ರೆಸ್ ವಶದಲ್ಲಿದ್ದರೆ ಮೂರು ಬಿಜೆಪಿಯ ಕೈಯಲ್ಲೂ ಒಂದು ಜೆಡಿಎಸ್ ತೆಕ್ಕೆಯಲ್ಲೂ ಇವೆ.


ಪ್ರಮೋದ್ ಮುತಾಲಿಕ್


ಪ್ರಹ್ಲಾದ್ ಜೋಶಿ


ವಿನಯ್ ಕುಲಕರ್ಣಿ

ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಶಿ ಮತ್ತು ಕಾಂಗ್ರೆಸ್‌ನ ವಿನಯ್ ಕುಲಕರ್ಣಿ ನಡುವೆ ನೇರ ಸ್ಪರ್ಧೆ ಇದೆ. ಪ್ರಮೋದ್ ಮುತಾಲಿಕ್ ಚುನಾವಣಾ ಕಣದಲ್ಲಿರುವುದು ಬಿಜೆಪಿಯ ಮತ ಬ್ಯಾಂಕಿಗೆ ಕನ್ನಾ ಹಾಕಲಿದೆ. ಸಾಮಾನ್ಯವಾಗಿ ಬಿಜೆಪಿಯನ್ನು ಬೆಂಬಲಿಸುತ್ತಿದ್ದ ಲಿಂಗಾಯತರು ಈಗ ಬ್ರಾಹ್ಮಣ ಸಮುದಾಯದ ಜೋಷಿ ಬದಲಾಗಿ ತಮ್ಮ ಸಮುದಾಯದವರಾದ ಕುಲಕರ್ಣಿಯವರನ್ನು ಬೆಂಬಲಿಸುವ ನಿರೀಕ್ಷೆ ಇದೆ. ಇಲ್ಲಿ 'ಮೋದಿ ಫ್ಯಾಕ್ಟರ್' ಒಂದಿಷ್ಟು ಪ್ರಮಾಣದಲ್ಲಿದ್ದರೂ ಯಡಿಯೂರಪ್ಪ ಒಳಗಿನಿಂದಲೇ ಬಿಜೆಪಿ ಅಭ್ಯರ್ಥಿಗೆ ಕೊಕ್ಕು ಹಾಕುತ್ತಿರುವುದರಿಂದ ಲಿಂಗಾಯತರ ಬೆಂಬಲ ಇಷ್ಟಲ್ಲಿ ಕುಗ್ಗಲಿದೆ. ಮುಸ್ಲಿಮರು ಈ ಬಾರಿ ಕಾಂಗ್ರೆಸ್ ಪರ ಒಗ್ಗಟ್ಟಾಗಿರುವುದು ಕಾಂಗ್ರೆಸ್‌ಅನ್ನು ಗೆಲುವಿನ ಹತ್ತಿರ ತಂದು ನಿಲ್ಲಿಸಿದೆ.

[illegible]

ಮರಾಠರು 1.5 ಲಕ್ಷ, ಮುಸ್ಲಿಮರು 3.6 ಲಕ್ಷ, ನಾಮಧಾರಿಗಳು 1.5 ಲಕ್ಷ, ಬ್ರಾಹ್ಮಣರು 2.3 ಲಕ್ಷ, ಲಿಂಗಾಯತರು 3.2 ಲಕ್ಷ, ಒಕ್ಕಲಿಗರು 1 ಲಕ್ಷ.

ಹಿಂದೂ ಕೋಮುವಾದದ ಸಂಶೋಧನಾಲಯವಾಗಿದ್ದ ಈ ಕ್ಷೇತ್ರದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮಣ್ಣುಮುಕ್ಕಿತ್ತು, ಕಾಂಗ್ರೆಸ್


ಅನಂತ್ ಕುಮಾರ ಹೆಗ್ಡೆ


ಪ್ರಶಾಂತ್ ದೇಶಪಾಂಡೆ

ನಾಲ್ಕು ಕ್ಷೇತ್ರಗಳಲ್ಲಿ ಗೆದ್ದಿದ್ದರೆ ಮೂವರು ಸ್ವತಂತ್ರ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದರು. ಇಲ್ಲಿ ಗೆದ್ದ ಏಕೈಕ ಬಿಜೆಪಿ ಹುರಿಯಾಳು ವಿಶ್ವೇಶ್ವರ ಹೆಗಡೆ ಕಾಗೇರಿ.

ಈ ಕಾಗೇರಿಗೂ, ಈಗ ಬಿಜೆಪಿಯ ಲೋಕಸಭಾ ಅಭ್ಯರ್ಥಿಯಾಗಿರುವ ಅನಂತಕುಮಾರ್ ಹೆಗಡೆಗೂ ಆಗುವುದೇ ಇಲ್ಲ. ಜೊತೆಗೆ ಸಂಸದನಾಗಿ ಕ್ಷೇತ್ರಕ್ಕೆ ಏನನ್ನೂ ಮಾಡಿರದ ಹೆಗಡೆ ಈಗ ಜನರ ವಿರೋಧವನ್ನು ಎದುರಿಸುತ್ತಿದ್ದಾರೆ. ಅವರ ಸ್ವಜಾತಿ ಬ್ರಾಹ್ಮಣರೂ ಅವರಿಂದ ದೂರ ಸರಿದಿದ್ದಾರೆ. ಜೆಡಿಎಸ್ ಅಭ್ಯರ್ಥಿಯಾಗಿದ್ದ ಶಿವಾನಂದ ನಾಯ್ಕ ಕಡೆಕ್ಷಣದಲ್ಲಿ ಕಣದಿಂದ ಓಡಿಹೋಗಿ ಹೆಗಡೆ ಪರ ನಿಂತಿರುವುದರಿಂದ ಬಿಜೆಪಿಗೆ ಲಾಭವಾಗುವ ಬದಲು ಕಾಂಗ್ರೆಸ್ ಕೈಯನ್ನು ಗಟ್ಟಿಯಾಗಿಸಿದೆ. ಎಲ್ಲಕ್ಕಿಂತ ಹೆಚ್ಚಾಗಿ ಮೊನ್ನೆ ಚೆಡ್ಡಿ ಯುವಕರ ಪಡೆಯೇ ಕೇಸರಿ ಶಾಲು ಹಾಕಿಕೊಂಡು ಬಿಜೆಪಿ ವಿರುದ್ಧವಾಗಿ ಮತ್ತು ಕಾಂಗ್ರೆಸ್ ಪರವಾಗಿ ಪ್ರಚಾರ ನಡೆಸಿರುವುದು ಅನಂತ್‌ಕುಮಾರ ಎಷ್ಟರಮಟ್ಟಿಗೆ ಸ್ವಂತ ಜನರ ಬೆಂಬಲವನ್ನೂ ಕಳೆದುಕೊಂಡಿದ್ದಾನೆ ಎನ್ನುವುದಕ್ಕೆ ಉದಾಹರಣೆಯಾಗಿದೆ.

ಅವರ ಪ್ರತಿಸ್ಪರ್ಧಿ ಪ್ರಶಾಂತ್ ದೇಶಪಾಂಡೆಗೆ ತಂದೆ ಆರ್.ವಿ.ದೇಶಪಾಂಡೆಯ ರಾಜಕೀಯ ಮತ್ತು ಆರ್ಥಿಕ ಬೆಂಬಲವಿದೆ. ಯುವಕರಾದ ಪ್ರಶಾಂತ್ ಜನರಲ್ಲಿ ಹೊಸ ಭರವಸೆಯನ್ನು ಮೂಡಿಸುತ್ತಿದ್ದಾರೆ. ಯಾವ ದಿಕ್ಕಿನಿಂದ ನೋಡಿದರೂ ಕಾಂಗ್ರೆಸ್ ಜಯ ಸಾಧಿಸುವ ಲಕ್ಷಣಗಳೇ ಕಾಣಿಸುತ್ತಿವೆ.


ದಾವಣಗೆರೆ

ಲಿಂಗಾಯತರು 4.1 ಲಕ್ಷ, ಮುಸ್ಲಿಮರು 2 ಲಕ್ಷ, ಕುರುಬರು 1.7 ಲಕ್ಷ, ಮರಾಠರು 40 ಸಾವಿರ, ಎಸ್‌ಸಿ 2.6 ಲಕ್ಷ, ಎಸ್‌ಟಿ 1.8 ಲಕ್ಷ, ಉಪ್ಪಾರರು 30 ಸಾವಿರ, ಒಕ್ಕಲಿಗರು 30 ಸಾವಿರ, ಬೆಸ್ತರು 30 ಸಾವಿರ, ಗೊಲ್ಲರು 25 ಸಾವಿರ

ಈಗ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಾಳಯದ್ದೇ ಕಾರುಭಾರು. ಇಲ್ಲಿ ಏಳು ಜನ ಕಾಂಗ್ರೆಸ್ಸಿಗರು ಶಾಸಕರಾಗಿದ್ದಾರಲ್ಲದೆ, ದಾವಣಗೆರೆ ನಗರ ಮಹಾಸಭೆಯಲ್ಲೂ ಕಾಂಗ್ರೆಸ್ ಮೇಲುಗೈ ಸಾಧಿಸಿದೆ.

ಕಣದಲ್ಲಿರುವ ಬಿಜೆಪಿಯ ಸಿದ್ದೇಶ್ವರ, ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಮತ್ತು ಜೆಡಿಎಸ್‌ನ ಮಹಿಮಾ ಪಟೇಲ್ ಮೂವರೂ ಲಿಂಗಾಯತರು. ಮಹಿಮಾ ಹೊರತುಪಡಿಸಿದರೆ ಉಳಿದ ಇಬ್ಬರು ಜನಪ್ರಿಯತೆಯಲ್ಲಿ ಮತ್ತು ಹಣಬಲದಲ್ಲಿ ಸಮಾನ ಶಕ್ತಿ ಹೊಂದಿರುವವರು. ಇಲ್ಲಿ ಲಿಂಗಾಯತ ಮತಗಳೇ ನಿರ್ಣಾಯಕ


ಮಲ್ಲಿಕಾರ್ಜುನ್


ಸಿದ್ದೇಶ್


ಮಹಿಮಾ ಪಟೇಲ್

ಪಾತ್ರವಹಿಸುತ್ತಾದರೂ ಮೂವರ ನಡುವೆ ಅವುಗಳು ಹಂಚಿಹೋಗುವುದರಿಂದ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿರುವ ಮುಸ್ಲಿಮರು ಮತ್ತು ಹಿಂದುಳಿದ ವರ್ಗದವರು ಗೆಲುವಿಗೆ ಮುಖ್ಯ ಕಾರಣರಾಗುತ್ತಾರೆ. ಈ ಬಾರಿ ಈ ಎರಡೂ ಸಮುದಾಯಗಳು ಕಾಂಗ್ರೆಸ್ ಪರ ನಿಂತಿರುವುದರಿಂದ ಮತ್ತು ಇಲ್ಲಿ 'ಮೋದಿ ಫ್ಯಾಕ್ಟರ್' ಇಲ್ಲದಿರುವುದರಿಂದ ಕಾಂಗ್ರೆಸ್ ಒಂದಿಷ್ಟು ಮುಂದಿದೆ ಎನ್ನಬಹುದು.

ಶಿವಮೊಗ್ಗ


ಈಡಿಗರು 3 ಲಕ್ಷ, ಲಿಂಗಾಯತರು 2.2 ಲಕ್ಷ, ಮುಸ್ಲಿಮರು 2.2 ಲಕ್ಷ, ಒಕ್ಕಲಿಗರು 1 ಲಕ್ಷ, ಪರಿಶಿಷ್ಟರು 3 ಲಕ್ಷ.


ಇಲ್ಲಿ ಕಾಂಗ್ರೆಸ್ ನಾಲ್ಕು ಶಾಸಕರನ್ನು, ಜೆಡಿಎಸ್ ಮೂವರು ಶಾಸಕರನ್ನು ಹೊಂದಿದ್ದರೆ, ಬಿಜೆಪಿಯ ಏಕೈಕ ಶಾಸಕ ಯಡಿಯೂರಪ್ಪ. ಅವರ ವಿರುದ್ಧ ಜೆಡಿಎಸ್ ಪರವಾಗಿ ಗೀತಾ ಶಿವರಾಜಕುಮಾರ್ ಮತ್ತು ಕಾಂಗ್ರೆಸ್‌ನಿಂದ ಮಂಜುನಾಥ್ ಭಂಡಾರಿ ಸ್ಪರ್ಧಿಸುತ್ತಿದ್ದಾರೆ.

'ಸಂಭವನೀಯ' ಮೋದಿ ಸರ್ಕಾರದಲ್ಲಿ ಮಂತ್ರಿ ಆಗುವ ಕನಸು ಕಾಣುತ್ತಿರುವ ಯಡಿಯೂರಪ್ಪ ಇಲ್ಲಿ ಹಣದ ಹೊಳೆಯನ್ನು ಹರಿಸುತ್ತಿದ್ದಾರಲ್ಲದೆ ಅವರಿಗೆ ಲಿಂಗಾಯತರ ಬೆಂಬಲವಿದೆ. ಅವರ ಪ್ರತಿಸ್ಪರ್ಧಿ ಮತ್ತು ದಿವಂಗತ ಬಂಗಾರಪ್ಪನವರ

▶▶ 16

ರಾಜಕೀಯ ಪಕ್ಷಗಳೊ? ಕಾರ್ಪೋರೇಟ್ ಕಂಪನಿಗಳ ಏಜೆಂಟರೊ?





ದೇಶದಲ್ಲಿ ಲೋಕಸಭಾ ಚುನಾವಣೆ ನಡೆಯುತ್ತಿದೆ. ಪ್ರಮುಖ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ದೇಶದ ಅತ್ಯುನ್ನತ ಗದ್ದುಗೆ ಹಿಡಿಯಲು ಕಸರತ್ತು ನಡೆಸುತ್ತಿವೆ. ಒಬ್ಬರನ್ನೊಬ್ಬರು ಭ್ರಷ್ಟರು, ದುರಾಡಳಿತಗಾರರು ಎಂದು ಟೀಕಾಪ್ರಹಾರ ನಡೆಸುತ್ತಿರುವುದು ನಿತ್ಯವೂ ನಮ್ಮ ಕಿವಿಯ ಮೇಲೆ ಬೀಳುತ್ತಿದೆ.

ಆದರೆ ಇದೇ ಸಂದರ್ಭದಲ್ಲಿ ದೆಹಲಿ ಹೈಕೋರ್ಟ್ ಒಂದು ಐತಿಹಾಸಿಕ ತೀರ್ಪು ನೀಡಿದೆ. ನಮ್ಮ ದೇಶದ ಚುನಾವಣಾ ಪ್ರಕ್ರಿಯೆ ಮತ್ತು ಪ್ರಜಾತಂತ್ರಗಳನ್ನು ಪಾರದರ್ಶಕ ಮತ್ತು ಉತ್ತರದಾಯಿಯನ್ನಾಗಿಸುವ ನಿಟ್ಟಿನಲ್ಲಿ ಈ ತೀರ್ಪು ನಮಗೆ ಅತ್ಯಂತ ಮಹತ್ವದ್ದು. ಭಾರತದ ಮಾಧ್ಯಮಗಳು ಇಂಥಾ ಮಹತ್ವದ ತೀರ್ಪನ್ನು ಮಾಮೂಲಿಯಂತೆ ಕಡೆಗಣಿಸಿ ಮೂಲೆಗುಂಪು ಮಾಡಿಬಿಟ್ಟಿವೆ. ರಾಷ್ಟ್ರೀಯ ಹಿತಾಸಕ್ತಿಯ ದೃಷ್ಟಿಯಿಂದ ಈ ತೀರ್ಪಿನ ಬಗ್ಗೆ ನಾವು ಸ್ವಲ್ಪ ಗಮನ ಹರಿಸೋಣ.

'ಪ್ರಜಾತಂತ್ರ ಸುಧಾರಣಾ ಸಂಘಟನೆ (Association for Democratic Reforms - ADR) ಕಳೆದ ವರ್ಷ ದೆಹಲಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಒಂದು ರಿಟ್ ಅರ್ಜಿ (ಡಬ್ಲ್ಯುಪಿ(ಸಿ)131/2013) ದಾಖಲಿಸಿತ್ತು. ಈ ಸಂಘಟನೆಯ ಪರವಾಗಿ ಖ್ಯಾತ ನ್ಯಾಯವಾದಿ ಪ್ರಶಾಂತ್ ಭೂಷಣ್ ವಾದಿಸಿದ್ದರು.

ಈ ಕೇಸಿನಲ್ಲಿ ಎಡಿಆರ್ ಸಂಸ್ಥೆ ಮತ್ತು ಕೇಂದ್ರ ಸರ್ಕಾರದ ಮಾಜಿ ಕಾರ್ಯದರ್ಶಿ ಅರ್ಜಿದಾರರಾಗಿದ್ದರು. ಕೇಂದ್ರ ಸರ್ಕಾರ, ಚುನಾವಣಾ ಆಯೋಗ ಹಾಗೂ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಪ್ರತಿವಾದಿಗಳಾಗಿದ್ದವು.

ಸಾರ್ವಜನಿಕ ಹಿತಾಸಕ್ತಿಯ ಈ ಪೆಟಿಷನ್‌ನ ಸಾರಾಂಶ ಹೀಗಿದೆ:

'ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಇಂಗ್ಲೆಂಡ್ ಮೂಲದ ವೇದಾಂತ ರಿಸೋರ್ಸಸ್ ಮತ್ತು ಅದರ ಅಂಗಸಂಸ್ಥೆಗಳಿಂದ ಕೋಟಿಗಟ್ಟಳೆ ದೇಣಿಗೆ ಸ್ವೀಕರಿಸಿವೆ. ಫಾರಿನ್ ಕಾಂಟ್ರಿಬ್ಯೂಷನ್ (ರೆಗ್ಯುಲೇಷನ್) ಆಕ್ಟ್ 1976 ಪ್ರಕಾರ ಹೀಗೆ ವಿದೇಶಿ ಮೂಲದ ಕಂಪನಿಯಿಂದ ದೇಣಿಗೆ ಸ್ವೀಕರಿಸುವಂತಿಲ್ಲ.'

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಈ ದೇಣಿಗೆಗಳು ನೇರವಾಗಿ ವೇದಾಂತ ಕಂಪನಿಯ ಹೆಸರಿನಲ್ಲಿ ಪಾವತಿಯಾಗಿಲ್ಲ, ಬದಲಿಗೆ ಅದರ ಅಂಗ ಭಾಗವಾಗಿರುವ ಸ್ಟರ್‌ಲೈಟ್ ಇಂಡಸ್ಟ್ರೀಸ್ ಮತ್ತು ಸೆಸೋ ಗೋವಾ ಎಂಬ ಕಂಪನಿಗಳಿಂದ ಸಂದಾಯ ಮಾಡಲಾಗಿದೆ. ಮಾತ್ರವಲ್ಲದೆ ಈ ಕಂಪನಿಗಳು ರಾಜಕೀಯ ಪಕ್ಷಗಳಿಗೆ ದೇಣಿಗೆ ಕೊಡುವ ಉದ್ದೇಶಕ್ಕೆಂದೇ ಸೃಷ್ಟಿಸಿರುವ ಕೆಲವು ಟ್ರಸ್ಟ್‌ಗಳ ಮೂಲಕವೂ ಪಾವತಿಸಲಾಗಿದೆ.

ಬಿಜೆಪಿ ಪಕ್ಷ ವೇದಾಂತ ಸಮೂಹದ ಪಬ್ಲಿಕ್ ಅಂಡ್ ಪೊಲಿಟಿಕಲ್ ಅವೇರ್‌ನೆಸ್ ಟ್ರಸ್ಟ್ ಎಂಬ ಸಂಸ್ಥೆಯಿಂದ 2003-2011ರ ಅವಧಿಯ ನಡುವೆ ಆರು ಕಂತುಗಳಲ್ಲಿ ಒಟ್ಟು 14.5 ಕೋಟಿಗಳನ್ನು ಪಡೆದುಕೊಂಡಿದೆ. ಹಾಗೆಯೇ ಕಾಂಗ್ರೆಸ್ ಪಕ್ಷ ಸ್ಟರ್‌ಲೈಟ್ ಕಂಪನಿಯಿಂದ ಎರಡು ಕಂತಿನಲ್ಲಿ ಒಟ್ಟು ಆರು ಕೋಟಿ ರೂ.ಗಳನ್ನು ಪಡೆದುಕೊಂಡಿದೆ.

ಎಫ್‌ಸಿಆರ್‌ಎ ನಿಯಮಾವಳಿ ಪ್ರಕಾರ ಕಾಯಿದೆಯನ್ನು ಉಲ್ಲಂಘಿಸುವ ಕಂಪನಿಗಳಿಗೆ ದೇಣಿಗೆ ಮೊತ್ತದ ಮೂರು ಪಟ್ಟು ದಂಡ ವಿಧಿಸಲು ಅವಕಾಶವಿದೆ ಮತ್ತು ಹೀಗೆ ಹಣ ಪಾವತಿ ಮಾಡಿದ ಕಾರ್ಪೋರೇಟ್ ಅಧಿಕಾರಿಗೆ ಗರಿಷ್ಠ ಮೂರು ವರ್ಷಗಳ ಕಾರಾಗೃಹ ಶಿಕ್ಷೆ ವಿಧಿಸಲು ಅವಕಾಶವಿದೆ.

ಈ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮತ್ತು ಈ ಪಕ್ಷಗಳು ಸ್ಟರ್‌ಲೈಟ್ ಮತ್ತು ಸೆಸಾ ಗೋವಾ ಕಂಪನಿಗಳು ಭಾರತದಲ್ಲಿ ನೋಂದಣಿಯಾಗಿರುವುದರಿಂದ ವಿದೇಶಿ ಕಂಪನಿಯೆಂದು ಪರಿಗಣಿಸುವಂತಿಲ್ಲ ಎಂದು ವಾದ ಮಂಡಿಸಿದ್ದವು. ಆದರೆ ವಾಸ್ತವದಲ್ಲಿ ಈ ಕಂಪನಿಗಳು ವೇದಾಂತ ರಿಸೋರ್ಸಸ್ ಕಂಪನಿಯ ಸಬ್ಸಿಡಿಯರಿಗಳಾಗಿದ್ದು, ಅದರ ನೇರ ನಿಯಂತ್ರಣಕ್ಕೊಳಪಟ್ಟಿವೆ. ಈ ಅಂಶವನ್ನು ಲಂಡನ್ ಸ್ಟಾಕ್ ಎಕ್ಸ್‌ಚೇಂಜ್‌ಗೆ ಸಲ್ಲಿಸಿರುವ ದಾಖಲೆಗಳಲ್ಲಿ ಸ್ವತಃ ವೇದಾಂತ ಕಂಪನಿಯೇ ಒಪ್ಪಿಕೊಂಡಿದೆ.

ಕೇಂದ್ರ ಸರ್ಕಾರ, ಕಾಂಗ್ರೆಸ್ ಪಕ್ಷ ಮತ್ತು ಬಿಜೆಪಿ ಪಕ್ಷಗಳ ವಾದವನ್ನು ತಿರಸ್ಕರಿಸಿರುವ ಹೈಕೋರ್ಟ್ ಇನ್ನು ಆರು ತಿಂಗಳ ಅವಧಿಯೊಳಗೆ ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಂದ್ರಕ್ಕೆ ಸೂಚನೆ ನೀಡಿದೆ.

ವಿದೇಶಿ ದೇಣಿಗೆಯ ಕತೆ ಹೀಗಾದರೆ ಇನ್ನು ಸರ್ಕಾರಿ ಕಂಪನಿಯಿಂದ ದೇಣಿಗೆ ಪಡೆದ ಕತೆ ಇನ್ನೊಂದು ರೀತಿಯದು.

1951ರ ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 29(ಬಿ) ಪ್ರಕಾರ ಯಾವುದೇ ರಾಜಕೀಯ ಪಕ್ಷ ಸರ್ಕಾರಿ ಕಂಪನಿಗಳಿಂದ ಅಥವಾ ವಿದೇಶಿ ಕಂಪನಿಗಳಿಂದ ದೇಣಿಗೆ ಸ್ವೀಕರಿಸುವಂತಿಲ್ಲ. ಆದರೆ ಕಾಂಗ್ರೆಸ್ ಪಕ್ಷದ ಖಜಾಂಚಿ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಲೆಕ್ಕಪತ್ರದಲ್ಲಿ ಸ್ಟೇಟ್ ಟ್ರೇಡಿಂಗ್ ಕಾರ್ಪೋರೇಷನ್ ಮತ್ತು ಮೆಟಲ್ಸ್ ಅಂಡ್ ಮಿನರಲ್ಸ್ ಟ್ರೇಡಿಂಗ್ ಕಾರ್ಪೋರೇಷನ್ ಆಫ್ ಇಂಡಿಯಾ ಎಂಬ ಎರಡು ಸರ್ಕಾರದ ಒಡೆತನದಲ್ಲಿರುವ ಕಂಪನಿಗಳಿಂದ ದೇಣಿಗೆ ಪಡೆದಿರುವುದಾಗಿ ತಿಳಿಸಿದೆ!

ಹೀಗೆ ಸರ್ಕಾರಿ ಕಂಪನಿಯಿಂದ ಸಾರ್ವಜನಿಕರ ಹಣ ರಾಜಾರೋಷವಾಗಿ ರಾಜಕೀಯ ಪಕ್ಷವೊಂದಕ್ಕೆ ದೇಣಿಗೆ ಪಾವತಿಯಾಗುತ್ತದೆ ಎಂದರೆ ಈ ನೆಲದ ಕಾನೂನುಗಳಿಗೆ ಬೆಲೆಯೆಲ್ಲಿದೆ? ಹೀಗೆ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದ ಈ ಪಕ್ಷದ ಪ್ರತಿನಿಧಿಯನ್ನು ಪ್ರಶ್ನಿಸಿದಾಗ ಆ ದೇಣಿಗೆ ವಾಸ್ತವದಲ್ಲಿ ಎನ್‌ಎಸ್‌ಯುಐ ಎಂಬ ವಿದ್ಯಾರ್ಥಿ ಸಂಘಟನೆಗೆ ಕೊಟ್ಟಿದ್ದಾಗಿಯೂ, ಏನೋ ಕಣ್ತಪ್ಪಿನಿಂದ ಕಾಂಗ್ರೆಸ್ ಪಕ್ಷದ ಲೆಕ್ಕದಲ್ಲಿ ಸೇರಿಬಿಟ್ಟಿದೆಯೆಂದೂ ಸಮಜಾಯಿಷಿ ನೀಡುತ್ತಿದ್ದಾರೆ. ಅದು ಹೋಗಲಿ, ಕಾಂಗ್ರೆಸ್‌ನ ವಿದ್ಯಾರ್ಥಿ ಸಂಘಟನೆಯಾಗಿರುವ ಎನ್‌ಎಸ್‌ಯುಐ ಯಾವ ಘನಂದಾರಿ ದೇಶಸೇವೆ ಮಾಡುತ್ತಿದೆ ಎಂದು ಅದಕ್ಕೆ ಸರ್ಕಾರಿ ಹಣ ಹರಿಸಬೇಕು ಎಂಬ ಪ್ರಶ್ನೆಗೆ ಸದ್ಯಕ್ಕೆ ಯಾರೂ ಉತ್ತರಿಸುವ ಸ್ಥಿತಿಯಲ್ಲಿಲ್ಲ.

ಈ ವಿಷಯವನ್ನು ತೀವ್ರವಾಗಿ ಆಕ್ಷೇಪಿಸಿರುವ ಹೈಕೋರ್ಟ್ ಈ 'ಕಣ್ತಪ್ಪಿನ' ಸಮಜಾಯಿಷಿ ಬಗ್ಗೆ ಸೂಕ್ತ ತನಿಖೆ ನಡೆಸಿ ಕಾನೂನು ಕ್ರಮ ಜರುಗಿಸಬೇಕೆಂದು ಕೇಂದ್ರ ಸರ್ಕಾರ ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಿದೆ.

ಲೋಕಸಭಾ ಚುನಾವಣೆಯ ಪರ್ವದಲ್ಲಿ ಈ ತೀರ್ಪು ಹೊರಬಿದ್ದಿರುವುದು ಪ್ರಮುಖ ರಾಜಕೀಯ ಪಕ್ಷಗಳಿಗೆ ಛಡಿಯೇಟು ಬಿದ್ದಂತಾಗಿದೆ. ಈ ಸಂಗತಿ ಸದಾ ರೋಚಕತೆಯ ಗೀಳು ಅಂಟಿಸಿಕೊಂಡಿರುವ ಭಾರತದ ಮಾಧ್ಯಮಗಳಿಗೆ ಭಾರೀ ಆಹಾರವಾಗಬೇಕಿತ್ತು. ಆದರೆ ಮಾಧ್ಯಮಗಳು ಈ ಸಂಗತಿಗೆ ಯಾವುದೇ ಮಹತ್ವ ನೀಡದೆ ಮೂಲೆಗುಂಪು ಮಾಡಿಬಿಟ್ಟಿರುವುದು ಆಶ್ಚರ್ಯಕರವಾದ ಸತ್ಯ. ಹಾಗೆಯೇ ಇತರೆ ರಾಜಕೀಯ ಪಕ್ಷಗಳೂ ಕೂಡ ಈ ಬಗ್ಗೆ ಅಷ್ಟಾಗಿ ತಲೆಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಯಾಕೆಂದರೆ ಈ ದೇಶದ ರಾಜಕೀಯ ಪಕ್ಷಗಳು ನಡೆಯುತ್ತಿರುವುದೇ ಒಂದಲ್ಲ ಒಂದು ರೀತಿಯ ಕಾರ್ಪೋರೇಟ್ ಫಂಡಿಂಗ್ ಆಧಾರದಲ್ಲಿ ಎಂಬುದು ಒಂದು ಓಪನ್ ಸೀಕ್ರೆಟ್!

2004-05ರಿಂದ 2011-12ರ ಆರ್ಥಿಕ ವರ್ಷಗಳ ನಡುವಿನ ಏಳು ವರ್ಷಗಳಲ್ಲಿ ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳು ಸಲ್ಲಿಸಿರುವ ಆದಾಯ ಲೆಕ್ಕಪತ್ರ ಘೋಷಣೆಯನ್ನು ಗಮನಿಸೋಣ.

ಈ ಅವಧಿಯಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ 2,365 ಕೋಟಿಗಳ ಆದಾಯ ಗಳಿಸಿದ್ದು ಮೊದಲನೆ ಸ್ಥಾನದಲ್ಲಿದೆ. ಇಷ್ಟೊಂದು ಆದಾಯ ಬಂದಿದ್ದಾದರೂ ಎಲ್ಲಿಂದ? ಕಾಂಗ್ರೆಸ್ ಪಕ್ಷದ ಹೇಳಿಕೆ ಪ್ರಕಾರ 77.34% ಅರ್ಥಾತ್ 1829 ಕೋಟಿ ಆದಾಯ ಕೂಪನ್ ಮಾರಾಟದಿಂದ ಬಂದಿದೆಯಂತೆ! ಈ ಪಕ್ಷ ಅದೆಂಥ ಕೂಪನ್ ಮಾರಾಟ ಮಾಡಿದೆಯೋ ಭಗವಂತನೇ ಬಲ್ಲ.

ವಿರೋಧ ಪಕ್ಷವಾದ ಬಿಜೆಪಿ ಎರಡನೇ ಸ್ಥಾನದಲ್ಲಿದ್ದು (ಐಟಿ ಲೆಕ್ಕಪತ್ರದ ಪ್ರಕಾರ) ಅದರ ಆದಾಯ ಈ ಅವಧಿಯಲ್ಲಿ 1304 ಕೋಟಿಗಳು! ಅದರಲ್ಲಿ 84% ಆದಾಯ ಅರ್ಥಾತ್ 1095.98 ಕೋಟಿಗಳು ವಾಲೆಂಟರಿ ದೇಣಿಗೆಯಿಂದ ಬಂದಿದೆಯಂತೆ! ಇಷ್ಟು ಭಾರೀ ಪ್ರಮಾಣದಲ್ಲಿ ವಾಲೆಂಟರಿ ದೇಣಿಗೆ ಯಾರು ಕೊಟ್ಟಿರಬಹುದು ಎಂಬುದು ನಿಮ್ಮ ಊಹೆಗೆ ಬಿಟ್ಟದ್ದು.

ಹೀಗೆ ತಮ್ಮ ಆದಾಯ ಮೂಲದಲ್ಲಿ ಪಾರದರ್ಶಕತೆ ಕಾಯ್ದುಕೊಂಡಿಲ್ಲದ ಈ ಪಕ್ಷಗಳೇ ಇಂದು ದೇಶದ ಅಧಿಕಾರ ಹಿಡಿಯಲು ಭಾರೀ ಪೈಪೋಟಿಯಲ್ಲಿರುವುದು ನಮ್ಮ ದುರಾದೃಷ್ಟವಲ್ಲದೆ ಮತ್ತೇನಲ್ಲ.

ಇನ್ನು ಕಾರ್ಪೋರೇಟ್ ಕಂಪನಿಗಳು ರಾಜಕೀಯ

▶▶ 14

'ವೇದಾಂತ' ಹೇಳೋರು ತಿಂದಿದ್ದೇನು?

ವೇದಾಂತ ಎಂಬ ಕಾರ್ಪೋರೇಟ್ ಕಂಪನಿಗೂ, ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳಿಗೂ ನಡುವೆ ಎಂಥಾ ನಂಟಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಇತಿಹಾಸದ ಪುಟಗಳಿಂದ ಎರಡು ಪ್ರಮುಖ ಘಟನಾವಳಿಗಳನ್ನು ಅವಲೋಕಿಸೋಣ.

* ಇಂಗ್ಲೆಂಡ್‌ನಲ್ಲಿ ರಿಜಿಸ್ಟರ್ ಆಗಿರುವ ವೇದಾಂತ ರಿಸೋರ್ಸಸ್ ಎಂಬ ಕಂಪನಿಯ ಅಡಿಯಲ್ಲಿರುವ ಸ್ಟರ್‌ಲೈಟ್ ಕಂಪನಿಯ ಬೆಳವಣಿಗೆಯ ಇತಿಹಾಸ ಬಹಳ ಕುತೂಹಲಕಾರಿಯಾಗಿದೆ. ವಾಜಪೇಯಿ ಅವರ ನೇತೃತ್ವದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ (2001ರಲ್ಲಿ) ಇದೇ ಸ್ಟರ್‌ಲೈಟ್ ಕಂಪನಿಗೆ ಸಾರ್ವಜನಿಕ ಕ್ಷೇತ್ರದ ಉದ್ದಿಮೆಯಾಗಿದ್ದ ಭಾರತ್ ಅಲ್ಯುಮಿನಿಯಂ ಕಂಪನಿ (BALCO) ಯನ್ನು ಮೂರು ಕಾಸಿನ ಬೆಲೆಗೆ ಮಾರಾಟ ಮಾಡಲಾಗಿತ್ತು. ಇದು ದೇಶಾದ್ಯಂತ ಟ್ರೇಡ್ ಯೂನಿಯನ್‌ಗಳ ಪ್ರತಿಭಟನೆಗೂ ಕಾರಣವಾಗಿತ್ತು. ಆದರೆ ಎನ್‌ಡಿಎ ಸರ್ಕಾರ ಯಾವುದನ್ನೂ ಲೆಕ್ಕಿಸದೆ ಒಂದೇ ವಾರದಲ್ಲಿ BALCOವನ್ನು ಸ್ಟರ್‌ಲೈಟ್ ಕಂಪನಿಯ ಮಡಿಲಿಗೆ ಹಾಕಿಬಿಟ್ಟಿತ್ತು. BALCO ಕಂಪನಿಯ ಆರ್ಥಿಕ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಆಧಾರದ ಮೇಲೆ ಸ್ಟರ್‌ಲೈಟ್ ಕಂಪನಿ ದೈತ್ಯ ಪ್ರಮಾಣದಲ್ಲಿ ಬೆಳೆದು ನಿಂತಿದೆ.

ನಮ್ಮನ್ನಾಳುತ್ತಿರುವ ಸರ್ಕಾರಗಳ ರಾಷ್ಟ್ರದ್ರೋಹಿ ಆರ್ಥಿಕನೀತಿಗಳನ್ನು ಅರ್ಥ ಮಾಡಿಕೊಳ್ಳಲು ಎನ್‌ಡಿಎ ಅಧಿಕಾರಾವಧಿಯ ವಿಶೇಷತೆಯೊಂದನ್ನು ಅರ್ಥ ಮಾಡಿಕೊಂಡರೆ ಸಾಕು. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳನ್ನು ಇಂಥಾ ಭಾರೀ ದೇಶಿ, ವಿದೇಶಿ ಕಾರ್ಪೋರೇಟ್ ಕುಳಗಳ ಬಾಯಿಗೆ ಹಾಕಲಿಕ್ಕೆಂದೇ ಎನ್‌ಡಿಎ ಸರ್ಕಾರ ಕ್ಯಾಬಿನೆಟ್ ದರ್ಜೆಯ ಒಂದು ಪ್ರತ್ಯೇಕ ಸಚಿವಾಲಯವನ್ನು ಏರ್ಪಾಟು ಮಾಡಿಕೊಂಡಿತ್ತು. ಆ ವಿಶಿಷ್ಟ ಇಲಾಖೆಯ ವಿವಾದಿತ ಮಂತ್ರಿಯೇ ಅರುಣ್ ಶೌರಿ. ಅಂದಹಾಗೆ ಆ ಇಲಾಖೆಯ ಹೆಸರು Dis Investment Ministry ಅಪಹೂಡಿಕೆಯ ಸಚಿವಾಲಯ!

ಸದ್ಯಕ್ಕೆ ಈ ಅಂಶವನ್ನು ಪಕ್ಕಕ್ಕಿಡೋಣ. ಸ್ಟರ್‌ಲೈಟ್ ಕಂಪನಿಗೆ BALCOವನ್ನು 'ಮಾರಾಟ' ಮಾಡಿದ ಸಂದರ್ಭದಲ್ಲಿ ಸ್ಟರ್‌ಲೈಟ್ ಕಂಪನಿ, ಹರ್ಷದ್ ಮೆಹ್ತಾ ಮುಂತಾದವರೊಂದಿಗೆ ಷೇರುಮಾರುಕಟ್ಟೆಯ ಅವ್ಯವಹಾರದಲ್ಲಿ ತೊಡಗಿದೆ ಎಂದು ಸೆಬಿ ಆರೋಪಪಟ್ಟಿ ಸಲ್ಲಿಸಿತ್ತು. ವಿಚಾರಣೆಯ ನಂತರ ಎರಡು ವರ್ಷಗಳ ಕಾಲ ಷೇರುಮಾರುಕಟ್ಟೆ ವಹಿವಾಟಿನಿಂದ ಸ್ಟರ್‌ಲೈಟ್ ಕಂಪನಿಯನ್ನು ನಿಷೇಧಿಸಿತ್ತು. ಆದರೆ ಅದೇ ಅವಧಿಯಲ್ಲಿ ಸ್ಟರ್‌ಲೈಟ್ ಕಂಪನಿಗೆ ಪ್ರತಿಷ್ಠಿತ BALCO ಕಂಪನಿಯನ್ನು ಸ್ವಾಧೀನಪಡಿಸಿಕೊಳ್ಳುವ ಯೋಗವನ್ನು ಬಿಜೆಪಿ ಸರ್ಕಾರ ಒದಗಿಸಿಕೊಟ್ಟಿತ್ತು!

ಬಿಜೆಪಿ ಪಕ್ಷ ಕಾಂಗ್ರೆಸ್ ಪಕ್ಷಕ್ಕಿಂತ ಯಾವ ರೀತಿ ಭಿನ್ನ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದಂತಾಯಿತೆ?

* ಮತ್ತೊಂದು ಉದಾಹರಣೆ SESA Goa ಎಂಬ ಕಂಪನಿಯದು. ಈ ಕಂಪನಿಯನ್ನು ವೇದಾಂತ ಕಂಪನಿ ಟೇಕ್ ಓವರ್ ಮಾಡಿದ ಪ್ರಕ್ರಿಯೆಯಲ್ಲಿ ಹಣಕಾಸು ಸಚಿವ ಚಿದಂಬರಂ ಅವರ ಪಾತ್ರದ ಬಗ್ಗೆ ಅನೇಕ ಆರೋಪಗಳಿವೆ. ಚಿದಂಬರಂ ಅವರು 2004ರಲ್ಲಿ ಯುಪಿಎ ಸರ್ಕಾರದಲ್ಲಿ ಹಣಕಾಸು ಸಚಿವರಾಗಿ ಅಧಿಕಾರ ಸ್ವೀಕರಿಸುವತನಕ ವೇದಾಂತ ರಿಸೋರ್ಸಸ್ ಕಂಪನಿಯ ಡೈರೆಕ್ಟರ್ ಹುದ್ದೆಯಲ್ಲಿದ್ದರು ಎಂಬುದನ್ನು ನಾವು ಸದಾಕಾಲ ನೆನಪಿನಲ್ಲಿಡಬೇಕು.

ದೇಶದ ಅತಿದೊಡ್ಡ ಅದಿರು ರಫ್ತುದಾರನಾಗಿದ್ದ SESA Goa ಕಂಪನಿಯಲ್ಲಿ ಬಹುಪಾಲು ಷೇರುಗಳು ಮೂಲತಃ ಜಪಾನ್ ಕಂಪನಿಯೊಂದರ ಹಿಡಿತದಲ್ಲಿತ್ತು. 2007ರಲ್ಲಿ ತನ್ನ ಜಾಗತಿಕ ಯೋಜನೆಯ ಭಾಗವಾಗಿ ಮೈನಿಂಗ್ ವ್ಯವಹಾರದಿಂದ ಹೊರಬರಲು ತೀರ್ಮಾನಿಸಿದ ಜಪಾನಿ ಕಂಪನಿ SESA Goa ಕಂಪನಿಯನ್ನು ಮಾರಾಟ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡಿತು. ಈ ಕಂಪನಿಯನ್ನು ಕೊಳ್ಳಲು ಜಾಗತಿಕ ಮಟ್ಟದ ಪ್ರಮುಖ ನಾಲ್ಕು ಕಂಪನಿಗಳು ಮುಂದೆ ಬಂದಿದ್ದವು. ಅವುಗಳಲ್ಲಿ ವೇದಾಂತ ರಿಸೋರ್ಸಸ್ ಕೂಡ ಒಂದು.

ಇದೇ ಸಂದರ್ಭದಲ್ಲಿ 2007ರ ಫೆಬ್ರವರಿಯಲ್ಲಿ ಮಂಡಿಸಲಾದ ಬಜೆಟ್‌ನಲ್ಲಿ ಪಿ.ಚಿದಂಬರಂ ಅವರು ಕಬ್ಬಿಣದ ಅದಿರಿನ ರಫ್ತಿನ ಮೇಲೆ ಪ್ರತಿ ಟನ್‌ಗೆ 300 ರೂಪಾಯಿಗಳಷ್ಟು ತೆರಿಗೆ ವಿಧಿಸಿದರು. ನಮ್ಮ ರಾಷ್ಟ್ರೀಯ ಸಂಪನ್ಮೂಲಗಳ ರಕ್ಷಣೆಗಾಗಿ ಇದು ಅನಿವಾರ್ಯವೆಂದು ತಮ್ಮ ಕ್ರಮವನ್ನು ಸಮರ್ಥಿಸಿಕೊಂಡರು.

ಇದಕ್ಕಿದ್ದಂತೆ ರಫ್ತು ತೆರಿಗೆ ಏರಿಕೆಯಾಗಿದ್ದರಿಂದ ಲಾಭದ ಪ್ರಮಾಣ ಕುಸಿಯಬಹುದೆಂಬ ಲೆಕ್ಕಾಚಾರದಲ್ಲಿ SESA Goa ಕೊಳ್ಳಲು ಕಣದಲ್ಲಿದ್ದ ಇತರೆ ಕಂಪನಿಗಳು ಹಿಂದೆ ಸರಿದವು. ನಿರೀಕ್ಷೆಯಂತೆ ಚಿದಂಬರಂ ಜೊತೆ ಸಂಬಂಧ ಹೊಂದಿದ್ದ ವೇದಾಂತ ಕಂಪನಿ SESA Goaವನ್ನು 2007ರ ಏಪ್ರಿಲ್‌ನಲ್ಲಿ ತನ್ನ ಕೈವಶ ಮಾಡಿಕೊಂಡಿತು.

ಇದಾದ ಒಂದೇ ತಿಂಗಳಲ್ಲಿ ಅಂದರೆ ಮೇ 3 ರಂದು ಚಿದಂಬರಂ ಅವರು ಅದಿರು ರಫ್ತು ತೆರಿಗೆಯನ್ನು 300ರಿಂದ 50 ರೂಪಾಯಿಗೆ ಇಳಿಸಿ ಕೃತಾರ್ಥರಾದರು. ರಫ್ತು ಉದ್ಯಮವನ್ನು ಉತ್ತೇಜಿಸಲು ಇದು ಅನಿವಾರ್ಯ ಎಂಬುದು ಅವರ ಸಮರ್ಥನೆ.

ಕೇವಲ ಮೂರು ತಿಂಗಳ ಅವಧಿಯಲ್ಲಿ ನಡೆದ ಈ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳುವುದು ಓದುಗರ ವಿವೇಚನೆಗೆ ಬಿಟ್ಟದ್ದು.

ಆಹಾರ ಭದ್ರತೆ: ಜನರನ್ನು ಒಳಗೊಳ್ಳುವ ಯೋಜನೆ

ಆಹಾರಕ್ಕೆ ನಮ್ಮ ಜನರು ಬಹಳ ಹಿಂದಿನಿಂದಲೂ ಪ್ರಮುಖವಾದ ಸ್ಥಾನವನ್ನು ನೀಡುತ್ತಾ ಬಂದಿದ್ದಾರೆ. ಉದಾಹರಣೆಗೆ 12ನೆಯ ಶತಮಾನದ ಅಂಬಿಗರ ಚೌಡಯ್ಯನ ವಚನವನ್ನು ನೋಡಿ:

ದೇಹಾರವ ಮಾಡುವ ಅಣ್ಣಗಳಿರಾ, ಅಣ್ಣಗಳಿರಾ
ಒಂದು ತುತ್ತು ಆಹಾರವನ್ನಿಕ್ಕಿರಯ್ಯಾ
ದೇಹಾರಕ್ಕೆ ಆಹಾರವೇ ನಿಚ್ಚಣಿಕೆ
ದೇಹಾರ ಮಾಡುತ್ತ ಆಹಾರವನಿಕ್ಕದಿದ್ದರೆ
ಆ ಹರನಿಲ್ಲೆಂದನಂಬಿಗ ಚೌಡಯ್ಯ

ಚೌಡಯ್ಯನ ಪ್ರಕಾರ ದೇವಾಲಯ/ದೇವರ ಪೂಜೆಗಳಿಗಿಂತ ಆಹಾರ ಮುಖ್ಯ. ಅದು ಪ್ರಥಮ-ಪ್ರಾಥಮಿಕ. ಇವೆರಡರ ನಡುವೆ ಆಯ್ಕೆಯ ಪ್ರಶ್ನೆ ಬಂದರೆ ಚೌಡಯ್ಯ ಆಹಾರವನ್ನು ಆಯ್ಕೆ ಮಾಡಿಕೊಳ್ಳುತ್ತಾನೆ ವಿನಾ ದೇಹಾರವನ್ನಲ್ಲ. ಅಲ್ಲಮಪ್ರಭು ತನ್ನ ಒಂದು ವಚನದಲ್ಲಿ "ಒಡಲಿಚ್ಛೆಯ ಸವೆಸದೆ ನಿಮಿಷವಿರಬಾರದು' ಅನ್ನುತ್ತಾನೆ. ದಾಸೋಹವು ಆಹಾರಕ್ಕೆ ಸಂಬಂಧಿಸಿದ ಸಂಗತಿಯೇ ಆಗಿದೆ.

ಸಮಾಜದಲ್ಲಿ ಯಾವುದೇ ಬಗೆಯ ಭೇದ-ಭಾವವನ್ನು ಮತ್ತು ಮೇಲು-ಕೀಳನ್ನು ಎಣಿಸದೆ ಎಲ್ಲರಿಗೂ ಆಹಾರ ಭದ್ರತೆಯನ್ನು ಒದಗಿಸುವುದು ಸಾಮಾಜಿಕ ನ್ಯಾಯವಾಗಿದೆ. ಆಹಾರ ಭದ್ರತೆ ಅನ್ನುವುದು ಕೇವಲ ಜನಪ್ರಿಯ ಕಾರ್ಯಕ್ರಮ ಮಾತ್ರವಲ್ಲ. ನಿಜ, ಅಲ್ಲಿ ರೂಪಾಯಿಗೆ ಒಂದು ಕೆ.ಜಿ. ಅಕ್ಕಿಯನ್ನು ನೀಡಲಾಗುತ್ತದೆ. ಆದರಿಂದ ಆದನ್ನು ಜನಪ್ರಿಯ ಕಾರ್ಯಕ್ರಮ ಎಂದು ಕರೆಯಬಹುದು. ಇನ್ನೊಂದು ನೆಲೆಯಿಂದ ನೋಡಿದಾಗ ಅದು ಮುಖ್ಯವಾಗಿ ಜನರನ್ನು ಒಳಗೊಳ್ಳುವ ಯೋಜನೆಯಾಗಿ ಕಾಣುತ್ತದೆ. ಅದು ಜನಪ್ರಿಯ ಕಾರ್ಯಕ್ರಮ ಮಾತ್ರವಲ್ಲ, ಅದು ಜನರನ್ನು ಒಳಗೊಳ್ಳುವ ಕಾರ್ಯಕ್ರಮ. ಹೇಗೆ? ಇದು ಜನರಲ್ಲಿ ಒಂದು ಬಗೆಯ ಅವಲಂಬನೆ ಭಾವನೆಯನ್ನು ಉಂಟು ಮಾಡುವುದಿಲ್ಲವೆ? ದುಡಿಮೆಗಾರರು ಇದರಿಂದ ಸೋಮಾರಿಗಳಾಗುವುದಿಲ್ಲವೆ? ಅನ್ನಭಾಗ್ಯದಲ್ಲಿ ಖರೀದಿಸಿದ ಅಕ್ಕಿಯಲ್ಲಿ ಒಂದು ಭಾಗವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿ ದುಡಿಯುವುದನ್ನೇ ಜನರು ಬಿಟ್ಟುಬಿಡುವುದಿಲ್ಲವೆ? ಇದು ಸರ್ಕಾರದ ಖಜಾನೆಯ ಮೇಲೆ ಅನವಶ್ಯಕ ಹೊರೆಯನ್ನು ಹೇರುವುದಿಲ್ಲವೆ? ತೆರಿಗೆಗಳ ಮೂಲಕ ಸಂಗ್ರಹಿಸಿದ ಹಣವನ್ನು ಅನ್ನಭಾಗ್ಯದ ಮೂಲಕ ವ್ಯರ್ಥವಾಗಿ ಪೋಲು ಮಾಡಿದಂತಾಗುವುದಿಲ್ಲವೆ? ಇದರಿಂದಾಗಿ ಜನರು ಹೊಲ-ಗದ್ದೆಗಳಲ್ಲಿ ದುಡಿಯುವುದನ್ನೇ ಬಿಟ್ಟುಬಿಟ್ಟರೆ ಆಹಾರದ ಉತ್ಪಾದನೆ ಕಡಿಮೆಯಾಗುವುದಿಲ್ಲವೇ? ಇದು ನಿರುತ್ತೇಜನ ಕಾರಕವಾಗಿ ಕೆಲಸ ಮಾಡುವುದಿಲ್ಲವೆ? ಒಂದು ವೇಳೆ ಹಾಗೆ ಕಡಿಮೆಯಾದರೆ ಅನ್ನಭಾಗ್ಯಕ್ಕೆ ಅಕ್ಕಿ ಎಲ್ಲಿಂದ ಬರುತ್ತದೆ? ಅನ್ನಭಾಗ್ಯ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರ ಮತ್ತು ಆಹಾರ ಭದ್ರತೆ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿದಾಗ ಮಾಧ್ಯಮಗಳಲ್ಲಿ ಎದ್ದ ಬಹುಮುಖ್ಯ ಪ್ರಶ್ನೆಗಳಿವು.

ಈ ಬಗೆಯ ನೂರಾರು ಪ್ರಶ್ನೆಗಳನ್ನು ಆಹಾರ ಭದ್ರತೆ ಬಿಲ್ಲಿನ ಬಗ್ಗೆ, ಅನ್ನಭಾಗ್ಯ ಯೋಜನೆಯ ಬಗ್ಗೆ ಎತ್ತಲಾಗುತ್ತಿದೆ. ಈ ಎಲ್ಲ ಪ್ರಶ್ನೆಗಳು ಸಮಾನತೆ, ಸಾಮಾಜಿಕ ನ್ಯಾಯ, ಮಾನವ ಹಕ್ಕುಗಳ ಬಗೆಗಿನ ತಪ್ಪು ತಿಳುವಳಿಕೆಯಿಂದ, ತಪ್ಪು ಧೋರಣೆಯಿಂದ ಮೂಡಿಬಂದ ಸಂಗತಿಗಳಾಗಿವೆ. ಈ ಬಗೆಯ ಪ್ರಶ್ನೆಗಳಿಗೆ ಉತ್ತರ ನೀಡುವ ಅಗತ್ಯವಿದೆ.

1. ಬಡವರ ಬಗೆಗಿನ ತಿರಸ್ಕಾರ ಮನೋಭಾವದ ಜಾಗತಿಕ ಆಯಾಮ

ಬಡವರಿಗೆ, ಹಸಿದಿರುವವರಿಗೆ ದುಸ್ಥಿತಿಯಲ್ಲಿರುವವರಿಗೆ, ಚಾರಿತ್ರಿಕ ತಾರತಮ್ಯವನ್ನು ಅನುಭವಿಸುತ್ತಿರುವವರಿಗೆ ಉತ್ತೇಜನ ನೀಡುವುದು, ಸಬ್ಸಿಡಿಯಲ್ಲಿ ನೆರವು ನೀಡುವುದು, ಮೀಸಲಾತಿ ಒದಗಿಸುವುದು ಮುಂತಾದ ಸಂಗತಿಗಳನ್ನು ತಾತ್ಸಾರದಿಂದ, ಕಂಟೆಪ್ಟ್‌ನಿಂದ ನೋಡುವ ಧೋರಣೆಗೆ ಜಾಗತಿಕ ಆಯಾಮವಿದೆ. ಬಡವರ ಬಗ್ಗೆ, ಹಸಿದವರ ಬಗ್ಗೆ ಹಗುರವಾಗಿ ಮಾತನಾಡುವ ಕ್ರಮ ಕರ್ನಾಟಕಕ್ಕೆ, ಭಾರತಕ್ಕೆ ಮಾತ್ರ ಸೀಮಿತವಾದ ಸಂಗತಿಯಲ್ಲ, ಅಮೆರಿಕೆಯಲ್ಲೂ ಇಂತಹ ಮನೋಭಾವ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ನಾವು ಯಾವುದನ್ನು ಆಹಾರ ಭದ್ರತೆಯೆಂದು ಕರೆಯುತ್ತೇವೆಯೋ ಅಂತಹದ್ದೇ ಕಾರ್ಯಕ್ರಮವನ್ನು ಅಲ್ಲಿ ಫುಡ್ ಸ್ಟಾಂಪ್ಸ್ ಪ್ರೋಗ್ರಾಮ್ ಎಂದು ಕರೆಯಲಾಗುತ್ತದೆ. ಇದಕ್ಕಾಗಿ ಅಮೆರಿಕಾ ಸರ್ಕಾರ 2013ರಲ್ಲಿ ಖರ್ಚು ಮಾಡಿದ ಮೊತ್ತ 76 ಬಿಲಿಯನ್ ಡಾಲರುಗಳು (ರೂಪಾಯಿಗಳ ಲೆಕ್ಕದಲ್ಲಿ ಅದು ರೂ. 4.56 ಲಕ್ಷ ಕೋಟಿಯಾಗುತ್ತದೆ). ಅಮೆರಿಕೆಯಲ್ಲಿ ಸುಮಾರು 4.5 ಕೋಟಿ ಜನರು ಇದರಿಂದ ಲಾಭ ಪಡೆಯುತ್ತಿದ್ದಾರೆ. ಈ ಕಾರ್ಯಕ್ರಮದ ಮೇಲೆ ಸರ್ಕಾರ ಮಾಡುವ ಒಂದು ಡಾಲರ್ ಖರ್ಚಿಗೆ ಪ್ರತಿಯಾಗಿ ಅದು 1.75 ಡಾಲರಿನಷ್ಟು ಆರ್ಥಿಕ ಚಟುವಟಿಕೆಗಳು ಉಂಟಾಗುತ್ತಿವೆ ಎಂದು ಅಧ್ಯಯನಗಳು ತಿಳಿಸುತ್ತಿವೆ. ಈ ಬಗ್ಗೆ ಪಾಲ್ ಕ್ರುಗ್‌ಮನ್ ತನ್ನ ಇತ್ತೀಚಿಗಿನ ಅಂಕಣದಲ್ಲಿ ಜನರಲ್ಲಿ, ಸಂಸತ್ ಸದಸ್ಯರಲ್ಲಿ ಬಡತನ ನಿವಾರಣಾ ಕಾರ್ಯಕ್ರಮ, ಆಹಾರ ಭದ್ರತೆ ಮುಂತಾದವುಗಳ ಬಗ್ಗೆ ಇರುವ ಧೋರಣೆಯ ಬಗ್ಗೆ ಚರ್ಚೆ ಮಾಡಿದ್ದಾನೆ. ಈ ವಿಚಾರದ ಬಗ್ಗೆ ಅಲ್ಲಿನ ಸಂಸತ್ತಿನಲ್ಲಿ ಮಂಡಿತವಾದ ಎರಡು ಅಭಿಪ್ರಾಯಗಳ ಬಗ್ಗೆ ನಮ್ಮ ಗಮನ ಸೆಳೆಯುತ್ತಾನೆ.

1. ಬಡತನ ನಿವಾರಣಾ ಕಾರ್ಯಕ್ರಮಗಳು ಜನರಲ್ಲಿ ಒಂದು ಬಗೆಯ ಸಂತುಷ್ಟ ಭಾವನೆಯನ್ನು ಬೆಳೆಸಿ ಬಿಡುತ್ತದೆ. ಅಂತಹ ಕಾರ್ಯಕ್ರಮಗಳು ಜನರಲ್ಲಿ ದುಡಿಯುವ ಉತ್ಸಾಹವನ್ನು ಹತ್ತಿಕ್ಕಿ ಬಿಡುತ್ತವೆ.



2. ಇಂತಹ ಕಾರ್ಯಕ್ರಮಗಳಿಂದಾಗಿ ಬಡವರಲ್ಲಿ ಉಂಟಾಗುವ ಸಂತುಷ್ಟ-ಸಂತೃಪ್ತ ಭಾವನೆಯು ಮತ್ತು ದುಡಿಮೆಯ ಬಗ್ಗೆ ತಾತ್ಸಾರ ಮನೋಭಾವ ಮುಂತಾದವು ಬಡತನವು ಮುಂದುವರಿಯುತ್ತಿರುವುದಕ್ಕೆ ಕಾರಣವಾಗುತ್ತಿವೆ.

ಇಂತಹ ತೀರ್ಮಾನಗಳಲ್ಲಿ ಯಾವುದೇ ಹುರುಳಿಲ್ಲ ಎಂಬುದನ್ನು ಅವನು ಬಹಿರಂಗಪಡಿಸಿದ್ದಾನೆ. ಬಡತನವು ಏಕೆ ಮುಂದುವರಿಯುತ್ತಿದೆ? ಅದಕ್ಕೆ ಮುಖ್ಯ ಕಾರಣವೆಂದರೆ ಅವರಲ್ಲಿ ಬಹುಪಾಲು ಜನರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ, ಅವರಿಗೆ ಸಾಕಷ್ಟು ಪ್ರಮಾಣದಲ್ಲಿ ವೈದ್ಯಕೀಯ ನೆರವು ದೊರೆಯುತ್ತಿಲ್ಲ, ಮುಖ್ಯವಾಗಿ ಅವರಿಗೆ ಒಳ್ಳೆಯ ಶಿಕ್ಷಣ ದೊರೆಯುತ್ತಿಲ್ಲ. ಕ್ರುಗ್‌ಮನ್ ಪ್ರಕಾರ ಅಮೆರಿಕೆಯಲ್ಲಿನ ಬಡತನ ನಿವಾರಣಾ ಕಾರ್ಯಕ್ರಮಗಳು ವಿವಿಧ ರೀತಿಯಲ್ಲಿ ಬಡವರಿಗೆ ನೆರವಾಗುತ್ತಿವೆ. ಉದಾಹರಣೆಗೆ ಅಲ್ಲಿ ಯಾರು ಆಹಾರ ಸ್ಟಾಂಪುಗಳ ಕಾರ್ಯಕ್ರಮದಡಿಯಲ್ಲಿ ನೆರವು ಪಡೆಯುತ್ತಿದ್ದಾರೋ ಅವರ ಆರೋಗ್ಯ ಸ್ಥಿತಿಗತಿಯು ಅಂತಹ ನೆರವು ಪಡೆಯದೆ ಇರುವವರಿಗಿಂತ ಉತ್ತಮವಾಗಿದೆ. ಈ ಕಾರ್ಯಕ್ರಮಗಳಿಂದ ಉಪಯೋಗ ಪಡೆಯುತ್ತಿರುವವರ ಕಾರ್ಯಕ್ಷಮತೆಯು ನೆರವು ಪಡೆಯುವುದಕ್ಕೆ ಹಿಂದೆ ಇದ್ದುದಕ್ಕಿಂತಲೂ ಈಗ ಉತ್ತಮವಾಗಿದೆ. ಕ್ರುಗ್‌ಮನ್ ಪ್ರಕಾರ ಅನೇಕ ಮುಂದುವರಿದ ದೇಶಗಳಲ್ಲಿರುವುದಕ್ಕಿಂತ ಅಮೆರಿಕೆಯಲ್ಲಿ ಸಾಮಾಜಿಕ ಮೇಲು ಚಲನೆಯ ನಡೆ ಮಂದಗತಿಯಲ್ಲಿದೆ. ಅಮೆರಿಕೆಯಲ್ಲಿ ಬಡತನವು ಮುಂದುವರಿಯುತ್ತಿರುವುದಕ್ಕೆ ಸರ್ಕಾರವು ಹೆಚ್ಚು ಹೆಚ್ಚು ನೆರವನ್ನು ಬಡವರಿಗೆ ಉಚಿತವಾಗಿ ನೀಡುತ್ತಿದೆ ಎಂಬುದಕ್ಕಿಂತ ಅವರಿಗೆ ಸರ್ಕಾರ ಹೆಚ್ಚು ಹೆಚ್ಚು ನೆರವನ್ನು ನೀಡುತ್ತಿಲ್ಲ ಎಂಬುದು ಮುಖ್ಯ ಕಾರಣವಾಗಿದೆ. ಮತ್ತೊಬ್ಬ ಅಂಕಣಗಾರ ಅಮೆರಿಕೆಯಲ್ಲಿನ ಸಬ್ಸಿಡಿ ರಾಜಕಾರಣದ ಬಗ್ಗೆ ಹೇಳುವ ಮಾತು ಕುತೂಹಲಕಾರಿಯಾಗಿದೆ. ವಾರ್ಷಿಕವಾಗಿ ಅಮೆರಿಕೆಯ ಹತ್ತು ಬೃಹತ್ ಬ್ಯಾಂಕುಗಳಿಗೆ ನೀಡಲಾದ ಸಬ್ಸಿಡಿ 83 ಬಿಲಿಯನ್ ಡಾಲರ್ ಎಂದು ಒಂದು ಅಧ್ಯಯನ ಹೇಳುತ್ತದೆ. ಅಮೆರಿಕೆಯ ರಾಜ್ಯಗಳು ಮತ್ತು ದೊಡ್ಡ ಪಟ್ಟಣಗಳು ಕಾರ್ಪೋರೇಟ್ ಸಂಸ್ಥೆಗಳಿಗೆ ನೀಡುತ್ತಿರುವ ಸಬ್ಸಿಡಿ ವಾರ್ಷಿಕ 80 ಬಿಲಿಯನ್ ಡಾಲರ್ ಎಂದು ಅಂದಾಜು ಮಾಡಲಾಗಿದೆ. ಆದರೆ ಅಮೆರಿಕೆಯ ಸಂಸತ್ತಿನಲ್ಲಿರುವ ಕೋಟ್ಯಾಧಿಪತಿ ಸದಸ್ಯರುಗಳೆಲ್ಲ ಉಳ್ಳವರಿಗೆ ನೀಡುವ ಸಬ್ಸಿಡಿಯ ಬಗ್ಗೆ ಮಾತನಾಡದೆ ಉಳಿದವರಿಗೆ ಮತ್ತು ಬಡವರಿಗೆ ನೀಡುವ ಆಹಾರ ಮತ್ತು ಪೌಷ್ಟಿಕ ಆಹಾರದ ಸಬ್ಸಿಡಿಯನ್ನು ರದ್ದುಪಡಿಸುವುದರ ಬಗ್ಗೆ ಉಗ್ರವಾದ ವಾದ ಮಾಡುತ್ತಿದ್ದಾರೆ. ಬಡವರ ಬಗ್ಗೆ ಶ್ರೀಮಂತರಿಗೆ ಎಲ್ಲ ದೇಶಗಳಲ್ಲೂ ಅಸೂಯೆ ಮತ್ತು ತಿರಸ್ಕಾರವಿದೆ.

2. ಆಹಾರ ಭದ್ರತೆಯು ಹಕ್ಕಿನ ಸಂಗತಿಯೇ ವಿನಾ ಹಂಗಿನ ಸಂಗತಿಯಲ್ಲ

ಇಂದು ನಾವು ಹಕ್ಕಿನ ಪರಿಭಾಷೆಯ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ನಾವೆಲ್ಲರೂ ಮನುಷ್ಯರು ಎಂಬ ಕಾರಣಕ್ಕೆ ನಮಗೆ ಕೆಲವು ಹಕ್ಕುಗಳು ಪ್ರಾಪ್ತವಾಗಿವೆ. ಬದುಕು ಅನ್ನುವುದು ಕೇವಲ ಊಟ, ಬಟ್ಟೆ, ಸೂರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ, ಅವೆಲ್ಲ ಬಹಳ ಮುಖ್ಯ, ಅವು ಘನತೆಯಿಂದ ಬದುಕು ಸಾಗಿಸುವುದಕ್ಕೆ ಸಂಬಂಧಿಸಿದ ಸಂಗತಿಯಾಗಿದೆ. ತಾರತಮ್ಯ, ಭೇದ-ಭಾವ, ಪವಿತ್ರ-ಅಪವಿತ್ರ ಭಾವನೆ, ಜಾತೀಯತೆ, ಜನಾಂಗೀಯತೆ ಮುಂತಾದವು ಚಾರಿತ್ರಿಕವಾಗಿ ಹರಿದುಕೊಂಡು ಬರುತ್ತಿವೆ. ಅವುಗಳಿಂದ ಬಿಡುಗಡೆ ಪಡೆದುಕೊಳ್ಳುವುದು ಸುಲಭದ ಕೆಲಸವಲ್ಲ. ಅನ್ನಭಾಗ್ಯ ಅನ್ನುವುದು ದತ್ತಿ-ದಾನಧ ಸಂಗತಿಯಲ್ಲ, ಅದು ಹಕ್ಕಿನ ಸಂಗತಿ. ಆದರೆ ದಾನ-ದತ್ತಿಗಳ ವಿಷಚಕ್ರದಲ್ಲಿ ಸಿಲುಕಿಕೊಂಡಿರುವ ನಮ್ಮ ಸಮಾಜದಲ್ಲಿ ಇಂದಿಗೂ ದಾನದ ಪರಿಭಾಷೆಯು ಬಳಕೆಯಲ್ಲಿರುವುದುನ್ನು ಕಾಣಬಹುದು. ಉದಾಹರಣೆಗೆ 2004ರಲ್ಲಿ ನಾವು ಆರಂಭಿಸಿದ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮವು 'ಅಕ್ಷರ ದಾಸೋಹ'ವಾಗಿತ್ತು, ಆದರೆ ಅದನ್ನು ಇಂದು ಅಕ್ಷಯ ಪಾತ್ರವನ್ನಾಗಿ ಮಾಡಲಾಗಿದೆ. ಅಕ್ಷಯ ಪಾತ್ರ ಅನ್ನುವುದು ದಾನದ ಸಂಗತಿ. ಅಕ್ಷರ ದಾಸೋಹ ಹಕ್ಕಿನ ಸಂಗತಿ. ಯಾಕೆ ಹೀಗೆ ಇದು ಬದಲಾಯಿತು? ಯಾರಿಗೂ ತಿಳಿದಿಲ್ಲ, ಇಲ್ಲಿ ದಾನದ ಪರಿಭಾಷೆಯು ಕೆಲಸ ಮಾಡಿದೆ. ಆದರೆ ನಾವು ತಿಳಿದುಕೊಳ್ಳಬೇಕಾದ ಸಂಗತಿಯೆಂದರೆ ಬಡವರು ತಾವು ಪಡೆಯುತ್ತಿರುವ ಸಬ್ಸಿಡಿ ಬೆಲೆಯಲ್ಲಿನ ಪಡಿತರವು ಹಕ್ಕಿನ ಸಂಗತಿಯೇ ವಿನಾ ಹಂಗಿನ ಸಂಗತಿಯಲ್ಲ, ಇದಕ್ಕೆ ಮತ್ತಷ್ಟು ವಿವರವನ್ನು ಮತ್ತು ಸಮರ್ಥನೆಯನ್ನು ಮುಂದೆ ನೀಡಿದ್ದೇನೆ.

ಅನ್ನಭಾಗ್ಯ ಅನ್ನುವುದು ಸಂವಿಧಾನಾತ್ಮಕ ಹಕ್ಕು. ನಮ್ಮ ಸಂವಿಧಾನದ ಆರ್ಟಿಕಲ್ 21ರಲ್ಲಿ ಜೀವಿಸುವ ಹಕ್ಕನ್ನು ಎಲ್ಲರಿಗೂ ನೀಡಲಾಗಿದೆ. ಆದರೆ ಆಹಾರದ ಹಕ್ಕನ್ನು ನೀಡದಿದ್ದರೆ ಜೀವಿಸುವ ಹಕ್ಕಿಗೆ ಯಾವುದೇ ಅರ್ಥವಿರುವುದಿಲ್ಲ. ಜೀವಿಸುವ ಹಕ್ಕು ಜನರ 'ಜೀವನೋಪಾಯದ ಹಕ್ಕ'ನ್ನು ಒಳಗೊಂಡಿದೆ. ಈ ಜೀವನೋಪಾಯ ಹಕ್ಕು ಅನ್ನುವುದು ನಿಜವಾಗಿ ಆಹಾರದ ಹಕ್ಕಾಗಿದೆ.

ದೇಶದ ಆಹಾರ ಭದ್ರತೆ ಮತ್ತು ಜನರ ಆಹಾರ ಭದ್ರತೆ

ಇಂದು ನಮ್ಮ ದೇಶವನ್ನು 'ಸೂಪರ್ ಪವರ್' ಮಾಡುವ ಬಗ್ಗೆ ಉನ್ಮಾದದಿಂದ ಮಾತನಾಡಲಾಗುತ್ತಿದೆ. ಇದು ಒಂದು ಹಂತದವರೆಗೆ ಸರಿ. ಆದರೆ ದೇಶ ಸಮೃದ್ಧವಾಗಿ ಬಿಟ್ಟರೆ ಜನರ ಬದುಕು ಸಮೃದ್ಧವಾಗುತ್ತದೆ ಎಂದು ಹೇಳಲು ಬರುವುದಿಲ್ಲ, ಇವೆರಡರ ನಡುವೆ ಬದಲಾವಣೆಯು ತನ್ನಷ್ಟಕ್ಕೆ ತಾನು ಸಂಭವಿಸುವ ರೀತಿಯಲ್ಲಿಲ್ಲ, ಈ ಕಾರಣಕ್ಕೆ ಅಮರ್ತ್ಯ ಸೇನ್ ಮತ್ತೆ ಮತ್ತೆ ಒಂದು ಮಾತು ಹೇಳುತ್ತಿರುತ್ತಾರೆ: "ಅಭಿವೃದ್ಧಿ ಅನ್ನುವುದು ಜನರ ಬದುಕಿನ ಸಮೃದ್ಧತೆಗೆ ಸಂಬಂಧಿಸಿದ ಸಂಗತಿಯೇ ವಿನಾ ಆರ್ಥಿಕತೆಯ ಸಮೃದ್ಧತೆಗೆ ಸಂಬಂಧಿಸಿದ ಸಂಗತಿಯಲ್ಲ." ರಾಷ್ಟ್ರದ ಆಹಾರ ಭದ್ರತೆಯ ಜೊತೆಗೆ ಜನರ ಆಹಾರ ಭದ್ರತೆಯೂ ಮುಖ್ಯ. ಅದು ತನ್ನಷ್ಟಕ್ಕೆ ತಾನೇ ಸಂಭವಿಸುವ ಸಂಗತಿಯಲ್ಲ, ಅದಕ್ಕೆ ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಬೇಕಾಗುತ್ತದೆ. ಅಂತಹ ಒಂದು ಪ್ರಯತ್ನವನ್ನು ಅನ್ನಭಾಗ್ಯದಲ್ಲಿ ನಾವು ಕಾಣಬಹುದು. ಅದು ಸದ್ಯದ ತಲೆಮಾರಿನ ಮತ್ತು ಮುಂದಿನ ತಲೆಮಾರಿನ ಧಾರಣಾ ಸಾಮರ್ಥ್ಯವನ್ನು ನಿರ್ಧರಿಸುವ ಸಂಗತಿಯಾಗಿದೆ. ಅದ್ದರಿಂದ ಅದು ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿ.

2. ದುಡಿಯುವ ವರ್ಗ ಪಡೆಯುವ ಕೂಲಿ ಮತ್ತು ಸಲ್ಲಿಸುವ ಶ್ರಮ

ಅರ್ಥಶಾಸ್ತ್ರದ ನಿಯಮದ ಪ್ರಕಾರ ಕೂಲಿಕಾರರ ಕೂಲಿಯು ಅವರು ಉತ್ಪಾದನೆಗೆ ನೀಡುತ್ತಿರುವ ಕಾಣಿಕೆಯನ್ನು ಅವಲಂಬಿಸಿರುತ್ತದೆ. ಆದರೆ ನಮ್ಮಲ್ಲಿ ಸಾಮಾನ್ಯವಾಗಿ ದುಡಿಮೆಗಾರರು ಸಲ್ಲಿಸುವ ಪರಿಶ್ರಮ ಅಧಿಕವಾಗಿರುತ್ತದೆ. ಆದರೆ ಅವರು ಪಡೆಯುವ ಪ್ರತಿಫಲ-ಕೂಲಿ ಅದಕ್ಕಿಂತ ಸಾಪೇಕ್ಷವಾಗಿ ಕಡಿಮೆಯಿರುತ್ತದೆ. ಪರಿಶ್ರಮ ಮತ್ತು ಕೂಲಿಗಳ ನಡುವೆ ಅಂತರವಿದೆ. ಇದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ. ಆದ್ದರಿಂದ ಅನ್ನಭಾಗ್ಯ ಕಾರ್ಯಕ್ರಮವೇನಿದೆ ಅದನ್ನು ವಾಸ್ತವವಾಗಿ ಕೂಲಿ ಮತ್ತು ಶ್ರಮಗಳ ನಡುವಿನ ಅಂತರವನ್ನು-ಕೊರತೆಯನ್ನು ತುಂಬುವ ಕಾರ್ಯಕ್ರಮವನ್ನಾಗಿ ಪರಿಭಾವಿಸಿಕೊಳ್ಳಬಹುದು. ಆದ್ದರಿಂದ ಅನ್ನಭಾಗ್ಯವು ದತ್ತಿ-ದಾನದ ಕಾರ್ಯಕ್ರಮವಲ್ಲ, ಅದರ ಹಿಂದೆ ಆರ್ಥಿಕ ಸಿದ್ಧಾಂತವಿದೆ. ಬಡವರು ಪುಕ್ಕಟೆಯಾಗಿ ಅನ್ನಭಾಗ್ಯವನ್ನು ಪಡೆಯುತ್ತಿಲ್ಲ.

ಅನ್ನಭಾಗ್ಯವನ್ನು ಪಡೆಯುವ ಕುಟುಂಬಗಳು ಇಂದು ಅಕ್ಕಿಯ ಮೇಲೆ ವ್ಯಯಿಸಬೇಕಾದ ಮೊತ್ತವನ್ನು ಉಳಿಸಿ ಅದನ್ನು ಕುಟುಂಬದ ಇತರೆ ಅವಶ್ಯಕತೆಗಳ (ಮಕ್ಕಳ ಶಿಕ್ಷಣ, ವೈದ್ಯಕೀಯ ಸೇವೆ, ಪೌಷ್ಟಿಕ ಆಹಾರ ಮುಂತಾದವು) ಮೇಲೆ ವ್ಯಯಿಸುತ್ತವೆ. ಇದರಿಂದ ಅವರ ಜೀವನಮಟ್ಟವು ಉತ್ತಮವಾಗುತ್ತದೆ. ಈ ಕಾರಣದಿಂದ ಸಮಾಜದಲ್ಲಿ ಆರ್ಥಿಕ ಚಟುವಟಿಕೆಗಳು ವಿಸ್ತತಗೊಳ್ಳುತ್ತವೆ. ಅವರ ಕಾರ್ಯಕ್ಷಮತೆಯು ಉನ್ನತ ಮಟ್ಟಕ್ಕೇರುತ್ತದೆ. ಅನ್ನಭಾಗ್ಯ ಕಾರ್ಯಕ್ರಮವು ಆರ್ಥಿಕತೆಯಲ್ಲಿ ಸಮಗ್ರ ಬೇಡಿಕೆಯನ್ನು ಹೆಚ್ಚಿಸಬಲ್ಲದು. ಅನ್ನಭಾಗ್ಯ ಕಾರ್ಯಕ್ರಮವನ್ನು 'ಸ್ಮಾರ್ಟ್ ಎಕನಾಮಿಕ್ಸ್' ಎಂದು ಪರಿಗಣಿಸಬಹುದು. ಈ ಎಲ್ಲ ಸಂಕೀರ್ಣತೆಯ ಹಿನ್ನೆಲೆಯಲ್ಲಿ ಆಹಾರ ಭದ್ರತೆಯ ಕಾರ್ಯಕ್ರಮವನ್ನು ಪರಿಭಾವಿಸಿಕೊಳ್ಳುವ ಅಗತ್ಯವಿದೆ.

ದುಡಿಮೆಗಾರರು ಸೋಮಾರಿಗಳಾಗುತ್ತಾರೆ!

ಈ ಬಗೆಯ ನಿಲುವು ಅತ್ಯಂತ ಬೇಜವಾಬ್ದಾರಿ ಮತ್ತು ಆಧಾರರಹಿತ ನಿಲುವಾಗಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ದುಡಿಮೆಗಾರರು ಸೋಮಾರಿಗಳಾಗಿದ್ದರೆ ನಮ್ಮ ರಾಜ್ಯದಲ್ಲಿ ವಾರ್ಷಿಕ 240 ಲಕ್ಷ ಟನ್ ಆಹಾರವನ್ನು ಯಾರು ಉತ್ಪಾದನೆ ಮಾಡಿದ್ದು? ನಮ್ಮ ಹೊಲ-ಗದ್ದೆಗಳಲ್ಲಿ ದುಡಿಯುವವರಾರು? ನಮ್ಮ ನಮ್ಮ ಮನೆಗಳಿಗೆ ಇಂದು ಇಂಟರ್‌ನೆಟ್ ಸೌಲಭ್ಯ ದೊರೆಯುತ್ತಿದ್ದರೆ ಅದಕ್ಕೆ ಸಂಬಂಧಿಸಿದ ಆಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಹಾಕಿದವರಾರು? ವಿದ್ಯುತ್ ಕಂಬಗಳನ್ನು ನೆಟ್ಟವವರಾರು? ನಮ್ಮ ಮನೆಗಳನ್ನು ಕಟ್ಟಿದವರಾರು? ನಮ್ಮ ರಸ್ತೆಗಳನ್ನು, ಅಣೆಕಟ್ಟೆಗಳನ್ನು, ಸೇತುವೆಗಳನ್ನು ನಿರ್ಮಿಸಿದವರಾರು? ನಮ್ಮ ನಗರಗಳನ್ನು ಇಂದು ಸ್ವಚ್ಛವಾಗಿಡುವವರು ಯಾರು? ನಮ್ಮ ರಾಜ್ಯದಲ್ಲಿ ಸುಮಾರು 72 ಲಕ್ಷ ಭೂರಹಿತ ದಿನಗೂಲಿ ದುಡಿಮೆಗಾರರಿದ್ದಾರೆ (ಜನಗಣತಿ, 2011). ಇವರೆಲ್ಲರೂ ಆಹಾರ ಅಭದ್ರತೆಯನ್ನು ಎದುರಿಸುತ್ತಿದ್ದಾರೆ. ಅನ್ನಭಾಗ್ಯವು ಇವರಿಗೆ ನಿಜವಾಗಲೂ ಉಪಯುಕ್ತವಾದ ಸಂಗತಿಯಾಗಿದೆ. ಭೂಮಾಲೀಕರು ಸಾಮಾನ್ಯವಾಗಿ ಇಂದು 'ಕೂಲಿಕಾರರೇ ದೊರೆಯುತ್ತಿಲ್ಲ' ಎಂದು ಹಲುಬುತ್ತಿರುತ್ತಾರೆ. ಯಾಕೆ ಹೀಗಾಗಿದೆ? ಇದು ಸೋಮಾರಿತನದ ಸೂಚನೆಯೇ? ಜನರು ಯಾಕೆ ಕೂಲಿಗೆ ದೊರೆಯುತ್ತಿಲ್ಲ?

ಕೂಲಿಕಾರರ ಬದುಕು ಉತ್ತಮವಾಗುವುದು ಬೇಡವೇ?

ಕೂಲಿಕಾರರ ಬದುಕು ಕೂಲಿಕಾರ ಸ್ಥಿತಿಯಿಂದ ಮೇಲ್ಮಟ್ಟಕ್ಕೆ ಚಲಿಸಲೇಬಾರದು ಎಂಬುದು ನಮ್ಮ ನಿಲುವೆ? ಅವರು ಶಾಶ್ವತವಾಗಿ ಕೂಲಿಕಾರರಾಗಿರಬೇಕೆ? ಹಾಗಾದರೆ ಅಭಿವೃದ್ಧಿ ಎಂದರೇನು? ಜೋಸೆಫ್ ಸ್ಟಿಗ್‌ಲಿಟ್ಜ್ ಪ್ರಕಾರ 'ಅಭಿವೃದ್ಧಿ ಅನ್ನುವುದು ಸಾಮಾಜಿಕ ಪರಿವರ್ತನೆಗೆ, ಬಡವರ ಬದುಕಿನ ಸಮೃದ್ಧತೆಗೆ ಮತ್ತು ಪ್ರತಿಯೊಬ್ಬ ವ್ಯಕ್ತಿ ಆರೋಗ್ಯ ಸೇವೆ ಮತ್ತು ಶಿಕ್ಷಣಗಳನ್ನು ಪಡೆದುಕೊಳ್ಳುವುದಕ್ಕೆ ಸಶಕ್ತನಾಗುವುದಕ್ಕೆ ಸಂಬಂಧಿಸಿದೆ.'

3.ಅನ್ನಭಾಗ್ಯ ಮತ್ತು ಲಿಂಗ ಸಮಾನತೆ

ಮಹಿಳೆಯರಿಗೆ ಅನ್ನಭಾಗ್ಯವು ಒಂದು ವರವಾಗಿ ಪರಿಣಮಿಸಿದೆ. ನಮ್ಮ ಸಮಾಜದ ಸಂದರ್ಭದಲ್ಲಿ ಅತ್ಯಂತ ಅಧಿಕ ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಅನ್ನಭಾಗ್ಯವು ನಮ್ಮಲ್ಲಿ ಜನರು ಎದುರಿಸುತ್ತಿರುವ hidden hunger ಸಮಸ್ಯೆಯನ್ನು ಪರಿಹರಿಸುವ

▶▶| 14

ಆಹಾರ ಭದ್ರತೆ: ಜನರನ್ನು ಒಳಗೊಳ್ಳುವ ಯೋಜನೆ

13 ⏮

ಕಾರ್ಯಕ್ರಮವಾಗಿದೆ. ಬಡವರಿಗೆ ಸಂಬಂಧಿಸಿದಂತೆ ಅನ್ನಭಾಗ್ಯವು ವರಮಾನವನ್ನು ಉಳಿಸುವ ಕ್ರಮವೆಂದು ಭಾವಿಸಬಹುದು. ಅಪೌಷ್ಟಿಕತೆಯನ್ನು 'ರಾಷ್ಟ್ರೀಯ ಅವಮಾನ' ಎಂದು ಕರೆಯಲಾಗಿದೆ. ಇದು ಮಹಿಳೆಯರು ಮತ್ತು ಮಕ್ಕಳ ದೃಷ್ಟಿಯಿಂದ ಮುಖ್ಯವಾದ ಸಮಸ್ಯೆಯಾಗಿದೆ. ಅನ್ನಭಾಗ್ಯವು ಅವರ ಸಮಸ್ಯೆಯನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸಬಲ್ಲುದಾಗಿದೆ. ನಮ್ಮ ಸಮಾಜದಲ್ಲಿ ಲಿಂಗ ಅನುಪಾತ ಮಹಿಳೆಯರಿಗೆ ವಿರುದ್ಧವಾಗಿದೆ. ಅದಕ್ಕೆ ಹೆಣ್ಣು ಭ್ರೂಣ ಹತ್ಯೆಯು ಒಂದು ಕಾರಣವಾಗಿರಬಹುದು. ಲಿಂಗ ಅನುಪಾತ ಕಡಿಮೆಯಿರಲು ಮಹಿಳೆಯರಲ್ಲಿ ಮತ್ತು ಬಾಲಕಿಯರಲ್ಲಿ ಇರುವ ಅಪೌಷ್ಟಿಕತೆ, ಅನಿಮೀಯಾ, ಸಾಂಕ್ರಾಮಿಕ ರೋಗಗಳು ಕಾರಣವಾಗಿರಬಹುದು. ಅನ್ನಭಾಗ್ಯವು ಅಪೌಷ್ಟಿಕತೆಯ ಸಮಸ್ಯೆಯನ್ನು ನಿವಾರಿಸುವ ದಿಶೆಯಲ್ಲಿ ಒಂದು ಸರಿಯಾದ ಕ್ರಮವಾಗಿದೆ. ಸಮಾನತೆಗೆ ಬಹು ಮುಖಗಳಿವೆ. ಅದರಲ್ಲಿ ಮುಖ್ಯವಾದುದು ಲಿಂಗ ಸಮಾನತೆ. ಅನ್ನಭಾಗ್ಯವು ಮಹಿಳೆಯರ ಸಶಕ್ತೀಕರಣಕ್ಕೆ ಕಾಣಿಕೆ ಸಲ್ಲಿಸುವ ಸಾಧ್ಯತೆಯಿದೆ. ನಮ್ಮ ರಾಜ್ಯದಲ್ಲಿನ ಒಟ್ಟು ಭೂರಹಿತ ಕೃಷಿ ದಿನಗೂಲಿ ದುಡಿಮೆಗಾರರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣ ಪುರುಷ ದುಡಿಮೆಗಾರರ ಪ್ರಮಾಣಕ್ಕಿಂತ ಅಧಿಕವಾಗಿದೆ. ಆಹಾರ ಭದ್ರತೆಯು ಮಹಿಳೆಯರಿಗೆ ಅತ್ಯಂತ ಅಗತ್ಯವಾದ ಸಂಗತಿಯಾಗಿದೆ. ತೀವ್ರ ಬಡತನದಲ್ಲಿರುವ ಕುಟುಂಬಗಳಲ್ಲಿ ಅದರ ನಿರ್ವಹಣೆಯ ಜವಾಬುದಾರಿಯು ಹೆಚ್ಚು ಮಹಿಳೆಯರ ಮೇಲಿರುತ್ತದೆ. ಇದನ್ನು 'ಫೆಮಿನೈಸೇಶನ್ ಆಫ್ ಪಾವರ್ಟಿ' ಎಂದು ಕರೆಯಲಾಗಿದೆ. ಈ ಕಾರಣದಿಂದ ಆಹಾರ ಭದ್ರತೆಯು ಮಹಿಳೆಯರ ದೃಷ್ಟಿಯಿಂದ ಮುಖ್ಯವಾದುದಾಗಿದೆ.

ವಿಶ್ವಸಂಸ್ಥೆಯು 2014ರ 'ಅಂತಾರಾಷ್ಟ್ರೀಯ ಮಹಿಳಾ ದಿನ'ದ ಸಂದರ್ಭದಲ್ಲಿ ನೀಡಿದ ಘೋಷಣೆ ಹೀಗಿದೆ: 'ಮಹಿಳೆಯರ ಸಮಾನತೆಯು ಎಲ್ಲರ ಪ್ರಗತಿಯ ಸೂಚಿ'. ಲಿಂಗ ಸಮಾನತೆ ಅನ್ನುವುದು ಕೇವಲ ಮಹಿಳೆಯರಿಗೆ ಮಾತ್ರ ಸಂಬಂಧಿಸಿದ ಸಂಗತಿಯಲ್ಲ. ಲಿಂಗ ಸಮಾನತೆಯನ್ನು, ಆ ಮೂಲಕ ಎಲ್ಲರ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವ ದಿಶೆಯಲ್ಲಿ ಆಹಾರ ಭದ್ರತೆ ಕಾರ್ಯಕ್ರಮ ಒಂದು ನಿರ್ಣಾಯಕ ಹೆಜ್ಜೆಯಾಗಿದೆ. ಯುಎನ್‌ಡಿಪಿಯು 1995ರಲ್ಲಿ ಎಚ್ಚರಿಸಿದಂತೆ ಅಭಿವೃದ್ಧಿಯನ್ನು ಮಹಿಳೀಕರಿಸದಿದ್ದರೆ ಅದಕ್ಕೆ ಅಪಾಯ ತಪ್ಪಿದ್ದಲ್ಲ. ಆಹಾರ ಭದ್ರತೆ ಕಾರ್ಯಕ್ರಮವು ಒಂದು ರೀತಿಯಲ್ಲಿ ಅಭಿವೃದ್ಧಿಯನ್ನು ಮಹಿಳೀಕರಿಸುವ ದಿಶೆಯಲ್ಲಿನ ಒಂದು ಕ್ರಮವಾಗಿದೆ.

4. ಆಹಾರ ಸಬ್ಸಿಡಿ, ಪವರ್ ಸಬ್ಸಿಡಿ ಮತ್ತು ತೆರಿಗೆಗಳಲ್ಲಿ ಸಬ್ಸಿಡಿ

ಆಹಾರಕ್ಕೆ ಸಬ್ಸಿಡಿ ಇದೆ. ವಿದ್ಯುಚ್ಛಕ್ತಿಗೆ ಸಬ್ಸಿಡಿ ಇದೆ. ಉದ್ದಿಮೆಗಳಿಗೆ ಸಬ್ಸಿಡಿಯಿದೆ. ರಫ್ತು ವ್ಯಾಪಾರಕ್ಕೆ ಸಬ್ಸಿಡಿಯಿದೆ. ಅದೇ ರೀತಿಯಲ್ಲಿ ತೆರಿಗೆಗಳಿಗೂ ಸಬ್ಸಿಡಿ ಇದೆ. ಉದ್ದಿಮೆಗಳು ತಾವು ಎಷ್ಟು ತೆರಿಗೆ ಕಟ್ಟಬೇಕೋ ಅಷ್ಟನ್ನು ಕಟ್ಟುವುದಿಲ್ಲ, ಸಂಭಾವ್ಯ ತೆರಿಗೆ ಮೊತ್ತಕ್ಕೂ ಮತ್ತು ವಾಸ್ತವವಾಗಿ ಸಂಗ್ರಹವಾಗುವ ತೆರಿಗೆ ಮೊತ್ತಕ್ಕೂ ನಡುವೆ ಅಂತರವಿದೆ. ಆರ್ಥಿಕತೆಯಲ್ಲಿ ವರಮಾನ ಏರಿಕೆಯಾದಂತೆ ತೆರಿಗೆ ಸಾಮರ್ಥ್ಯವು ಏರಿಕೆಯಾಗುತ್ತದೆ. ಆದರೆ ವರಮಾನದಲ್ಲಿ ಏರಿಕೆಯು ಯಾವ ಗತಿಯಲ್ಲಿ ನಡೆಯುತ್ತದೆಯೋ ಅದೇ ಗತಿಯಲ್ಲಿ ತೆರಿಗೆ ಸಂಗ್ರಹದ ಏರಿಕೆಯಾಗುವುದಿಲ್ಲ, ಅಲ್ಲಿ ಅನೇಕ ಬಗೆಯ ರಿಯಾಯಿತಿ, ವಿನಾಯಿತಿಗಳಿರುತ್ತವೆ. ಇದನ್ನು ತಾಂತ್ರಿಕವಾಗಿ 'ಬಿಟ್ಟುಕೊಟ್ಟ ತೆರಿಗೆ ಮೊತ್ತ ಎಂದು ಕರೆಯಲಾಗುತ್ತದೆ (ಟ್ಯಾಕ್ಸ್ ರೆವಿನ್ಯೂ ಫೋರ್‌ಗಾನ್). ಇದನ್ನು ತೆರಿಗೆ ವೆಚ್ಚ ಎಂದೂ ಕರೆಯಲಾಗುತ್ತದೆ. ಸರ್ಕಾರದ ಬಜೆಟ್ಟಿನ ಸಾರ್ವಜನಿಕ ವೆಚ್ಚ ಖಾತೆಯಲ್ಲಿ ಇದನ್ನು ತೋರಿಸಬೇಕು ಎಂದು ಹೇಳಲಾಗುತ್ತಿದೆ. ಕೇಂದ್ರ ಸರ್ಕಾರವು 2011-2012ನೆಯ ಸಾಲಿನಲ್ಲಿ ಹೀಗೆ ಬಿಟ್ಟುಕೊಟ್ಟ ತೆರಿಗೆ ಮೊತ್ತ ರೂ. 5.33 ಲಕ್ಷ ಕೋಟಿ. ಮರು ವರ್ಷ 2012-13ರಲ್ಲಿ ಬಿಟ್ಟುಕೊಟ್ಟ ತೆರಿಗೆ ಮೊತ್ತ ರೂ. 5.73 ಲಕ್ಷ ಕೋಟಿ. ಇದನ್ನು ಉದ್ದಿಮೆಗಳಿಗೆ ಉತ್ತೇಜನದ ಭಾಗವಾಗಿ ನೀಡಲಾಗುತ್ತದೆ. ಇದನ್ನು ನಾವು ಅಪ್ರತ್ಯಕ್ಷ ಅಥವಾ ಮುಚ್ಚಿಟ್ಟ ಸಬ್ಸಿಡಿ ಎಂದು ಕರೆಯಬಹುದು. ಇದರಲ್ಲಿ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ತೆರಿಗೆಗಳು ಸೇರುತ್ತವೆ. ಕೇಂದ್ರ ಸರ್ಕಾರದ 2014-15ನೆಯ ಸಾಲಿನ ಒಟ್ಟು ವೆಚ್ಚ ರೂ. 17.63 ಲಕ್ಷ ಕೋಟಿ. ಆಹಾರ ಸಬ್ಸಿಡಿ ಮೊತ್ತ ರೂ. 1.15 ಲಕ್ಷ ಕೋಟಿ. ಅಂದರೆ ಕೇಂದ್ರದ ಒಟ್ಟು ಬಜೆಟ್ ವೆಚ್ಚದಲ್ಲಿ ಆಹಾರ ಸಬ್ಸಿಡಿಯ ಪಾಲು ಕೇವಲ ಶೇ. 6.52. ಅದೇ ರೀತಿಯಲ್ಲಿ ಅದು ಪೆಟ್ರೋಲಿಯಮ್ ಮೇಲೆ ನೀಡುತ್ತಿರುವ ಸಬ್ಸಿಡಿಯು (ರೂ. 63427 ಕೋಟಿ) ಒಟ್ಟು ವೆಚ್ಚದ ಶೇ. 3.6ರಷ್ಟಾಗುತ್ತದೆ. ಫರ್ಟಿಲೈಸರ್ ಮೇಲೆ ನೀಡುತ್ತಿರುವ ಸಬ್ಸಿಡಿ (ರೂ. 67,971 ಕೋಟಿ) ಕೇಂದ್ರ ಸರ್ಕಾರದ ಒಟ್ಟು ವೆಚ್ಚದ ಶೇ. 3.85ರಷ್ಟಾಗುತ್ತದೆ. ಫರ್ಟಿಲೈಸರ್ ಮತ್ತು ಪೆಟ್ರೋಲಿಯಮ್-ಎರಡನ್ನು ಸೇರಿಸಿದರೆ ಅವುಗಳಿಗೆ ನೀಡುತ್ತಿರುವ ಸಬ್ಸಿಡಿಯು ರೂ. 1.31 ಲಕ್ಷ ಕೋಟಿಯಾಗುತ್ತದೆ. ಇದು ಕೇಂದ್ರ ಸರ್ಕಾರದ ಒಟ್ಟು ವೆಚ್ಚದ ಶೇ. 7.45ರಷ್ಟಾಗುತ್ತದೆ. ಆಹಾರ ಸಬ್ಸಿಡಿಗಿಂತ ಇದು ಅಧಿಕ. ಫರ್ಟಿಲೈಸರ್ ಸಬ್ಸಿಡಿಯ ಬಗ್ಗೆಯಾಗಲಿ ಅಥವಾ ಪೆಟ್ರೋಲಿಯಮ್‌ನ ಸಬ್ಸಿಡಿಯ ಬಗ್ಗೆಯಾಗಲಿ ನಾವು ಮಾತನಾಡುವುದಿಲ್ಲ, ಇದಾವುದರ ಬಗ್ಗೆಯೂ ನಾವು ಟೀಕೆ ಮಾಡುತ್ತಿಲ್ಲ, ಏಕೆಂದರೆ ಅವೆರಡು ಉಳ್ಳವರಿಗೆ ಸಂಬಂಧಿಸಿದ ಸಂಗತಿಗಳು. ಆಹಾರಕ್ಕೆ ಸಬ್ಸಿಡಿಯನ್ನು ನೀಡಿದರೆ ಅದು ದುಂದುವೆಚ್ಚವಾಗಿ ಬಿಡುತ್ತದೆ. ಏಕೆಂದರೆ ಅದು ಉಳಿದವರಿಗೆ ಸಂಬಂಧಿಸಿದ ಸಂಗತಿ! ಅದನ್ನು ಪಡೆಯುವ ದುಡಿಮೆಗಾರರು ದುಡಿಯದೆ ಉಣ್ಣುವವರಾಗಿ ಬಿಡುತ್ತಾರೆ. ಕೇಂದ್ರ ಸರ್ಕಾರದ ಆಹಾರ ಸಬ್ಸಿಡಿಯು ಬಿಟ್ಟುಕೊಟ್ಟ ತೆರಿಗೆ ಮೊತ್ತದ ಶೇ. 21.05ರಷ್ಟಾಗುತ್ತದೆ. ಬಡವರಿಗೆ ಕೊಡುವ ಸಬ್ಸಿಡಿಯು ದುಂದುವೆಚ್ಚ ಉದ್ದಿಮೆಗಳಿಗೆ ನೀಡುವ ಅಪ್ರತ್ಯಕ್ಷ-ಮುಚ್ಚಿಟ್ಟ ಸಬ್ಸಿಡಿಯು ಉತ್ಪನ್ನಕಾರಕ! ಇದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗಬಾರದು. ಇದು ಮೂಲಭೂತವಾಗಿ ರಾಜಕೀಯಾರ್ಥಿಕ ಪ್ರಶ್ನೆಯಾಗಿದೆ.

ನಮ್ಮ ಪ್ರಕಾರ 'ದಿನಗೂಲಿಗೆ ದುಡಿಯುವವರು ಸದಾ ದಿನಗೂಲಿ ದುಡಿಮೆಗಾರರಾಗಿ ಇರ'ಬೇಕೇನು'. ಅವರು ವರಮಾನ ಶ್ರೇಣಿಯಲ್ಲಿ ಮೇಲೆ ಬರಬಾರದೇನು? ಅವರ ಬದುಕು ಉತ್ತಮವಾಗಬಾರದೇನು? ಕೂಲಿಗೆ ದುಡಿಯುವವರು ಒಂದು ದಿನ ಕೂಲಿ ಮಾಡುವ ಸ್ಥಿತಿಯಿಂದ ಮೇಲೇರಬಹುದು. ಅದನ್ನು ಅಭಿವೃದ್ಧಿ ಎಂದು ಕರೆಯಬಹುದು. ಅಂತಹ ಸಾಮಾಜಿಕ ಸ್ಥಿತಿಯನ್ನು ಊಹಿಸಿಕೊಂಡು ನೋಡಿ! ಕೃಷಿಯಲ್ಲಿ ಕೂಲಿಯವರು ದೊರೆಯುವುದಿಲ್ಲ ಎಂಬುದು ರಾಜ್ಯಾದ್ಯಂತ ಕೇಳಿಬರುತ್ತಿರುವ ಒಂದು ಕೂಗು. ಅದು ಯಾರಿಗೆ ಸಮಸ್ಯೆ? ಅದು ಸಮಸ್ಯೆಯಲ್ಲ, ಅದು ಅಭಿವೃದ್ಧಿಯ ಸೂಚಿ.

5. ಸಾಮಾಜಿಕ ನ್ಯಾಯ ಮತ್ತು ಆಹಾರ ಸಬ್ಸಿಡಿ

ಈಗಾಗಲೆ ಹೇಳಿರುವಂತೆ ಆಹಾರ ಭದ್ರತೆಯ ಕಾರ್ಯಕ್ರಮವು ಸಾಮಾಜಿಕ ನ್ಯಾಯದ ಸಂಗತಿಯಾಗಿದೆ. ನಮ್ಮ ಸಮಾಜದಲ್ಲಿ ಯಾರೊಬ್ಬರೂ ಹಸಿವಿನಿಂದ ಇರಬಾರದು. **Not to be poor is a Human Right. Not to be hungry is a Human Right.** ಇವೆಲ್ಲ ಕೇವಲ ವೈಯಕ್ತಿಕ ಸಂಗತಿಗಳಲ್ಲ, ಬಡತನಕ್ಕೆ, ಹಸಿವಿಗೆ ಜನರು ಒಳಗಾಗದಂತೆ ಮಾಡುವುದು ಸಾಮಾಜಿಕ ಸಂಗತಿ. ಇದಕ್ಕೆ ಅಭಿವೃದ್ಧಿಯ ಫಲ ಎಲ್ಲರಿಗೂ ದೊರೆಯುವಂತೆ ಮಾಡಬೇಕು. ಬಡವರಿಗೂ ಮತ್ತು ಬಡವರಲ್ಲದವರಿಗೂ ಸಂಬಂಧವಿಲ್ಲವೆಂದು ಅನೇಕರು ಭಾವಿಸಿದ್ದಾರೆ. ಹತ್ತಾರು ಜನಕ್ಕೆ ಸಾಕಾಗುವಷ್ಟು ವರಮಾನ, ಆಹಾರ, ಸರಕು ಮುಂತಾದವುಗಳನ್ನು ಒಬ್ಬರೇ ಕೂಡಿಟ್ಟುಕೊಳ್ಳುವುದು ಸಮಾಜದಲ್ಲಿ ಬಡತನಕ್ಕೆ, ಹಸಿವಿಗೆ ಕಾರಣವಾಗಬಹುದು. ವರಮಾನದ ಕೇಂದ್ರೀಕರಣವು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ಸಂಗತಿಯಾಗಿದೆ.

ಆಹಾರ ಅಭದ್ರತೆಯು ಮಾನವ ಹಕ್ಕಿನ ಉಲ್ಲಂಘನೆಯಾಗಿದೆ.

ಆಹಾರ ಭದ್ರತೆ ಕಾರ್ಯಕ್ರಮದ ಮೂಲದಲ್ಲಿ ಆರ್ಥಿಕ ಸಿದ್ಧಾಂತವಿದೆ. ಅದು ಕೇವಲ ಭಾವನಾತ್ಮಕವಾದ ಕಾರ್ಯಕ್ರಮವಲ್ಲ, ಅಲ್ಲಿ ಒಂದು ತಾತ್ವಿಕ ತರ್ಕ ಇದೆ. ಈ ಪ್ರಬಂಧವನ್ನು ಬಸವಣ್ಣನ ಒಂದು ವಚನದ ಮೂಲಕ ಮುಗಿಸಬಹುದು.

ಕಾಲ ನೇಮ, ಕಾಲ ಕೆನೆಯ ನೇಮ
ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ
ಬೆಲ್ಲದ ನೇಮ, ಬೆಣ್ಣೆಯ ನೇಮ
ಅಂಬಲಿ ನೇಮದವರಾರನೂ ಕಾಣೆ,
ಕೂಡಲಸಂಗನ ಶರಣರಲ್ಲಿ ಅಂಬಲಿ ನೇಮದಾತ
ನಮ್ಮ ಮಾದಾರ ಚೆನ್ನಯ್ಯ,

● ಟಿ.ಆರ್. ಚಂದ್ರಶೇಖರ



ರಾಜಕೀಯ ಪಕ್ಷಗಳೊ?...

12 ⏮

ಪಕ್ಷಗಳಿಗೆ ದೇಣಿಗೆ ಕೊಡಲಿಕ್ಕೆಂದೇ ಕೆಲವು ಟ್ರಸ್ಟ್‌ಗಳನ್ನು ಹುಟ್ಟು ಹಾಕಿಕೊಂಡಿವೆ. ಪ್ರಜಾತಂತ್ರ ಮತ್ತು ಚುನಾವಣೆಗಳ ಬಗ್ಗೆ ಸಮಾಜದಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಈ ದೇಣಿಗೆಗಳನ್ನು ಕೊಡುತ್ತಿರುವುದಾಗಿ ಘೋಷಿಸಿಕೊಳ್ಳುತ್ತವೆ. ಈ ಪಕ್ಷಗಳ ಮೂಲಕ ಯಾವ ರೀತಿಯ ಪ್ರಜಾತಂತ್ರ ಉದ್ಧಾರವಾಗುತ್ತಿದೆ ಎಂಬುದನ್ನು ನಾವು ಕಳೆದ ಆರು ದಶಕಗಳಿಂದಲೂ ಕಣ್ಣಾರೆ ಕಂಡಿದ್ದೇವೆ.

ಕಾರ್ಪೊರೇಟ್ ಕಂಪನಿಗಳ ದೇಣಿಗೆಯ ಕೆಲವು ಸ್ಯಾಂಪಲ್ ನೋಡೋಣ. (ಇದು ಅಧಿಕೃತವಾಗಿ ಕೊಟ್ಟಿರುವ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಕೃಷ್ಣ ಪರಮಾತ್ಮನಿಗೇ ಗೊತ್ತು!)

ಕಾಂಗ್ರೆಸ್ ಪಕ್ಷದ ಪ್ರಮುಖ ಹತ್ತು ದೇಣಿಗೆದಾರರ ಪಟ್ಟಿ

ದೇಣಿಗೆಯ ಮೂಲ	ಮೊತ್ತ
ಜನರಲ್ ಎಲೆಕ್ಟೋರಲ್ ಟ್ರಸ್ಟ್ (ಬಿರ್ಲಾ ಗ್ರೂಪ್)	36.41 ಕೋಟಿ
ಟಾರೆಂಟ್ ಪವರ್ ಲಿಮಿಟೆಡ್	11.85 ಕೋಟಿ
ಭಾರ್ತಿ ಎಲೆಕ್ಟೊರಲ್ ಟ್ರಸ್ಟ್	11 ಕೋಟಿ
ಎಲೆಕ್ಟೊರಲ್ ಟ್ರಸ್ಟ್ (ಟಾಟಾ ಸಮೂಹ)	9.96 ಕೋಟಿ
ಸ್ಟೆರ್‌ಲೈಟ್ ಇಂಡಸ್ಟ್ರೀಸ್	6 ಕೋಟಿ
ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕನ್ಸಲ್ಟೆಂಟ್	5.5 ಕೋಟಿ
ಐಟಿಸಿ ಲಿಮಿಟೆಡ್	4.95 ಕೋಟಿ
ವಿಡಿಯೋಕಾನ್, ಇಂಡಸ್ಟ್ರೀಸ್	4.25 ಕೋಟಿ
ಲಾರ್ಸನ್ ? ಟೂಬ್ರೋ	3.25 ಕೋಟಿ
ರೋಹನ್ ಪ್ರೊಮೋಟರ್ಸ್	3 ಕೋಟಿ

ಬಿಜೆಪಿ ಪಕ್ಷದ ಹತ್ತು ಪ್ರಮುಖ ದೇಣಿಗೆದಾರರ ಪಟ್ಟಿ

ದೇಣಿಗೆದಾರರು	ಮೊತ್ತ
ಜನರಲ್ ಎಲೆಕ್ಟೊರಲ್ ಟ್ರಸ್ಟ್ (ಬಿರ್ಲಾ ಸಮೂಹ)	26.57 ಕೋಟಿ
ಟಾರೆಂಟ್ ಪವರ್ ಲಿಮಿಟೆಡ್	13 ಕೋಟಿ
ಏಷಿಯಾನೆಟ್ ವಿ ಹೋಲ್ಡಿಂಗ್ ಲಿ.	10 ಕೋಟಿ
ಪಬ್ಲಿಕ್ ಅಂಡ್ ಪೊಲಿಟಿಕಲ್ ಅವೇರ್‌ನೆಸ್ ಟ್ರಸ್ಟ್ (ವೇದಾಂತ)	9 ಕೋಟಿ
ಎಲೆಕ್ಟೊರಲ್ ಟ್ರಸ್ಟ್ (ಟಾಟಾ ಸಮೂಹ)	6.82 ಕೋಟಿ
ವಿಡಿಯೋಕಾನ್ ಇಂಡಸ್ಟ್ರೀಸ್	6.25 ಕೋಟಿ
ಭಾರ್ತಿ ಎಲೆಕ್ಟೊರಲ್ ಟ್ರಸ್ಟ್ (ಏರ್‌ಟೆಲ್ ಸಮೂಹ)	6.10 ಕೋಟಿ
ಪಿ.ಯು.ವೆಕಾರಿಯ (ರಿಯಲ್ ಎಸ್ಟೇಟ್)	5 ಕೋಟಿ
ಸಾಯಿನಾಥ್ ಎಂಟರ್‌ಪ್ರೈಸಸ್	4.96 ಕೋಟಿ
ಪಂಜ್ ಲಾಯ್ಡ್ ಲಿ.	4.60 ಕೋಟಿ

ಈ ಎರಡೂ ಪಟ್ಟಿಯಲ್ಲಿ ಅಂಬಾನಿ, ಅದಾನಿ, ಎಸ್ಸಾರ್ ಮುಂತಾದ ಪ್ರಮುಖ ಕುಳಗಳ ಸುಳಿವೇ ಇಲ್ಲ ಎಂದು ಯೋಚಿಸಬೇಡಿ. ಈ ಕಂಪನಿಗಳು ಕೃಷ್ಣನ ಲೆಕ್ಕದಲ್ಲಿ ಎತ್ತಿದ ಕೈ. ವಾಸ್ತವದಲ್ಲಿ ಈ ಚುನಾವಣೆಯಲ್ಲಿ ಕೃಷ್ಣನ ಲೆಕ್ಕದ ಕಂಪನಿಗಳ ಹಣ ಯಥೇಚ್ಛವಾಗಿ ಹರಿಯುತ್ತಿದೆ ಎಂದು ಕೆಲವು ವರದಿಗಳು ಬಂದಿವೆ.


ಪರಿಸ್ಥಿತಿ ಹೀಗಿರುವಾಗ "ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ" ಪ್ರಜಾತಂತ್ರ ಎಷ್ಟರಮಟ್ಟಿಗೆ ನಡೆಯಬಹುದು?

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಯಾರು ಕಳ್ಳರು? ಪಕ್ಷವೋ? ಅಭ್ಯರ್ಥಿಗಳೋ?

ಲೋಕಸಭಾ ಚುನಾವಣಾ ಪ್ರಕ್ರಿಯೆ ಮುಕ್ತಾಯಗೊಂಡ 90 ದಿನಗಳ ಒಳಗಾಗಿ ಅಂಗೀಕೃತಗೊಂಡ ಎಲ್ಲ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ಖರ್ಚುವೆಚ್ಚದ ಲೆಕ್ಕಪತ್ರವನ್ನು ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕೆಂಬ ನಿಯಮಾವಳಿ ಇದೆ. ಹಾಗೆಯೆ: ಚುನಾವಣೆಗೆ ಸ್ಪರ್ಧಿಸಿದ ಎಲ್ಲ ಅಭ್ಯರ್ಥಿಗಳು 30 ದಿನಗಳ ಒಳಗೆ ಈ ಲೆಕ್ಕಪತ್ರ ಸಲ್ಲಿಸಬೇಕು.

2009ರ ಲೋಕಸಭಾ ಚುನಾವಣೆಗೆ ಸಂಬಂಧಿಸಿದ ಈ ಲೆಕ್ಕಪತ್ರಗಳನ್ನು ಪರಿಶೀಲಿಸಿದರೆ ಈ ರಾಜಕೀಯ ಪಕ್ಷಗಳಿಗೆ ಹಾಗೂ ಸಂಸದರಿಗೆ ಪ್ರಾಮಾಣಿಕತೆಯಾಗಲಿ, ಈ ನೆಲದ ಕಾನೂನಿನ ಬಗ್ಗೆ ಕನಿಷ್ಠ ಗೌರವವಾಗಲಿ ಇಲ್ಲವೆನ್ನುವುದು ಢಾಳಾಗಿ ಎದ್ದು ಕಾಣುತ್ತದೆ.



ಎಡಿಆರ್ ಸಂಸ್ಥೆ ಚುನಾವಣಾ ಆಯೋಗದಿಂದ ಪಡೆದುಕೊಂಡ ದಾಖಲೆಗಳ ಪ್ರಕಾರ 543 ಎಂಪಿಗಳ ಪೈಕಿ 96 ಎಂಪಿಗಳ ಲೆಕ್ಕಪತ್ರ ಲಭ್ಯವಾಗಿಲ್ಲ. 59 ಎಂಪಿಗಳು ಸಲ್ಲಿಸಿದ ದಾಖಲೆಗಳು ಅಸಂಪೂರ್ಣವಾಗಿದ್ದು, ಸರಿಯಾದ ಮಾಹಿತಿ ಲಭ್ಯವಿಲ್ಲ. ಇನ್ನುಳಿದಂತೆ ವಿವಿಧ ರಾಜಕೀಯ ಪಕ್ಷಗಳ ಒಟ್ಟು 388 ಎಂ.ಪಿ.ಗಳ ದಾಖಲೆಗಳು ಲಭ್ಯವಾಗಿದ್ದು ಎಡಿಆರ್ ಈ ಮಾಹಿತಿಯನ್ನು ವಿಶ್ಲೇಷಣೆಗೆ ಒಳಪಡಿಸಿದೆ.

ರಾಷ್ಟ್ರೀಯ ಪಕ್ಷಗಳಿಗೆ ಸೇರಿದ 277 ಎಂ.ಪಿ.ಗಳು ಘೋಷಿಸಿಕೊಂಡಿರುವ ಪ್ರಕಾರ ಅವರು ತಮ್ಮ ಪಕ್ಷಗಳಿಂದ ಪಡೆದುಕೊಂಡ ಒಟ್ಟು ಮೊತ್ತ 7,46,58,901 ರೂಪಾಯಿಗಳು (7.46 ಕೋಟಿ). ಆದರೆ ರಾಷ್ಟ್ರೀಯ ಪಕ್ಷಗಳು ಕೇವಲ 138 ಎಂ.ಪಿ.ಗಳಿಗೆ 14,19,12,228 ರೂಪಾಯಿಗಳನ್ನು (14.19 ಕೋಟಿ) ಕೊಟ್ಟಿರುವುದಾಗಿ ಘೋಷಿಸಿಕೊಂಡಿವೆ.

ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಗಳಲ್ಲೇ ಈ ಗೋಲ್‌ಮಾಲ್ ಹೆಚ್ಚು. ಕಾಂಗ್ರೆಸ್ ಪಕ್ಷ 123 ಅಭ್ಯರ್ಥಿಗಳಿಗೆ ಹಣ ಕೊಟ್ಟಿರುವುದಾಗಿ ಹೇಳಿದೆ. ಆದರೆ ಆ ಪೈಕಿ 81 ಎಂ.ಪಿ.ಗಳ ಘೋಷಣೆ ಪ್ರಕಾರ ತಮ್ಮ ಪಕ್ಷದಿಂದ ಒಂದು ನಯಾಪೈಸೆಯನ್ನೂ ದೇಣಿಗೆಯಾಗಿ ಸ್ವೀಕರಿಸಿಲ್ಲ!!

ಬಿಜೆಪಿಯದು ಮತ್ತೊಂದು ರೀತಿಯ ಅವಾಂತರ. ಬಿಜೆಪಿ ಪಕ್ಷ ತನ್ನ ಅಭ್ಯರ್ಥಿಗಳಿಗೆ ಒಂದು ನಯಾಪೈಸೆಯನ್ನೂ ದೇಣಿಗೆಯಾಗಿ ನೀಡಿಲ್ಲ ಎನ್ನುತ್ತಿದ್ದರೆ, ಬಿಜೆಪಿಯ 25 ಮಂದಿ ಎಂ.ಪಿ.ಗಳು ಪಕ್ಷದಿಂದ ಸರಾಸರಿ 11 ಲಕ್ಷ ರೂಪಾಯಿ ಪಡೆದಿರುವುದಾಗಿ ಘೋಷಿಸಿಕೊಂಡಿದ್ದಾರೆ!!

ಕೆಲವು ಗಣ್ಯರ ಲೆಕ್ಕಗಳನ್ನು ನೋಡೋಣ.

ರಾಷ್ಟ್ರಪತಿ ಈ ದೇಶದ ಪ್ರಪ್ರಥಮ ಪ್ರಜೆ. ಆದರೆ ಈಗಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರು ಈ ಹಿಂದೆ ಕಾಂಗ್ರೆಸ್ ಪಕ್ಷದ ಎಂಪಿಯಾಗಿ ಆಯ್ಕೆಯಾಗಿ ಕ್ಯಾಬಿನೆಟ್ ದರ್ಜೆಯ ಸಚಿವರಾಗಿದ್ದರೆಂಬುದು ತಿಳಿದಿರುವ ಸಂಗತಿ. 2009ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಇವರಿಗೆ 15 ಲಕ್ಷ ಮೊತ್ತವನ್ನು ಚುನಾವಣಾ ವೆಚ್ಚಕ್ಕಾಗಿ ಕೊಟ್ಟಿದೆ. ಆದರೆ ಪ್ರಣಬ್‌ದಾ ಸರ್ಕಾರಕ್ಕೆ ಸಲ್ಲಿಸಿರುವ ದಾಖಲೆಗಳ ಪ್ರಕಾರ ಅವರು ಪಕ್ಷದಿಂದ ಒಂದು ನಯಾ ಪೈಸೆಯನ್ನೂ ತೆಗೆದುಕೊಂಡಿಲ್ಲವಂತೆ!

ಕೇಂದ್ರ ಮಂತ್ರಿಗಳಾದ ಜ್ಯೋತಿರಾದಿತ್ಯ ಸಿಂಧ್ಯ, ಚಿದಂಬರಂ, ಸಚಿನ್ ಪೈಲಟ್, ಮನೀಶ್ ತಿವಾರಿ, ಬೇನಿಪ್ರಸಾದ್ ವರ್ಮ, ಸುಬೋಧ್‌ಕಾಂತ್ ಸಹಾಯ್ ಮುಂತಾದವರೂ ಕೂಡ ಒಂದು ನಯಾಪೈಸೆ ತೆಗೆದುಕೊಂಡಿಲ್ಲ ಎಂದು ಲೆಕ್ಕ ತೋರಿಸಿದ್ದಾರೆ.



ಇನ್ನು ಬಿಜೆಪಿ ಪಕ್ಷದಿಂದ ದೇಣಿಗೆ ಘೋಷಿಸಿಕೊಂಡಿರುವ ಕೆಲವು ಗಣ್ಯರನ್ನು ನೋಡಿ. ಮುರಳಿ ಮನೋಹರ ಜೋಷಿ, ಯಶವಂತ ಸಿನ್ಹಾ, ಮನೇಕಾ ಗಾಂಧಿ, ಸುಷ್ಮಾ ಸ್ವರಾಜ್, ಕರ್ನಾಟಕದ ಅನಂತ ಕುಮಾರ್, ಪಿಸಿ ಮೋಹನ್, ಜಿ.ಎಸ್.ಬಸವರಾಜ್ ಮುಂತಾದವರಿದ್ದಾರೆ.


ಹಾಗಾದರೆ ಸುಳ್ಳು ಲೆಕ್ಕ ಯಾರದು? ಪಕ್ಷಗಳದ್ದೊ? ಅಥವಾ ಎಂ.ಪಿ/ಮಂತ್ರಿಗಳದ್ದೊ?

ಮೇಲಿನ ಎರಡೂ ರೀತಿಯ ಲೆಕ್ಕಪತ್ರಗಳು ಬೋಗಸ್ ಲೆಕ್ಕಪತ್ರಗಳೇ ಎಂಬುದರಲ್ಲಿ ನಮಗೆ ಗೊಂದಲವೇ ಬೇಡ. ಯಾಕೆಂದರೆ ಪಕ್ಷಗಳು ಹಾಗೂ ಅಭ್ಯರ್ಥಿಗಳು ತೋರಿಸುವ ಲೆಕ್ಕಪತ್ರದ ಹತ್ತಾರು ಪಟ್ಟು ಹೆಚ್ಚು ಬೇನಾಮಿ ಹಣ ಚುನಾವಣೆಯಲ್ಲಿ ಹರಿದುಹೋಗುತ್ತದೆ ಎಂಬುದು ಇಂದು ಶಾಲಾಬಾಲಕರಿಗೂ ಗೊತ್ತು. ●

ಮೋದಿ ಏಕೆ ಪ್ರಧಾನಿಯಾಗುವುದಿಲ್ಲ?

3 ◀◀

ಕರ್ನಾಟಕದ ಪರಿಸ್ಥಿತಿ ಇಂದು ಬಹಳ ಬದಲಾಗಿದೆ. ಕಾಂಗ್ರೆಸ್ ಹೇಳಿಕೊಳ್ಳುತ್ತಿರುವ ರೀತಿಯಲ್ಲಿ ಅದು 25 ಸೀಟುಗಳನ್ನು ಗೆಲ್ಲಲಾಗದು ಎಂದಿಟ್ಟುಕೊಳ್ಳೋಣ. ಆದರೆ ಬಿಜೆಪಿ 10ಕ್ಕಿಂತ ಹೆಚ್ಚು ಗೆಲ್ಲುವುದು ಕಷ್ಟ. ಅದರರ್ಥ ಅದು ಕನಿಷ್ಠ 9 ಸೀಟುಗಳನ್ನು ಕಳೆದುಕೊಳ್ಳಲಿದೆ. ಛತ್ತೀಸ್‌ಗಡದಲ್ಲಿ ಅದು ಗೆಲ್ಲಬಹುದಾದ ಗರಿಷ್ಠ (11ರಲ್ಲಿ 10) ಗೆದ್ದುಬಿಟ್ಟಿದೆ. ಮಧ್ಯ ಪ್ರದೇಶದಲ್ಲಿ 2/3ರಷ್ಟು ಸೀಟುಗಳನ್ನು ಗೆದ್ದರೆ 20 (ಒಟ್ಟು 29ರಲ್ಲಿ) ಸೀಟುಗಳು ಬರುತ್ತವೆ. ಇನ್ನು ಗುಜರಾತ್ ಸಂಪೂರ್ಣವಾಗಿ ಬಿಜೆಪಿಯ ಪರವಾಗಿ ಇರುತ್ತದೆ ಎಂದಿಟ್ಟುಕೊಂಡು 20ರಿಂದ 22 ಸೀಟುಗಳು (ಒಟ್ಟು 26ರಲ್ಲಿ) ಪಡೆಯುತ್ತವೆ ಎಂದು ಕೊಳ್ಳೋಣ. ಜಾರ್ಖಂಡ್‌ನಲ್ಲಿ ಹಿಂದಿನ ರೀತಿಯ ಪರಿಸ್ಥಿತಿಯೂ ಬಿಜೆಪಿಗಿಲ್ಲವಾದರೂ ಅದು 10ರಿಂದ 14ರ ತನಕವೂ (ಒಟ್ಟು ಸೀಟು 14) ಪಡೆಯುತ್ತದೆ ಎಂದು ಬರೆದುಕೊಳ್ಳೋಣ. ಇಷ್ಟೆಲ್ಲಾ ಆದ ಮೇಲೆ, ಬಿಜೆಪಿಯ 2009ರ ಭದ್ರ ಕೋಟೆಗಳಲ್ಲಿ ಅದರ ಒಟ್ಟು ಸೀಟು ಹೆಚ್ಚಾಗುವುದು 68ರಿಂದ ಹೆಚ್ಚೆಂದರೆ 73-75 ಅಷ್ಟೇ.



ಈಗ ಅದು 180ರಿಂದ 200 ಸೀಟುಗಳನ್ನು ಪಡೆಯಬೇಕೆಂದರೆ ಕಳೆದ ಬಾರಿ ದುರ್ಬಲವಾಗಿದ್ದ ರಾಜ್ಯಗಳಿಂದ 100-120 ಸೀಟುಗಳು ಗೆಲ್ಲಬೇಕು. ಅದರ ಸಾಧ್ಯತೆ ಏನೆಂದು ನೋಡೋಣ.

ಉತ್ತರಪ್ರದೇಶದಿಂದ ಆರಂಭಿಸೋಣ. ಹಾಲಿ ಅಲ್ಲಿ ಮುಜಫರ್‌ನಗರದ ಕೋಮುಗಲಭೆಯ ನಂತರದ ಸ್ಥಿತಿ ಏನೆಂದು ಸರಿಯಾಗಿ ಅಂದಾಜಿಸಬೇಕಿದೆ. ಅಂದರೆ, ಅದರಿಂದ ಎಸ್‌ಪಿಗೆ ಹೆಚ್ಚು ಲಾಭವೋ, ಬಿಜೆಪಿಗೋ ಎಂದು. ಉತ್ತರ ಪ್ರದೇಶದಲ್ಲಿ ಬಿಜೆಪಿ ಅತ್ಯಂತ ಹೆಚ್ಚು ಸೀಟು ಪಡೆದದ್ದು 57 (ರಾಮಜನ್ಮಭೂಮಿ ಗಲಭೆಯ ಉಚ್ಛ್ರಾಯ ಕಾಲ). ಅದೂ ಆ ರಾಜ್ಯದಲ್ಲಿ ಜಾತಿ ವಿಭಜೀಕರಣ ಚುನಾವಣಾ ಕ್ಷೇತ್ರದಲ್ಲಿ ಈ ಮಟ್ಟಿಗೆ ಆಗದೇ ಇದ್ದಾಗ. ವಾಜಪೇಯಿ ನೇತೃತ್ವದಲ್ಲಿ ಅಧಿಕಾರಕ್ಕೆ ಬರುವ ಹೊತ್ತಿಗೆ ಆ ರೀತಿಯ ವಿಭಜೀಕರಣ ನಡೆದು ಅದು 29ಕ್ಕೆ ಇಳಿದುಬಿಟ್ಟಿತು. ಆ ನಂತರ ಮತ್ತಷ್ಟು ಇಳಿದು ಕಳೆದ ಚುನಾವಣೆಯಲ್ಲಿ 10 ಸೀಟುಗಳಲ್ಲಿ ಗೆದ್ದಿದ್ದರು. ಈ ಸಾರಿ ಅದು ಮತ್ತೆ 29ಕ್ಕೆ ಏರುತ್ತದೆ ಎಂದೇ ಬಿಜೆಪಿಯ ಪರವಾಗಿ ಬರೆದುಕೊಳ್ಳೋಣ.

ಇದರನಂತರ ಬಿಜೆಪಿ ಲಾಭ ಪಡೆದುಕೊಳ್ಳಬಹುದಾದ ದೊಡ್ಡ ರಾಜ್ಯವೆಂದರೆ ಬಿಹಾರ. ಇಲ್ಲೂ ಸಹ ಅತ್ಯಂತ ಹೆಚ್ಚು ಸೀಟುಗಳನ್ನು ಪಡೆದದ್ದು 1999ರಲ್ಲಿ - 23 ಸೀಟುಗಳು. ಆದರೆ 2009ರ ಚುನಾವಣೆಯ ಹೊತ್ತಿಗೆ ಜೆಡಿಯುನ ಚುನಾವಣಾ ಮೈತ್ರಿಯ ಹೊರತಾಗಿಯೂ ಪಡೆದುಕೊಳ್ಳಲು ಸಾಧ್ಯವಾಗಿದ್ದು 12 ಸೀಟುಗಳನ್ನು ಮಾತ್ರವೇ. ಈಗ ಆ ಮೈತ್ರಿಯೂ ಇಲ್ಲ, ಆದರೂ ಈ ಸಾರಿಯೂ 12 ಸೀಟು ಗೆಲ್ಲುತ್ತದೆ ಎಂಬ ಲೆಕ್ಕಾಚಾರವಿರಲಿ. ಇನ್ನು ಮಹಾರಾಷ್ಟ್ರ. ಕಳೆದ ಚುನಾವಣೇಲಿ 9 ಬಿಜೆಪಿ ಎಂ.ಪಿಗಳಿದ್ದರು. ಅಲ್ಲಿ ವಾಜಪೇಯಿ ಪ್ರಧಾನಿಯಾದ 99ರಲ್ಲೂ ಗೆಲ್ಲಲು ಸಾಧ್ಯವಾಗಿದ್ದು 13 ಸೀಟುಗಳನ್ನು ಮಾತ್ರ. ಈ ಸಾರಿ ಇನ್ನೂ 2 ಹೆಚ್ಚು, ಅಂದರೆ 15 ಸೀಟು ಪಡೆದುಕೊಳ್ಳಬಹುದು.

ಇನ್ನೊಂದು ದೊಡ್ಡ ರಾಜ್ಯ ರಾಜಸ್ಥಾನ. ಇಲ್ಲಿ ಸಾಮಾನ್ಯವಾಗಿ ಬಿಜೆಪಿ ಮತ್ತು ಕಾಂಗ್ರೆಸ್‌ನ ನಡುವೆ ಅಲೆ ಬೀಸುತ್ತಿರುತ್ತದೆ. ಈ ಸಾರಿ ಆ ರಾಜ್ಯದಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿಯ ಪರವಾದ ಅಲೆ ಇದೆ. ಅದರ ಪರವಾಗಿಯೇ ಲೆಕ್ಕ ಹಾಕಿ (ಒಟ್ಟು 25ರಲ್ಲಿ) 21 ಸೀಟು ಗೆಲ್ಲುತ್ತಾರೆಂದು ಅಂದಾಜಿಸೋಣ. ಇದು ಇದುವರೆಗೆ ರಾಜಸ್ಥಾನದಲ್ಲಿ ಬಿಜೆಪಿ ಪಡೆದುಕೊಂಡಿರುವ ಅತೀ ಹೆಚ್ಚು ಸೀಟುಗಳು.

ಇನ್ನು ಪ.ಬಂಗಾಳದಲ್ಲಿ ಇದುವರೆಗೆ ಬಿಜೆಪಿಯು ಅತ್ಯಂತ ಹೆಚ್ಚು ಸೀಟು ಪಡೆದುಕೊಂಡದ್ದು 1999ರಲ್ಲಿ 2(2). ಹರ್ಯಾಣದಲ್ಲಿ 99ರಲ್ಲೇ 5 ಮತ್ತು ಪಂಜಾಬ್‌ನಲ್ಲಿ 3. ಈ ಸಾರಿಯೂ ಇದಕ್ಕಿಂತ ಹೆಚ್ಚು ಸಾಧ್ಯವಿಲ್ಲ. ಆದರೆ ಬಿಜೆಪಿಯ ಮಿತ್ರ ಪಕ್ಷಗಳು ಇಲ್ಲಿ ಗೆಲ್ಲುವ ಸಾಧ್ಯತೆ ಇದೆ. ಇನ್ನು ಒರಿಸ್ಸಾದಲ್ಲಿ ಅದರ ಗರಿಷ್ಠ ಗಳಿಕೆ 99ರಲ್ಲಿ 9. ಅದು 2004ರಲ್ಲಿ 7ಕ್ಕೆ ಇಳಿದು, 2009ರಲ್ಲಿ ಬಿಜೆಡಿ ಅದರಿಂದ ದೂರವಾದ ಮೇಲೆ ಸೊನ್ನೆಯಾಗಿತ್ತು. ಈ ಸಾರಿ ಸಾಧ್ಯ ಉದಾರವಾಗಿ ಅದು 7ಕ್ಕೆ ಏರುತ್ತದೆಂದು ಇಟ್ಟುಕೊಳ್ಳೋಣ. ದೆಹಲಿಯಲ್ಲಿ ಬಿಜೆಪಿ ಪರವಾದ ಸಮೀಕ್ಷೆಗಳೂ 3 ಸೀಟು ಬರುತ್ತವೆಂದು ಹೇಳುತ್ತಿವೆ. ಏಕೆಂದರೆ ಸ್ವತಂತ್ರವಾಗಿ ಸ್ಪರ್ಧಿಸುವ ಆಮ್ ಆದ್ಮಿ ಪಕ್ಷವು ಕಾಂಗ್ರೆಸ್ ವಿರೋಧಿ ಮತಗಳನ್ನು ವಿಭಜಿಸುತ್ತದೆ.

ಇನ್ನು, ಕೇರಳದಲ್ಲಿ ಬಿಜೆಪಿಗೆ ಒಂದು ಸೀಟೂ ಬರುವ [illegible]

ದಿಲ್ಲಿ, ಆಂಧ್ರದಲ್ಲಿ 99ರಲ್ಲಿ 7 ಸೀಟು ಪಡೆದುಕೊಂಡಿತ್ತಾದರೂ, ಆನಂತರ ಒಂದೂ ಬಂದಿಲ್ಲ. ಈ ಸಾರಿ ತೆಲಂಗಾಣ ಹಾಗೂ ಸೀಮಾಂಧ್ರದಲ್ಲಿ ಬೇರೆ ತರಹದ ರಾಜಕೀಯ ಗಾಳಿ ಬೀಸುತ್ತಿದೆ. ಕಾಂಗ್ರೆಸ್ ವಿರೋಧಿ ಅಬ್ಬರ ಸೀಮಾಂಧ್ರದಲ್ಲೂ, ಟಿಆರ್‌ಎಸ್ ಪರ ಹವಾ ತೆಲಂಗಾಣದಲ್ಲೂ ವ್ಯಾಪಕವಾಗಿದ್ದು ಇದರಿಂದ ಬಿಜೆಪಿಗೆ ವಿಶೇಷ ಲಾಭವಿಲ್ಲ. ಏಕೆಂದರೆ ಈ ವಿಚಾರದಲ್ಲಿ ಬಿಜೆಪಿ ತೆಲಂಗಾಣದ ಪರವಿತ್ತು.

ಸಾರಾಂಶದಲ್ಲಿ ಎಲ್ಲವೂ ಬಿಜೆಪಿಯ ಪರವಾಗಿಯೇ ಇರುತ್ತದೆ ಎಂದಿಟ್ಟುಕೊಂಡರೂ, ಹೊಸದಾಗಿ ಅದು ಪಡೆದುಕೊಳ್ಳಲಿರುವ ಸೀಟುಗಳು 40ರಿಂದ 50. ಅದರರ್ಥ ಅದು 160-170 ತಲುಪಬಹುದು. 272ಕ್ಕಿಂತ 100 ಸೀಟು ಕಡಿಮೆ. ಇವೆಲ್ಲವೂ ಹಿಂದಿನ ಚುನಾವಣೆಗೂ ಈ ಸಾರಿಗೂ ಬರಬಹುದಾದ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ಬಿಜೆಪಿಯ ಅತ್ಯಂತ ಉತ್ಕೃಷ್ಟ ಗಳಿಕೆಯನ್ನು ಮನದಲ್ಲಿಟ್ಟುಕೊಂಡು ಮಾಡಿದ ಲೆಕ್ಕಾಚಾರ. ಇನ್ನೊಂದು ಅಂಶವೂ ಬಿಜೆಪಿಯ ಪರವಾಗಿ ಕೆಲಸ ಮಾಡಬಹುದು. ಅದು ಸುಮಾರು 15 ಕೋಟಿಯಷ್ಟು ಇರಬಹುದಾದ ಹೊಸ ಮತದಾರರ ಸಂಖ್ಯೆ. ಅಧ್ಯಯನಗಳ ಪ್ರಕಾರ ಇವರಲ್ಲಿ ಹೆಚ್ಚಿನವರು ದಕ್ಷಿಣ ಭಾರತದ ನಗರಗಳಲ್ಲೂ, ಉತ್ತರ ಭಾರತದಲ್ಲಿ ಉತ್ತರ ಪ್ರದೇಶ ಮತ್ತು ಬಿಹಾರಗಳ ಗ್ರಾಮೀಣ ಪ್ರದೇಶಗಳಲ್ಲೂ ಇದ್ದಾರೆ. ದಕ್ಷಿಣ ಭಾರತದಲ್ಲಿ ಕರ್ನಾಟಕ ಬಿಟ್ಟರೆ ಬೇರೆ ಕಡೆ ಬಿಜೆಪಿಗೆ ನೆಲೆಯಿಲ್ಲ. ಕರ್ನಾಟಕದ ಪರಿಸ್ಥಿತಿ ಈಗ ಅದರ ಪರವಾಗಿಲ್ಲ.

ಇನ್ನು ಉತ್ತರ ಭಾರತದ ಸುಮಾರು 145 ಕ್ಷೇತ್ರಗಳಲ್ಲಿ ಮುಸ್ಲಿಮರು ಗಮನಾರ್ಹ ಸಂಖ್ಯೆಯಲ್ಲಿದ್ದಾರೆ. 180 ಕ್ಷೇತ್ರಗಳಲ್ಲಿ ಅವರ ಪ್ರಮಾಣವು ಶೇ.11ರಿಂದ ಶೇ.35ರವರೆಗೆ ಇದೆ. ಅಂದರೆ ಮೋದಿಯೇ ಮುಸ್ಲಿಂ ಮತಗಳ ಧ್ರುವೀಕರಣಕ್ಕೆ ಕಾರಣನಾಗುತ್ತಾನೆ. ಈ ಎಲ್ಲಾ ಕಾರಣಗಳ ಹೊರತಾಗಿ, ಯಾವುದಾದರೂ ಉನ್ಮಾದದ ಅಲೆ ದೇಶದಾದ್ಯಂತ ಬೀಸಿ ಬದಲಾವಣೆಗೆ ಕಾರಣವಾಗಬೇಕು. ಆ ಸಾಧ್ಯತೆಯೇನೂ ಕಾಣುತ್ತಿಲ್ಲ. ಹೀಗಾಗಿ ಮೋದಿ ಈ ಸಾರಿಯೇ ಗೆದ್ದುಬಿಡಬಹುದೆಂದು ಆತಂಕ ಪಡುವ ಅಗತ್ಯವಿಲ್ಲ.


ಆದರೆ, ಆತಂಕ ಪಡಲು ಬೇರೆ ಕಾರಣಗಳಿವೆ. ಮೋದಿ ಈ ಸಾರಿ ಗೆಲ್ಲದಿರಬಹುದು. ಇದು ಸೆಮಿಫೈನಲ್ ಮಾತ್ರ ಆಗಿದ್ದು ಫೈನಲ್‌ನಲ್ಲಿ ಗೆಲ್ಲುವ ಎಲ್ಲಾ ಸಾಧ್ಯತೆಗಳಿವೆ.

ಬದಲಾದ ಸ್ಥಿತಿ


ಈಗ ದೇಶದ ರಾಜಕಾರಣದಲ್ಲಿ ಆಮ್‌ಆದ್ಮಿ ಪಕ್ಷವೆಂಬ ಹೊಸ ವಿದ್ಯಮಾನ ಶುರುವಾಗಿದೆ. ಮುಜಫರ್‌ನಗರ ಗಲಭೆ ಬಿಜೆಪಿ ನಿರೀಕ್ಷಿಸಿದ್ದ ಧ್ರುವೀಕರಣವನ್ನು ತಂದುಕೊಟ್ಟಿದೆ. ಎನ್‌ಡಿಎಗೆ ಅಕ್ಟೋಬರ್‌ನಲ್ಲಿ ಇಲ್ಲದಿದ್ದ ತೆಲುಗುದೇಶಂ ಮತ್ತು ತಮಿಳುನಾಡಿನಲ್ಲಿ ಡಿಎಂಡಿಕೆ ಸೇರಿದಂತೆ ಕೆಲವು ಪಕ್ಷಗಳು ಸೇರಿಕೊಂಡಿವೆ.

15ನೇ ಲೋಕಸಭೆಯಲ್ಲಿ ಬಿಜೆಪಿಗೆ 116 ಸೀಟುಗಳಿದ್ದವು. ಅವರು ಈವರೆಗೆ ಗಳಿಸಿರುವ ಅತ್ಯಧಿಕ ಸೀಟು ವಾಜಪೇಯಿ ಪ್ರಧಾನಿಯಾದಾಗ 182. ಆಗ 27ಕ್ಕೂ ಹೆಚ್ಚು ಇತರ ಪಕ್ಷಗಳು ಬಿಜೆಪಿ ನೇತೃತ್ವದ ಎನ್‌ಡಿಎ ಸಖ್ಯದಲ್ಲಿದ್ದವು.

ಅಕ್ಟೋಬರ್‌ನಲ್ಲಿ ಬರೆದ ವಿಶ್ಲೇಷಣೆಯಲ್ಲಿ ಸ್ಪಷ್ಟಪಡಿಸಿದ್ದಂತೆ ಬಿಜೆಪಿ ಶಕ್ತಿಯುತವಾಗಿರುವ ರಾಜ್ಯಗಳಲ್ಲಿ ಈಗಾಗಲೇ ಅವರು ಗರಿಷ್ಠ ಸಂಖ್ಯೆಯನ್ನು ಪಡೆದುಕೊಂಡಿದ್ದಾರೆ. ಉದಾಹರಣೆಗೆ ಛತ್ತೀಸ್‌ಗಡದಲ್ಲಿ 11ರಲ್ಲಿ 10, ಮಧ್ಯಪ್ರದೇಶದಲ್ಲಿ 29ರಲ್ಲಿ 16, ಗುಜರಾತಿನ 26ರಲ್ಲಿ 15 ಇತ್ಯಾದಿ. ಈ ಎಲ್ಲಾ ಪ್ರದೇಶಗಳಲ್ಲಿ ಸಂಪೂರ್ಣ ಬಿಜೆಪಿ ಪರವಾದ ಗರಿಷ್ಠ ಸಂಖ್ಯೆಯನ್ನೇ ಅಕ್ಟೋಬರ್‌ನ ಲೆಕ್ಕಾಚಾರದಲ್ಲಿ ನೀಡಲಾಗಿತ್ತು. ಗುಜರಾತಿನಲ್ಲಿ 22, ಮಧ್ಯಪ್ರದೇಶದಲ್ಲಿ 20, ಛತ್ತೀಸ್‌ಗಢದಲ್ಲಿ 11ಕ್ಕೆ 11. ಇನ್ನು ಅದು ರಾಜಸ್ಥಾನದಲ್ಲಿ 25ರಲ್ಲಿ 21 ಗೆಲ್ಲುತ್ತದೆ ಎಂದು ಲೆಕ್ಕಾಚಾರ ಮಾಡಲಾಗಿತ್ತು. ಮುಜಫರ್‌ನಗರದ ಗಲಭೆಯ ಕಾರಣದಿಂದ ಉಂಟಾಗುವ ಮತ ಧ್ರುವೀಕರಣದಿಂದ ಈಗಿರುವ 10 ಸೀಟಿನಿಂದ 30 ಸೀಟುಗಳ ತನಕ ಅದರ ಸಾಮರ್ಥ್ಯ ಹೆಚ್ಚಬಹುದೆಂದು ಅಂದಾಜು ಮಾಡಲಾಗಿತ್ತು.



ಹಾಗೆಯೇ ಬಿಹಾರದಲ್ಲಿ 12 ಸೀಟುಗಳನ್ನು ಉಳಿಸಿಕೊಳ್ಳಬಹುದೆಂದು ಎಣಿಸಲಾಗಿತ್ತು. ಇನ್ನು ಅದು ಬಲಹೀನವಾಗಿರುವ ಬಂಗಾಳ, ತಮಿಳುನಾಡು, ಆಂಧ್ರ, ಒರಿಸ್ಸಾಗಳಲ್ಲಿ ಕೂಡಾ ಅದರ ಈವರೆಗಿನ ಸಾಧನೆಯನ್ನು ಪರಿಗಣಿಸಿ ಅತಿಹೆಚ್ಚು ಸಂಖ್ಯೆಯನ್ನೇ ನೀಡಲಾಗಿತ್ತು. ಇವೆಲ್ಲಾ ಸೇರಿ 116ರಿಂದ 160ಕ್ಕೆ ಬಿಜೆಪಿಯ ಗಳಿಕೆ ಏರಬಹುದೆಂದು ಲೆಕ್ಕ ಹಾಕಲಾಗಿತ್ತು. ಹಾಗೆಯೇ ಅದರ ಸಖ್ಯದಲ್ಲಿರುವ ಪಕ್ಷಗಳು ಶಿವಸೇನೆ ಮತ್ತು ಅಕಾಲಿ ದಳಗಳು ಒಟ್ಟು ಸೇರಿ ಇನ್ನು 25 ಸೀಟುಗಳನ್ನು ತರುತ್ತವೆಂದು ಭಾವಿಸಲಾಗಿತ್ತು. ಹೀಗಾಗಿ ಇಡೀ ಎನ್‌ಡಿಎ ಮುಟ್ಟುವುದು ಕಷ್ಟವೆಂದು ಲೆಕ್ಕಾಚಾರ ಮಾಡಲಾಗಿತ್ತು.



ಈಗ ಕೇಳಿಕೊಳ್ಳಬೇಕಿರುವ ಪ್ರಶ್ನೆ ಅಂದಿಗೂ, ಇಂದಿಗೂ ಕೆಳಗಿನ ವಿಷಯಗಳಲ್ಲಿ ಏನೇನು ಬದಲಾವಣೆ ಬಂದಿದೆ?

ಬಿಜೆಪಿ ಶಕ್ತವಾಗಿರುವ ರಾಜ್ಯಗಳಲ್ಲಿ ಮೂರನೇ ಎರಡಕ್ಕಿಂತ ಹೆಚ್ಚು ಸ್ವೀಪ್ (ಗುಡಿಸಿ ಹಾಕುವಷ್ಟು) ಬಲ ಬಂದಿದೆಯೇ? ಅಂದರೆ ಗುಜರಾತಿನಲ್ಲಿ 26ಕ್ಕೆ 26, ಮಧ್ಯಪ್ರದೇಶದಲ್ಲಿ 29ಕ್ಕೆ 29.

ಬಿಜೆಪಿ ತನ್ನ ಕೋಮುವಾದಿ ವಿಭಜಕ ನೀತಿಗಳಿಂದ ಸಾಪೇಕ್ಷವಾಗಿ ಬಲ ಕುದುರಿಸಿಕೊಳ್ಳುತ್ತಿರುವ ಉತ್ತರ ಪ್ರದೇಶ, ಬಿಹಾರಗಳಲ್ಲಿ ಮೊದಲಿಗಿಂತ ಎಷ್ಟು ಹೆಚ್ಚು ಬಲ ಸಂಚಯಿಸಿಕೊಳ್ಳಬಹುದು?

ಬಿಜೆಪಿ ನಗಣ್ಯವಾಗಿರುವ ಕೇರಳ, ತಮಿಳುನಾಡು, ತೆಲಂಗಾಣ, ಆಂಧ್ರ, ಬಂಗಾಳಗಳಲ್ಲಿ ಏನನ್ನಾದರೂ ಪಡೆದುಕೊಳ್ಳಲು ಸಾಧ್ಯವೇ?

ಇತರ ಎಲ್ಲಾ ಅಂಶಗಳನ್ನು ಕೊಚ್ಚಿ ಹಾಕುವಷ್ಟು ಪ್ರಬಲ ಮೋದಿ ಹವಾ ಬೀಸುತ್ತಿದೆಯೇ?

ಮೊದಲಿಗಿಂತ ಹೆಚ್ಚಿನ ಮತ ಮತ್ತು ಸೀಟು ತರಬಲ್ಲ ಮಿತ್ರಪಕ್ಷಗಳನ್ನು ಪಡೆದುಕೊಂಡಿದೆಯೇ?

ಉತ್ತರಗಳು ಹೀಗಿವೆ

ಗುಜರಾತ್ ಮತ್ತು ಮಧ್ಯಪ್ರದೇಶದಲ್ಲಿ ಅಷ್ಟಕ್ಕಷ್ಟು ಸ್ವೀಪ್ ಮಾಡುವ ಪರಿಸ್ಥಿತಿಯಲ್ಲಿ ಬಿಜೆಪಿಯಿಲ್ಲ. ಆಮ್‌ಆದ್ಮಿ ಪ್ರವಾಸಕ್ಕೆ ಗುಜರಾತ್‌ನಲ್ಲಿ ವ್ಯಕ್ತವಾಗಿರುವ ಬೆಂಬಲ ಮತ್ತು ಮಧ್ಯಪ್ರದೇಶ ಚುನಾವಣೆಯಲ್ಲಿ ಕಾಂಗ್ರೆಸ್ ಕಡಿಮೆ ಸೀಟು ಪಡೆದುಕೊಂಡಿದ್ದರೂ ಮತ ಗಳಿಕೆಯಲ್ಲಿ ಅಂಥ ದೊಡ್ಡ ಬದಲಾವಣೆಯಿಲ್ಲದಿರುವುದು ಮತ್ತು ಮಧ್ಯಪ್ರದೇಶದಲ್ಲಿ ಮೋದಿ ವಿರುದ್ಧ ಒಳರಾಜಕಾರಣ ಬಿಜೆಪಿಯ ಒಳಗೇ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ ಕಳೆದ ಬಾರಿ ಅದಕ್ಕೆ ದೇಶದಲ್ಲೇ ಅತಿಹೆಚ್ಚು ಸೀಟು ಬಂದಿದ್ದರೂ, ಯಡ್ಡಿ ವಾಪಸ್ ಬಂದನಂತರವೂ ಬಿಜೆಪಿಯ ಒಳರಾಜಕಾರಣವೇ ಬಿಜೆಪಿಯ ಹಲವು ನಾಯಕರನ್ನು ಬಲಿತೆಗೆದುಕೊಳ್ಳುತ್ತದೆ.



ದೇಶಾದ್ಯಂತ ಮುಸ್ಲಿಮರು ಹಿಂದೆಂದಿಗಿಂತಲೂ ಹೆಚ್ಚು ಮತದಾನ ಮಾಡುವ ಸಾಧ್ಯತೆಯಿದೆ ಮತ್ತು ಅದರಲ್ಲಿ ಶೇ.80ಕ್ಕಿಂತ ಹೆಚ್ಚು ಕಾಂಗ್ರೆಸ್‌ಗೆ ಹೋಗುವ ಎಲ್ಲಾ ಲಕ್ಷಣಗಳೂ ಕಾಣುತ್ತಿವೆ. ಹೀಗಾಗಿ ಮೊದಲು ಶಕ್ತವಾಗಿದ್ದ ರಾಜ್ಯಗಳಲ್ಲಿ ಇನ್ನು ಒಂದೆರಡು ಹೆಚ್ಚಾಗಬಹುದೇ ವಿನಃ ಸ್ವೀಪ್ ಸಾಧ್ಯವಿಲ್ಲ.

ಉತ್ತರ ಪ್ರದೇಶದಲ್ಲಿ ಬಿಎಸ್‌ಪಿ ಬಲಗೊಳ್ಳುತ್ತಿದೆ. ಎಸ್‌ಪಿ ಮೇಲಿದ್ದ ಮುಸ್ಲಿಮರ ಸಿಟ್ಟು ಕಡಿಮೆಯಾಗುತ್ತಿದೆ. ಆದರೆ ಜಾಟರು ಮತ್ತು ಇತರ ಮೇಲ್ಜಾತಿಗಳು ಬಿಜೆಪಿ ಕಡೆ ಪೂರ್ಣವಾಗಿ ವಾಲಿವೆ. ಮತ್ತೊಂದು ಇದು ಮುಸ್ಲಿಮರಲ್ಲೂ ಧ್ರುವೀಕರಣಕ್ಕೂ ಕಾರಣವಾಗಿದೆ. ಹೀಗಾಗಿ ಅಕ್ಟೋಬರ್‌ನಲ್ಲಿ ಹೆಚ್ಚಿಸಿದ್ದ 30 ಸೀಟಿಗೆ ಇನ್ನೂ 5 ಸೇರಿಸೋಣ. ಬಿಹಾರದಲ್ಲಿ ಪಾಸ್ವಾನ್ ಎನ್‌ಡಿಎಗೆ ಸೇರಿದ್ದರೂ ಆತನ ಜಾತಿ ಬಲ, ಪ್ರಭಾವ ಎರಡು ಕ್ಷೇತ್ರಗಳನ್ನು ಮೀರುವುದಿಲ್ಲ ಎನ್ನುವುದು ಬಿಜೆಪಿಗೂ ಗೊತ್ತು. ದಲಿತ ಮುಖ ಬೇಕೆಂದು ಅವಕಾಶವಾದಿ ಪಾಸ್ವಾನ್‌ರನ್ನು ಜೊತೆಗೆ ಸೇರಿಸಿಕೊಂಡಿದೆ ಅಷ್ಟೇ. ಮತ್ತೊಂದು ಕಡೆ ಕಾಂಗ್ರೆಸ್‌ನ ಬದ್ಧ ಸ್ನೇಹಿತ ಲಾಲೂ ಪಕ್ಷ ಚಿಗುರಿದೆ. ನಿತೀಶ್ ಕಟ್ಟಿದ ಅತ್ಯಂತ ಹಿಂದುಳಿದ ಜಾತಿಗಳ ಐಕ್ಯತೆ ಮೋದಿ ಹವಾದಿಂದ ಕೈಜಾರುವಂಥದ್ದಲ್ಲ. ಆದರೂ ಮೇಲ್ಜಾತಿಗಳು ಸಾಲಿಡ್ ಆಗಿ ಬಿಜೆಪಿಯನ್ನು ಬೆಂಬಲಿಸುವ ಸಾಧ್ಯತೆ ಇದೆ. ಅದಕ್ಕೆ, [illegible] ಮತ್ತು ಅತಿ ಹಿಂದುಳಿದ ಜಾತಿಗಳ ಐಕ್ಯತೆಯಾಗುತ್ತಿದೆ. ಹೀಗಾಗಿ [illegible] ಕಾರಣವಿಲ್ಲ. ಆದರೂ 5 ಸೀಟು ಹೆಚ್ಚಿಗೆ ಹಾಕೋಣ.

ತಮಿಳುನಾಡಿನಲ್ಲಿ ಅದು ಒಂದು ಒಕ್ಕೂಟ ಮಾಡಿಕೊಂಡಿದ್ದರೂ ಡಿಎಂಡಿಕೆಯನ್ನು ಬಿಟ್ಟರೆ ಉಳಿದೆಲ್ಲಾ ಚುನಾವಣೆಯ ದೃಷ್ಟಿಯಿಂದ ಅಸಂಗತವಾದವು. ಅವು ಪಾರ್ಲಿಮೆಂಟರಿ ಚುನಾವಣೆಯನ್ನು ಎಐಎಡಿಎಂಕೆ ವಿರುದ್ಧ ಒಂದೆರಡಕ್ಕಿಂತ ಹೆಚ್ಚು ಗೆಲ್ಲುವುದು ಕಷ್ಟ. ಆಂಧ್ರದಲ್ಲಿ ಟಿಡಿಪಿ ಜೊತೆಗೆ ಮೈತ್ರಿ ಮಾಡಿಕೊಂಡಿರುವುದು ಅವೆರಡು ಪಕ್ಷಗಳ ನಡುವಿನ ಅಂತಃಕಲಹವನ್ನು ಮತ್ತು ಪರಸ್ಪರ ಕಲಹವನ್ನು ಹೆಚ್ಚು ಮಾಡಿವೆ. ಟಿಕೆಟ್ ಹಂಚಿಕೆಯಾದೊಡನೆ ಭುಗಿಲೇಳುವ ಸಾಧ್ಯತೆಯೂ ಇದೆ. 1996-2004ರ ಅವಧಿಯಲ್ಲೂ ಟಿಡಿಪಿ ಮೈತ್ರಿಯಿಂದ ಬಿಜೆಪಿಗೆ ನೆಲೆ ಸಿಕ್ಕಿತೇ ವಿನಃ ಗೆಲ್ಲುವಷ್ಟು ಓಟುಗಳು ಸಿಕ್ಕಿರಲಿಲ್ಲ. ಇನ್ನು ಟಿಡಿಪಿ ತೆಲಂಗಾಣದ ಬಗ್ಗೆ ತೆಗೆದುಕೊಂಡ ಎಡಬಿಡಂಗಿ ನಿಲುವಿನಿಂದ ತೆಲಂಗಾಣದಲ್ಲಿ ಟಿಆರ್‌ಎಸ್ ವಿರುದ್ಧ ಮತ್ತು ಸೀಮಾಂಧ್ರದಲ್ಲಿ ಜಗನ್ ವಿರುದ್ಧ ಈಜಿ ಗೆಲ್ಲುವುದು ಬಹಳ ಕಷ್ಟ. ಹೀಗಾಗಿ ಇಲ್ಲೂ ಬಿಜೆಪಿಗೆ ದಕ್ಕುವುದು ಬಲು ಕಷ್ಟ. ಇನ್ನು ಕೇರಳ ಮತ್ತು ಬಂಗಾಳಗಳಲ್ಲಿ ಬಿಜೆಪಿ ಈಗಲೂ ಲೆಕ್ಕಕ್ಕಿಲ್ಲ.

ಮೋದಿ ಹವಾದ ಬಗ್ಗೆ ಬಿಜೆಪಿ ನಾಯಕತ್ವಕ್ಕೇ ವಿಶ್ವಾಸವಿಲ್ಲ. (ಬಾಕ್ಸ್ ನೋಡಿ) ಮಿತ್ರ ಪಕ್ಷಗಳು ದಕ್ಕಿರುವುದು ತೆಲುಗುದೇಶಂ ಮತ್ತು ಡಿಎಂಡಿಕೆಗಳು. ಅವುಗಳ ಗೊಂದಲದ ಬಗ್ಗೆ ಈಗಾಗಲೇ ಹೇಳಿದೆ.

ಹೀಗಾಗಿ ಅಕ್ಟೋಬರ್‌ನಲ್ಲಿ ಮಾಡಿದ್ದ ಲೆಕ್ಕಾಚಾರಕ್ಕೆ ಇನ್ನು 10-20 ಸೀಟು ಕೊಡಬಹುದು ಅಷ್ಟೇ. ಆಗಲೂ ಎನ್‌ಡಿಎ 200ರಿಂದ 210ರ ಆಸುಪಾಸಿನಲ್ಲಿ ಬಂದು ನಿಲ್ಲುತ್ತದೆ. ಇನ್ನೂ ಕೆಲವು ನೆಗೆಟಿವ್ ಅಂಶಗಳು ಎನ್‌ಡಿಎ ವಿರುದ್ಧ ಕೆಲಸ ಮಾಡುತ್ತವೆ. ಸೀಟು ಹಂಚಿಕೆಯ ಬಗ್ಗೆ ಜಸ್ವಂತ್‌ಸಿಂಗ್‌ರಂತಹ ಬಿಜೆಪಿಯ ಹಿರಿಯ ನಾಯಕರೂ ಸೇರಿದಂತೆ ಹಲವರಲ್ಲಿ ಅಸಮಾಧಾನ ಏರ್ಪಟ್ಟಿರುವುದು. ಸಮೀಕ್ಷೆಗಳಲ್ಲಿ ಬರೆದಿರುವುದಕ್ಕಿಂತ ವಿರುದ್ಧವಾಗಿ ನಿತೀಶ್ ಕುಮಾರ್ ಪರವಾದ ಅಲೆ ಇನ್ನೂ ಬಿಹಾರದಲ್ಲಿ ಇದೆ ಎನ್ನುವ ಅಭಿಪ್ರಾಯ ಅಲ್ಲಿ ಓಡಾಡಿಬಂದ ಕೆಲವು ಪತ್ರಕರ್ತರ ಅಭಿಪ್ರಾಯವಾಗಿದೆ.

ಇಷ್ಟಾದ ಮೇಲೆ ಎನ್‌ಡಿಎ ಗೆದ್ದುಕೊಳ್ಳಬಹುದಾದ ಹೊಸ ಸ್ನೇಹಿತರು ಯಾರ್‍ಯಾರು ಎಂಬ ಪ್ರಶ್ನೆ ಮಾತ್ರ ಉಳಿಯುತ್ತದೆ. ತಲಾ 20ಕ್ಕಿಂತ ಹೆಚ್ಚು ಸೀಟು ಪಡೆಯಬಹುದಾದ ಸಾಧ್ಯತೆಗಳು ಜಯಲಲಿತಾರ ಎಐಎಡಿಎಂಕೆ, ಜಗನ್‌ನ ವೈಎಸ್ಸಾರ್ ಕಾಂಗ್ರೆಸ್, ಮಮತಾರ ತೃಣಮೂಲ, ಮಾಯಾವತಿಯವರ ಬಿಎಸ್‌ಪಿ ಮತ್ತು ನವೀನ್ ಪಟ್ನಾಯಕ್‌ರ ಬಿಜೆಡಿಗಳಿಗಿವೆ. ಇವರಲ್ಲಿ ಬಿಜೆಡಿ ಬಿಟ್ಟರೆ ಮಿಕ್ಕವರೆಲ್ಲರೂ ಮುಸ್ಲಿಮರ ಮತಗಳನ್ನು ಒಂದಲ್ಲ ಒಂದು ಮಟ್ಟಿಗೆ ಆಧರಿಸಬೇಕಾಗುತ್ತದೆ. ಹಾಗಾಗಿಯೇ ಮಮತಾ ಬ್ಯಾನರ್ಜಿ ದಿನೇದಿನೇ ಹೆಚ್ಚೆಚ್ಚು ಮೋದಿ ವಿರೋಧಿ ಮಾತುಗಳನ್ನು ಆಡುತ್ತಿರುವುದು. ಪರಸ್ಪರ ವಿರೋಧಿಗಳಾಗಿರುವ ಚಂದ್ರಬಾಬು ನಾಯ್ಡು ಮತ್ತು ಜಗನ್ ಇಬ್ಬರೂ ಒಂದೇ ಮೈತ್ರಿಕೂಟದಲ್ಲಿರುವುದು ಸುಲಭವಲ್ಲ.

ಆದರೂ ಇವೆಲ್ಲದರ ಹೊರತಾಗಿಯೂ ಇಂತಹ ಎಲ್ಲಾ ಪಕ್ಷಗಳೂ ಎನ್‌ಡಿಎ ಜೊತೆ ಸೇರಿದರೆ 272ನ್ನು ತಲುಪಿಯೂ ಬಿಡಬಹುದು. ಆ ರೀತಿ ರೂಪುಗೊಳ್ಳುವ ಸರ್ಕಾರವು ಹೆಚ್ಚು ದಿನ ಇರಲು ಸಾಧ್ಯವಿಲ್ಲ. ಸರ್ವಾಧಿಕಾರಿ ಮೋದಿಯನ್ನು ಸ್ವತಃ ಬಿಜೆಪಿಯೇ ಸಹಿಸಿಕೊಳ್ಳುವುದು ಸುಲಭವಲ್ಲ. ಹಾಗಿರುವಾಗ ಉಳಿದವರು ಸಹಿಸಿಕೊಳ್ಳುತ್ತಾರೆಯೇ ಎಂಬ ಪ್ರಶ್ನೆ ಇದ್ದೇ ಇರುತ್ತದೆ. ಹಾಗಿದ್ದರೂ ಆತಂಕಪಡಬಹುದಾದ ಒಂದು ಅಂಶವಿದೆ. ಇಂತಹ ಪರಿಸ್ಥಿತಿಯಲ್ಲಿ ಉಂಟಾಗುವ ಅಸ್ಥಿರತೆಯು ಮುಂದಿನ ಚುನಾವಣೆಯಲ್ಲಿ ಸ್ಥಿರ ಸರ್ಕಾರವನ್ನು ತರಬೇಕು ಎನ್ನುವ ವಾದಕ್ಕೆ ಹೆಚ್ಚಿನ ಬಲ ತರುತ್ತದೆ. ಆಗ ಎನ್‌ಡಿಎಗೆ ಸಂಪೂರ್ಣ ಬಹುಮತ ಬಂದುಬಿಡುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. 1996 ಮತ್ತು 1998ರಲ್ಲಿ ಬಂದ ಅಸ್ಥಿರ ಸರ್ಕಾರಗಳು, 1999ರಲ್ಲಿ ಎನ್‌ಡಿಎಗೆ ಬಹುಮತ ತಂದುಕೊಟ್ಟಿದ್ದವು ಎಂಬುದನ್ನು ಮರೆಯಲಾಗದು.


ಹಾಗಾಗಿಯೇ ಅಕ್ಟೋಬರ್‌ನಲ್ಲಿ ಹೇಳಿದ್ದ [illegible] ಈಗಲೂ ನಿಜ. ಇದು ಸೆಮಿಫೈನಲ್. ಫೈನಲ್ ಬಹುಶಃ ಎರಡು ವರ್ಷಗಳ ನಂತರ.

● ಎಚ್.ವಿ. ವಾಸು

ರಾಜ್ಯದಲ್ಲಿ ಕಾಂಗ್ರೆಸ್ ಮುಂದೆ...

16 ◀◀

ಪುತ್ರಿ ಗೀತಾ ಅವರಿಗೆ ಈಡಿಗರ ಬೆಂಬಲವಿದೆ. ಜೊತೆಗೆ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಬದಲಾಗಿ ಜೆಡಿಎಸ್‌ಅನ್ನು ಬೆಂಬಲಿಸಲು ಮುಸಲ್ಮಾನ ಸಮುದಾಯದ ನಾಯಕರು ಕಳೆದ ಶನಿವಾರ ನಿರ್ಧರಿಸಿದ್ದಾರೆ. ಹಾಗೊಮ್ಮೆ ಬಹುಸಂಖ್ಯಾತ ಈಡಿಗರು, ಅಲ್ಪಸಂಖ್ಯಾತರು ಮತ್ತು ಒಕ್ಕಲಿಗರ ಮತಗಳು ಗೀತಾ ಅವರಿಗೆ



ಯಡಿಯೂರಪ್ಪ ಗೀತಾ ಮಂಜುನಾಥ್

ಸಾರಾಸಗಟಾಗಿ ಬಿದ್ದರೆ ಇಲ್ಲೊಂದು ಅಚ್ಚರಿಯ ಫಲಿತಾಂಶವನ್ನು ನಿರೀಕ್ಷಿಸಬಹುದು. ಸದ್ಯ ಪೈಪೋಟಿ ಇರುವುದು ಗೀತಾ ಮತ್ತು ಯಡಿಯೂರಪ್ಪನವರ ನಡುವೆ.

ಉಡುಪಿ-ಚಿಕ್ಕಮಗಳೂರು

ಎಸ್ಸಿ ಎಸ್ಟಿ 2.5 ಲಕ್ಷ, ಬಿಲ್ಲವ-ಈಡಿಗ 2.75 ಲಕ್ಷ, ಬಂಟರು 3.7 ಲಕ್ಷ, ಅಲ್ಪಸಂಖ್ಯಾತರು 2 ಲಕ್ಷ, ಒಕ್ಕಲಿಗರು 2 ಲಕ್ಷ




ಜಯಪ್ರಕಾಶ್ ಹೆಗ್ಡೆ ಶೋಭಾ ಧನಂಜಯಕುಮಾರ್

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಮೂರು ಸ್ಥಾನಗಳನ್ನು ಗೆದ್ದಿದ್ದರೆ, ಜೆಡಿಎಸ್‌ನ ನಿಂಗಯ್ಯ ಮತ್ತು ಸ್ವತಂತ್ರ ಅಭ್ಯರ್ಥಿಯಾಗಿ ಹಾಲಾಡಿ ಶ್ರೀನಿವಾಸ ಶೆಟ್ಟಿ ಗೆದ್ದಿದ್ದರು. ಆದರೆ ಅದಕ್ಕೂ ಸ್ವಲ್ಪ ತಿಂಗಳ ಮುನ್ನ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಸಜ್ಜನ ಜಯಪ್ರಕಾಶ್ ಹೆಗ್ಡೆ ಸುಲಭವಾಗಿ ಜಯ ಸಾಧಿಸಿದ್ದರು. ಈಗ ಅವರ ವಿರುದ್ಧ ಬಿಜೆಪಿಯ ಶೋಭಾ ಕರಂದ್ಲಾಜೆ ಮತ್ತು ಬಿಜೆಪಿ ಹೊರಗಿಟ್ಟಿರುವ ಧನಂಜಯ ಕುಮಾರ್ ಕಣಕ್ಕೆ ಇಳಿದಿದ್ದಾರೆ. ಧನಂಜಯ ಕುಮಾರ್ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದು ಕರಂದ್ಲಾಜೆಗೆ ಕೊಕ್ಕು ಹಾಕಲಿಕ್ಕೆ. ಅರೆ ಭಾಷೆ ಗೌಡತಿಯಾದ ಕರಂದ್ಲಾಜೆ ಇಲ್ಲಿಗೆ ಹೊಸಬರು ಆಗಿರುವುದೂ ಅವರಿಗೆ ಹಿನ್ನಡೆಯಾಗಲಿದೆ. ಜೊತೆಗೆ ಬಿಜೆಪಿಯ ಸಿ.ಟಿ.ರವಿ ಮತ್ತು ಸುನಿಲ್ ಕುಮಾರ್ ಆಕೆಯ ವಿರುದ್ಧ ಒಳಗಿನಿಂದಲೇ ಕೆಲಸ ಮಾಡುತ್ತಿದ್ದಾರೆ.

ಹೆಗ್ಡೆ ಇಲ್ಲಿ ಸಾಕಷ್ಟು ಜನಪರ ಕೆಲಸ ಮಾಡಿ ಜನರಿಗೆ ಹತ್ತಿರವಾಗಿದ್ದಾರೆ. ಸದ್ಯ ಅವರೇ ಸ್ಪರ್ಧೆಯಲ್ಲಿ ಮುಂದಿದ್ದಾರೆ.

ಹಾಸನ

ಒಕ್ಕಲಿಗರು 4.5 ಲಕ್ಷ, ಲಿಂಗಾಯತರು 3.25 ಲಕ್ಷ, ಕುರುಬರು 2.25 ಲಕ್ಷ, ಎಸ್ಸಿ ಮತ್ತು ಎಸ್ಟಿ 2.5 ಲಕ್ಷ, ಇತರೆ 1.5 ಲಕ್ಷ.




ದೇವೇಗೌಡ ವಿಜಯಶಂಕರ್ ಮಂಜು

ಜೆಡಿಎಸ್ ವರಿಷ್ಠ ದೇವೇಗೌಡರ ಕರ್ಮಭೂಮಿಯಾದ ಹಾಸನದಲ್ಲಿ ಚುನಾವಣೆ ಎಂಬ ಪ್ರಹಸನ ನಡೆಯುತ್ತಿದೆ ಎಂದರೆ ತಪ್ಪಾಗಲಾರದು. ಯಾಕೆಂದರೆ ಇಲ್ಲಿರುವ ಎಂಟು ವಿಧಾನ ಸಭಾ ಕ್ಷೇತ್ರಗಳಲ್ಲಿ ಕಳೆದ ವರ್ಷ ಕಾಂಗ್ರೆಸ್ ಎರಡರಲ್ಲಿ ಗೆದ್ದಿದ್ದರೆ ಮಿಕ್ಕ ಆರರಲ್ಲಿ ಜೆಡಿಎಸ್ ಗೆಲುವು ಸಾಧಿಸಿತ್ತು.

ಈ ಬಾರಿ ದೇವೇಗೌಡರ ವಿರುದ್ಧ ಸ್ಪರ್ಧಿಸಲು ಸರಿಯಾದ ಅಭ್ಯರ್ಥಿ ಸಿಗದಿದ್ದರಿಂದ ಕಾಂಗ್ರೆಸ್ ಅರಕಲಗೂಡು ಶಾಸಕ ಎ.ಮಂಜು ಅವರನ್ನು ಕಣಕ್ಕಿಳಿಸಿದೆ. ಅದಕ್ಕಿಂತ ಹಾಸ್ಯಾಸ್ಪದವಾಗಿ ಬಿಜೆಪಿ ಮಾಜಿ ಸಂಸದ ವಿಜಯಶಂಕರ್ ಅವರನ್ನು ಮೈಸೂರಿನಿಂದ ಸ್ಥಳಾಂತರಿಸಿ ಇಲ್ಲಿ ನಿಲ್ಲಿಸಿದೆ. ಬಿಜೆಪಿಗಳ ಲೆಕ್ಕ 'ಮೋದಿ ಅಲೆ' ವರ್ಕ್ ಔಟ್ ಆಗಿ ಕುರುಬರ ಮತಗಳು ಕುರುಬ ಸಮುದಾಯದ ವಿಜಯಶಂಕರ್ ಅವರಿಗೆ ಲಭಿಸಿದರೆ ಗೆಲುವು ಸಿಗುತ್ತದೆ ಎಂಬುದೇ ಆಗಿದೆ. ಆದರೆ ಇಲ್ಲಿ ದೇವೇಗೌಡರನ್ನು ಸೋಲಿಸುವುದು ಕಷ್ಟಸಾಧ್ಯ.

ದಕ್ಷಿಣ ಕನ್ನಡ

ಬಿಲ್ಲವರು 3.3 ಲಕ್ಷ, ಮುಸ್ಲಿಮರು 3.15 ಲಕ್ಷ, ಕ್ರೈಸ್ತರು 3.75 ಲಕ್ಷ, ಬಂಟರು 3.70 ಲಕ್ಷ, ಪರಿಶಿಷ್ಟರು 1.20 ಲಕ್ಷ



ಜನಾರ್ದನ ಪೂಜಾರಿ ನಳಿನ್ ಕುಮಾರ್ ಕಟೀಲ್

ಇಲ್ಲಿ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ಜನಾರ್ದನ ಪೂಜಾರಿ ಬರೋಬ್ಬರಿ ಒಂಬತ್ತನೆ ಬಾರಿಗೆ ಸ್ಪರ್ಧಿಸುತ್ತಿದ್ದಾರೆ. ಕಳೆದ ನಾಲ್ಕು ಬಾರಿ ಸತತವಾಗಿ ಸೋತಿರುವ ಪೂಜಾರಿ ಅವರಿಗೆ ಇದು ಕಡೆಯ ಚುನಾವಣಾ ಪರೀಕ್ಷೆಯಾಗಿದೆ. ಪೂಜಾರಿ ಹತ್ತಾರು ವರ್ಷಗಳಿಂದ ಜನಪರ ರಾಜಕೀಯ ಮಾಡಿಕೊಂಡು ಬಂದಿರುವವರು.

ಅವರ ಅದೃಷ್ಟಕ್ಕೆ ಮತ್ತು ಬಿಜೆಪಿಯ ದುರಾದೃಷ್ಟಕ್ಕೆ ಅವರ ವಿರುದ್ಧ ನಳಿನ್ ಕುಮಾರ್ ಕಟೀಲ್ ಎಂಬ ಆರೆಸ್ಸೆಸ್ ವ್ಯಕ್ತಿಯನ್ನು ಬಿಜೆಪಿ ಮತ್ತೆ ಚುನಾವಣಾ ಕಣಕ್ಕಿಳಿಸಿದೆ. ಕಳೆದ ಐದು ವರ್ಷಗಳ ಕಾಲ ಸಂಸದರಾಗಿದ್ದ ಕಟೀಲ್ ಕ್ಷೇತ್ರಕ್ಕೆ ಕಡಿದು ಕಟ್ಟೆಹಾಕಿದ್ದು ಅಷ್ಟರಲ್ಲೇ ಇದೆ. ಇದರ ಜೊತೆಗೆ ಬಿಜೆಪಿ ರಾಜ್ಯದಲ್ಲಿ ಅಧಿಕಾರ ಹಿಡಿದಿದ್ದಾಗ ದಕ್ಷಿಣ ಕನ್ನಡದಲ್ಲಿ ಹಿಂದೂ ಕೋಮುವಾದಿಗಳ ಆರ್ಭಟ ಅವರ ಅಪ್ಪಟ ಬೆಂಬಲಿಗರನ್ನೂ ಬೆಚ್ಚಿಬೀಳಿಸಿತ್ತು. ಈ ಕಾರಣಕ್ಕಾಗಿಯೇ ಹೋದ ವರ್ಷದ ವಿಧಾನ ಸಭಾ ಚುನಾವಣೆಯಲ್ಲಿ ಇಲ್ಲಿರುವ ಎಂಟು ಕ್ಷೇತ್ರಗಳಲ್ಲಿ ಬಿಜೆಪಿ ಒಂದನ್ನು ಮಾತ್ರ ಗೆದ್ದಿತ್ತು.

ಈಗ ದಕ್ಷಿಣ ಕನ್ನಡದಿಂದ ಆಯ್ಕೆಯಾಗಿರುವ ಶಾಸಕರಲ್ಲಿ ಅಭಯಚಂದ್ರ, ಯು.ಟಿ.ಖಾದರ್ ಮತ್ತು ರಮಾನಾಥ್ ರೈ ಮಂತ್ರಿಗಳಾಗಿದ್ದಾರೆ. ಪೂಜಾರಿಯನ್ನು ಗೆಲ್ಲಿಸುವ ಹೊಣೆ ಅವರೆಲ್ಲರ ಹೆಗಲ ಮೇಲಿದೆ. ಇಲ್ಲಿ ಮೋದಿ ಬಂದುಹೋದರೂ ಕಲ್ಲಡ್ಕ ಪ್ರಭಾಕರನ ಹಲ್ಕಟ್‌ಗಿರಿ, ಹಸಿ ಹಸಿ ಮತ್ತು ಕ್ರೂರ ಕೋಮುವಾದ ಮತ್ತು ಅವನ ಬಿಜೆಪಿ ಪಟಾಲಂನ ಅಸಹ್ಯ ವರ್ತನೆಯಿಂದಾಗಿ ಇಲ್ಲಿನ ಯುವಕರು ದೂರ ಸರಿದಿರುವುದು ಪೂಜಾರಿ ಅವರಿಗೆ ಪ್ಲಸ್ ಪಾಯಿಂಟ್ ಆಗಲಿದೆ. ಈವರೆಗೆ ಬಂದಿರುವ ಎಲ್ಲಾ ಸರ್ವೆಗಳಲ್ಲೂ ಮುಸ್ಲಿಮರು ಮಾತ್ರವಲ್ಲದೆ ಬಿಜೆಪಿಯ ಸಾಂಪ್ರದಾಯಿಕ ಮತಬ್ಯಾಂಕ್‌ಗಳಾಗಿದ್ದ ಬಂಟರು ಮತ್ತು ಮೊಗವೀರರು ದೂರ ಸರಿಯುತ್ತಿರುವುದನ್ನು ಎತ್ತಿ ತೋರಿಸಿವೆ. ಪೂಜಾರಿಯವರು ಬಿಲ್ಲವರೇ ಆಗಿರುವುದರಿಂದ, ಕಳೆದ ಬಾರಿ ಸೋತಿರುವ ಸಿಂಪಥಿಯು ಇರುವುದರಿಂದ ಪೂಜಾರಿಯವರ ಗೆಲುವು ಹೆಚ್ಚು ಕಡಿಮೆ ಖಚಿತವಾಗಿದೆ. ಜೊತೆಗೆ ಕಾಂಗ್ರೆಸ್‌ನಲ್ಲೆ ನಡೆಯುತ್ತಿದ್ದ ಒಳಗುದ್ದುಗಳೂ ಈ ಬಾರಿ ಕಡಿಮೆಯಾಗಿದೆ.

ಚಿತ್ರದುರ್ಗ

ಎಸಿ-ಎಸ್ಟಿ 3.5 ಲಕ್ಷ, ನಾಯಕರು 2.5 ಲಕ್ಷ, ಕುಂಚಟಿಗರು 2 ಲಕ್ಷ, ಮುಸ್ಲಿಮರು 3 ಲಕ್ಷ, ಲಿಂಗಾಯತರು 1.25 ಲಕ್ಷ, ಗೊಲ್ಲರು 1.75 ಲಕ್ಷ

ಪರಿಶಿಷ್ಟ ಜಾತಿಗೆ ಮೀಸಲಾದ ಈ ಕ್ಷೇತ್ರದಿಂದ ಕಳೆದ ಬಾರಿ ಬಿಜೆಪಿಯ



ಚಂದ್ರಪ್ಪ ಗೂಳಿಹಟ್ಟಿ ಜನಾರ್ದನ ಸ್ವಾಮಿ


ಜನಾರ್ದನ ಸ್ವಾಮಿ ಅಚಾನಕ್ಕಾಗಿ ಗೆದ್ದಿದ್ದರು. ಆಗ ಯಡ್ಡಿ ಪರವಾದ ಹವಾ ಇತ್ತಲ್ಲದೆ, ವಿದೇಶದಿಂದ ಜನರ ಸೇವೆಗೆಂದು ಬಂದಿದ್ದ ಸ್ವಾಮಿ ಇತರ ರಾಜಕಾರಣಿಗಳಿಗಿಂತ ವಿಭಿನ್ನವಾಗಿ ಕಂಡಿದ್ದು ಅವರ ಗೆಲುವಿಗೆ ನೆರವಾಗಿತ್ತು.

ಆದರೀಗ ಪರಿಸ್ಥಿತಿ ಬದಲಾಗಿದೆ. ಇಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಐದು ಕಾಂಗ್ರೆಸ್ ಪಾಲಾಗಿವೆ. ಈ ಬಾರಿ ಸ್ವಾಮಿ ವಿರುದ್ಧ ಕಾಂಗ್ರೆಸ್‌ನಿಂದ ಬಿ.ಎನ್.ಚಂದ್ರಪ್ಪ ಮತ್ತು ಜೆಡಿಎಸ್‌ನಿಂದ ಗೂಳಿಹಟ್ಟಿ ಶೇಖರ್ ಸ್ಪರ್ಧಿಸುತ್ತಿದ್ದಾರೆ. ಮಾದಿಗ ಸಮುದಾಯ, ನಾಯಕರು, ನಂತರದಲ್ಲಿ ಗೊಲ್ಲರು ಮತ್ತು ಕುಂಚಟಿಗ ಒಕ್ಕಲಿಗರು ಹಾಗೂ ಭೋವಿಗಳು ನಂತರದ ಸ್ಥಾನದಲ್ಲಿದ್ದಾರೆ. ಜೆಡಿಎಸ್‌ನ ಅಧ್ಯಕ್ಷ ಕೃಷ್ಣಪ್ಪ ಗೊಲ್ಲರಾಗಿರುವುದು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಭೋವಿ ಸಮುದಾಯದ ಗೂಳಿಹಟ್ಟಿ ಶೇಖರ್‌ಗೆ ಗೊಲ್ಲರ ಮತಗಳನ್ನು ತಂದುಕೊಡಬಹುದಾದರೂ, ಇಬ್ಬರು ಭೋವಿಗಳು ಅಖಾಡದಲ್ಲಿರುವುದರಿಂದ ಮತ ವಿಭಜನೆಯಾಗಿ ಮಾದಿಗ ಸಮುದಾಯದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಚಂದ್ರಪ್ಪ ಅವರಿಗೆ ಲಾಭವಾಗಬಹುದು. ಚಂದ್ರಪ್ಪ ಮೂಡಿಗೆರೆಯವರಾಗಿದ್ದು ಸ್ಥಳೀಯರಲ್ಲ ಎಂಬ ಅಸಮಾಧಾನ ಸ್ಥಳೀಯ ಕಾಂಗ್ರೆಸ್ಸಿನವರಿಗಿದ್ದರೂ ಅದಕ್ಕಿಂತ ಹೆಚ್ಚಿನ ಅಸಮಾಧಾನ ಬಿಜೆಪಿ ಪಾಳಯದಲ್ಲಿದೆ. ಕೆಜೆಪಿ ಮತ್ತು ಬಿಎಸ್‌ಆರ್ ಪಕ್ಷದವರನ್ನು ಬಿಜೆಪಿ ಹೀನಾಯವಾಗಿ ನಡೆಸಿಕೊಳ್ಳುತ್ತಿದೆ ಎಂಬ ಅಸಮಾಧಾನ ಈ ಬಾರಿ ಜನಾರ್ದನಸ್ವಾಮಿಗೆ ಮಡಿಲಿನ ಕೆಂಡದಂತೆ ಕಾಡುತ್ತಿದೆ. ಜಾಫರ್ ಶರೀಫ್ ಅವರ ತವರೂರು ಚಿತ್ರದುರ್ಗವೇ ಆಗಿರುವುದು ಮತ್ತು ಅವರಿಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿರುವುದು ಸ್ವಲ್ಪ ಮುಸ್ಲಿಮರಲ್ಲಿ ಅಸಮಾಧಾನ ಮೂಡಿಸಿದ್ದರೂ ಒಟ್ಟಾರೆ ರಾಜಕಾರಣದಲ್ಲಿ ಸದ್ಯಕ್ಕೆ ಕಾಂಗ್ರೆಸ್‌ಗೆ ಮತ ಹಾಕುವ ಅನಿವಾರ್ಯತೆಯನ್ನು ವ್ಯಕ್ತಪಡಿಸುತ್ತಾರೆ. ಹೀಗಾಗಿ ಇಲ್ಲಿನ ಮುಸ್ಲಿಮರು, ಬೇಡರು, ದಲಿತರು ಕಾಂಗ್ರೆಸ್ ಕೈಹಿಡಿದರೆ ಚಂದ್ರಪ್ಪ ಗೆಲ್ಲುತ್ತಾರೆ. ಸದ್ಯ ಈ ಮೂವರ ನಡುವೆ ಟೈಟ್ ಫೈಟ್ ನಡೆಯುತ್ತಿದೆ.

ತುಮಕೂರು

ಲಿಂಗಾಯತರು 3.5 ಲಕ್ಷ, ಒಕ್ಕಲಿಗರು 3.25 ಲಕ್ಷ, ಹಿಂದುಳಿದ ವರ್ಗದವರು 4 ಲಕ್ಷ, ಪರಿಶಿಷ್ಟರು 2.5 ಲಕ್ಷ, ಮುಸ್ಲಿಮರು 1.5 ಲಕ್ಷ.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮೂರು ಕ್ಷೇತ್ರಗಳನ್ನು




ಬಸವರಾಜ್ ಕೃಷ್ಣಪ್ಪ ಮುದ್ದಹನುಮೇಗೌಡ

ಗೆದ್ದಿದ್ದರೆ ಜೆಡಿಎಸ್ ನಾಲ್ಕು ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿತ್ತು. ಲಿಂಗಾಯತರು ಇಲ್ಲಿ ಪ್ರಭಾವಿಗಳಾಗಿದ್ದರೂ ಬಿಜೆಪಿ ಒಂದು ಕ್ಷೇತ್ರದಲ್ಲಿ ಮಾತ್ರ ಗೆದ್ದಿತ್ತು.

ಈಗ ಈ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ನಡೆಯುತ್ತಿದೆ. ಕಾಂಗ್ರೆಸ್ ಅಭ್ಯರ್ಥಿ ಮುದ್ದಹನುಮೇಗೌಡ ಒಕ್ಕಲಿಗರಾಗಿದ್ದರೆ, ಬಿಜೆಪಿಯ ಬಸವರಾಜ್ ಲಿಂಗಾಯತ ಸಮುದಾಯದವರು ಮತ್ತು ಜೆಡಿಎಸ್ ಅಭ್ಯರ್ಥಿ ಕೃಷ್ಣಪ್ಪ ಗೊಲ್ಲರು. ಇಲ್ಲಿ ಜಾತಿಯನ್ನಾಧರಿಸಿ ಮತಗಳ ಚಲಾವಣೆಯಾಗುವುದರಿಂದ ಈ ಮೂವರ ನಡುವೆ ಅಂತಿಮವಾಗಿ ಯಾರು ಗೆಲ್ಲಲಿದ್ದಾರೆ ಎಂದು ಹೇಳುವುದು ಕಷ್ಟ.

ಮಂಡ್ಯ

ಒಕ್ಕಲಿಗರು 8.2 ಲಕ್ಷ, ದಲಿತರು 2.46 ಲಕ್ಷ, ಮುಸ್ಲಿಮರು 1.14 ಕುರುಬರು 1.31 ಲಕ್ಷ, ಲಿಂಗಾಯತರು 1.31 ಲಕ್ಷ, ಎಸ್ಸಿ ಮತ್ತು ಎಸ್ಟಿ 2.62 ಲಕ್ಷ, ಇತರೆ 1.80 ಲಕ್ಷ.



ರಮ್ಯ ಪುಟ್ಟರಾಜು ಶಿವಲಿಂಗಯ್ಯ

ಒಕ್ಕಲಿಗರ ಜಿಲ್ಲೆಯಾದ ಮಂಡ್ಯದಲ್ಲಿ ಸ್ಪರ್ಧೆ ಎಂಬುದು ಸದಾ ಇರುವುದು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ಮಾತ್ರ. ಇಲ್ಲಿ ಬಿಜೆಪಿ ಲೆಕ್ಕಕ್ಕೆ ಇಲ್ಲ. ಆದರೂ ಆ ಪಕ್ಷ ಶಿವಲಿಂಗಯ್ಯ ಎಂಬ ಹಣದ ಆಸಾಮಿಯನ್ನು ಕಣಕ್ಕಿಳಿಸಿದೆ. ಈಗಾಗಲೇ ಶಿವಲಿಂಗಯ್ಯ ಚುನಾವಣೆಯಲ್ಲಿ ಚೆಲ್ಲಿರುವ ಹಣಕ್ಕೆ ಸಮನಾದ ಮತಗಳೂ ಆತನಿಗೆ ಬರುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಾಗಿದೆ.

ಇಲ್ಲಿ ಪೈಪೋಟಿ ಇರುವುದು ಕಾಂಗ್ರೆಸ್‌ನ ರಮ್ಯಾ ಮತ್ತು ಜೆಡಿಎಸ್‌ನ ಪುಟ್ಟರಾಜು ನಡುವೆ. ಕಳೆದ ಉಪಚುನಾವಣೆಯಲ್ಲಿ ಈ ಕ್ಷೇತ್ರ ಜೆಡಿಎಸ್ ಕೈತಪ್ಪಿ ಕಾಂಗ್ರೆಸ್ ಪಾಲಾಗಿತ್ತು. ಈ ಕಾರಣಕ್ಕೆ ಈಗ ಇವೆರಡೂ ಪಕ್ಷಗಳು ತಮ್ಮೆಲ್ಲ ಶ್ರಮವನ್ನು ಹಾಕಿ ಇದನ್ನು ದಕ್ಕಿಸಿಕೊಳ್ಳಲು ಯತ್ನಿಸುತ್ತಿವೆ. ಸರ್ವೋದಯ ಪಕ್ಷದ ರೈತ ನಾಯಕ ಪುಟ್ಟಣ್ಣಯ್ಯ ಈಗಾಗಲೇ ರಮ್ಯಾ ಪರ ವಹಿಸಿರುವುದರಿಂದ ಅದು ಆಕೆಗೆ ಪ್ಲಸ್ ಪಾಯಿಂಟ್ ಆಗಿದೆ. ಅದೆಲ್ಲಕ್ಕಿಂತ ಮುಖ್ಯವಾಗಿ ಅಂಬರೀಷ್ ವಾಪಸ್ ಬಂದಿದ್ದು ಮತ್ತು ಸ್ಥಳೀಯವಾಗಿರುವ ಭಿನ್ನಮತವನ್ನು ಸ್ವಲ್ಪಮಟ್ಟಿಗೆ ಶಮನ ಮಾಡಿರುವುದು ರಮ್ಯಾಗೆ ನೆರವಾಗುತ್ತದೆ. ಕಾಂಗ್ರೆಸ್ ಮತ್ತು ಪುಟ್ಟರಾಜು ನಡುವೆ ಟೈಟ್ ಫೈಟ್ ಇದ್ದು ರಮ್ಯಾ ಕಳೆದ ಬಾರಿಗಿಂತ ಕಡಿಮೆ ಅಂತರದಲ್ಲಿ ಗೆಲ್ಲುವ ಸಾಧ್ಯತೆ ಇದೆ.

ಮೈಸೂರು

ಒಕ್ಕಲಿಗರು 3.5 ಲಕ್ಷ, ಮುಸ್ಲಿಮರು 2.6 ಲಕ್ಷ, ಕುರುಬರು 1.6 ಲಕ್ಷ, ಲಿಂಗಾಯತರು 1.3 ಲಕ್ಷ, ಎಸಿ 2 ಲಕ್ಷ, ಕ್ರಿಶ್ಚಿಯನ್ನರು 45,000, ಬ್ರಾಹ್ಮಣರು 92,000, ಕುರುಬರನ್ನು ಹೊರತುಪಡಿಸಿ ಇತರೆ ಹಿಂದುಳಿದವರು 2.6 ಲಕ್ಷ, ಈಡಿಗರು 36,000, ಕೊಡವರು 40,000.



ವಿಶ್ವನಾಥ್ ಪ್ರತಾಪ್ ಸಿಂಹ ಚಂದ್ರಶೇಖರಯ್ಯ


ಇಲ್ಲಿನ ರೇಸ್‌ನಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿಶ್ವನಾಥ್ ಮುಂದಿದ್ದಾರೆ. ಬಿಜೆಪಿ ಅಭ್ಯರ್ಥಿ ಪ್ರತಾಪ್ ಸಿಂಹ 'ಗೌಡ' ಎಂದು ತಮ್ಮ ಹೆಸರಿಗೆ ಸೇರಿಸಿಕೊಂಡು ಒಕ್ಕಲಿಗರ ಮತಗಳನ್ನು ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಜೆಡಿಎಸ್ ನಿವೃತ್ತ ನ್ಯಾಯಾಧೀಶ ಚಂದ್ರಶೇಖರಯ್ಯ ಅವರನ್ನು ಯಾಕೆ ಕಣಕ್ಕೆ ಇಳಿಸಿದೆ ಎಂಬುದು ಇವತ್ತಿಗೂ ನಿಗೂಢವಾಗಿದೆ.

ಹೇಳಿ ಕೇಳಿ ಇದು ಸಿದ್ದರಾಮಯ್ಯನವರ ಜಿಲ್ಲೆ, ಇಲ್ಲಿ ಅವರು ಶತಾಯಗತಾಯ ವಿಶ್ವನಾಥರನ್ನು ಗೆಲ್ಲಿಸಬೇಕಿದೆ. ಇಲ್ಲಿ ಗಮನೀಯವಾಗಿರುವ ಕುರುಬರು, ಮುಸ್ಲಿಮರು ಮತ್ತು ಅಹಿಂದ ವರ್ಗದ ಇತರೆ ಸಮುದಾಯಗಳು ಕಾಂಗ್ರೆಸ್ ಕೈಹಿಡಿಯಲಿರುವುದರಿಂದ ವಿಶ್ವನಾಥ್ ಗೆಲ್ಲಲಿದ್ದಾರೆ ಎಂದು ಹೇಳಬಹುದು.

ಚಾಮರಾಜನಗರ

ಲಿಂಗಾಯತರು 3.5 ಲಕ್ಷ, ದಲಿತರು 3 ಲಕ್ಷ, ನಾಯಕರು 1 ಲಕ್ಷ, ಉಪ್ಪಾರರು 1.5 ಲಕ್ಷ, ಒಕ್ಕಲಿಗರು 1.3 ಲಕ್ಷ

ಚಾಮರಾಜನಗರ ಕಾಂಗ್ರೆಸ್ ಪಕ್ಷದ ಭದ್ರಕೋಟೆ. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಇಲ್ಲಿರುವ ಎಂಟು ಕ್ಷೇತ್ರಗಳಲ್ಲಿ ಏಳನ್ನು ಗೆದ್ದಿದೆ.




ಧ್ರುವನಾರಾಯಣ ಎ.ಆರ್.ಕೃಷ್ಣಮೂರ್ತಿ ಶಿವಣ್ಣ

ಅವರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದ್ದಾರಲ್ಲದೆ ಈಗ ಮಂತ್ರಿಗಳಾಗಿರುವ ವಿ.ಶ್ರೀನಿವಾಸ್ ಪ್ರಸಾದ್, ಡಾ. ಎಚ್.ಸಿ.ಮಹದೇವಪ್ಪ ಮತ್ತು ಮಹದೇವ ಪ್ರಸಾದ್ ಇದ್ದಾರೆ. ಈ ಕಾರಣಕ್ಕೆ ಇದು ಕಾಂಗ್ರೆಸ್‌ಗೆ ಪ್ರತಿಷ್ಠೆಯ ಕ್ಷೇತ್ರವಾಗಿದೆ.

ಕಾಂಗ್ರೆಸ್ ಅಭ್ಯರ್ಥಿ ಧ್ರುವನಾರಾಯಣ ಅವರು ಮತ್ತೆ ಕಣಕ್ಕೆ ಧುಮುಕಿದ್ದಾರೆ. ಅವರ ವಿರುದ್ಧ ಬಿಜೆಪಿಯ ಎ.ಆರ್.ಕೃಷ್ಣಮೂರ್ತಿ ಮತ್ತು ಜೆಡಿಎಸ್‌ನ ಕೋಟೆ ಶಿವಣ್ಣ ಸ್ಪರ್ಧಿಸುತ್ತಿದ್ದಾರೆ. ತ್ರಿಕೋನ ಸ್ಪರ್ಧೆಯ ಕಾರಣದಿಂದಾಗಿಯೇ ಯಾವುದಾದರೂ ಒಂದೆರಡು ಸಮುದಾಯ ಗಟ್ಟಿಯಾಗಿ ಒಂದು ಪಕ್ಷದ ಪರ ನಿಂತರೆ ಆ ಪಕ್ಷ ಗೆಲ್ಲುವುದು ಇಲ್ಲಿನ ಇತಿಹಾಸವಾಗಿದೆ. ಬಿಎಸ್‌ಪಿಯ ಸ್ಪರ್ಧೆ ಕಾಂಗ್ರೆಸ್‌ನ ಮತವನ್ನು ಕಡಿಮೆ ಮಾಡಿದರೂ ಇತರ ಹಿಂದುಳಿದ ವರ್ಗಗಳ ಮತಗಳು ಕಾಂಗ್ರೆಸ್ ಪಾಲಾಗುತ್ತವೆ. ಹೀಗಾಗಿ ಯಾವ ನಿಟ್ಟಿನಲ್ಲಿ ನೋಡಿದರೂ ಕಾಂಗ್ರೆಸ್ ಜಯ ಸಾಧಿಸುವ ಸಾಧ್ಯತೆಗಳೇ ಹೆಚ್ಚಾಗಿ ಕಾಣಿಸುತ್ತಿವೆ.

ಬೆಂಗಳೂರು ಗ್ರಾಮಾಂತರ

ಒಕ್ಕಲಿಗರು 3 ಲಕ್ಷ, ದಲಿತರು 2 ಲಕ್ಷ, ಮುಸ್ಲಿಮರು 3 ಲಕ್ಷ, ಹಿಂದುಳಿದ ವರ್ಗ 3 ಲಕ್ಷ, ಲಿಂಗಾಯತರು 2 ಲಕ್ಷ.




ಸುರೇಶ್ ಮುನಿರಾಜು ಪ್ರಭಾಕರ ರೆಡ್ಡಿ ರವಿಕೃಷ್ಣ ರೆಡ್ಡಿ

ಇದು ಡಿ.ಕೆ.ಶಿವಕುಮಾರ್ ಮತ್ತು ಕುಮಾರಸ್ವಾಮಿಯವರ ಯುದ್ಧ ಭೂಮಿ. ಆದರೆ ಈ ಬಾರಿ ಇಲ್ಲಿ ಜೆಡಿಎಸ್ ಪ್ರಬಲ ಪೈಪೋಟಿ ಕೊಡುತ್ತಿಲ್ಲ. ಯಾಕೆಂದರೆ ಅದು ಇಲ್ಲಿನ ಸ್ಪರ್ಧೆಗೆ ನಿಲ್ಲಿಸಿರುವುದು ಪ್ರಭಾಕರ್ ರೆಡ್ಡಿ ಎಂಬಾತನನ್ನು. ಇವರು ಶ್ರೀಮಂತ ಒಕ್ಕಲಿಗ ಎಂಬುದನ್ನು ಬಿಟ್ಟರೆ ಬೇರಾವ ಹೆಗ್ಗಳಿಕೆಯೂ ಇಲ್ಲ. ಇನ್ನು ಬಿಜೆಪಿ ಕೂಡ ಮುನಿರಾಜು ಎಂಬ ಹಾಲಿ ಕಾರ್ಪೊರೇಟರ್‌ನನ್ನು ಕಣಕ್ಕೆ ಇಳಿಸಿದೆ. ಈತ ಗೆಲ್ಲುವ ಯಾವ ಲಕ್ಷಣಗಳೂ ಕಾಣಿಸುತ್ತಿಲ್ಲ.

ಈ ಎಲ್ಲ ಕಾರಣಕ್ಕೆ ಇಲ್ಲಿ ಗೆಲ್ಲಲಿರುವ ಅಭ್ಯರ್ಥಿ ಕಾಂಗ್ರೆಸ್‌ನ ಡಿ.ಕೆ. ಸುರೇಶ್ ಎಂದು ಸುಲಭವಾಗಿ ಹೇಳಬಹುದು. ಹೆಚ್ಚೆಂದರೆ ಸುರೇಶ್ ಅವರು ಉಪಚುನಾವಣೆಯಲ್ಲಿ ಪಡೆದ ಮತದಂತರ ಕಡಿಮೆ ಆಗಬಹುದಷ್ಟೇ.

ಬೆಂಗಳೂರು ಉತ್ತರ

'ಮೋದಿ ಫ್ಯಾಕ್ಟರ್' ಈ ಕ್ಷೇತ್ರದಲ್ಲಿ ಕೆಲಸ ಮಾಡುವ ಸಾಧ್ಯತೆಗಳು ಕಡಿಮೆ. ಏಕೆಂದರೆ ಇಲ್ಲಿ ಅಲ್ಪಸಂಖ್ಯಾತರ ಮತ್ತು ಒಕ್ಕಲಿಗರ ಮತಗಳೆ ಬಹಳಷ್ಟು.



ನಾರಾಯಣ ಸ್ವಾಮಿ ಸದಾನಂದ ಗೌಡ ಅಬ್ದುಲ್ ಅಜೀಂ

ಬಿಜೆಪಿ ಈ ಬಾರಿ ಎಂತಹ ನೀಚ ರಾಜಕೀಯ ಮಾಡಿತೆಂದರೆ ಕಳೆದ ಬಾರಿ ಇಲ್ಲಿಂದ ಗೆದ್ದಿದ್ದ ಡಿ.ಬಿ.ಚಂದ್ರೇಗೌಡರಿಗೆ 'ನಿಮಗೆ ಮತ್ತೆ ಸ್ಪರ್ಧಿಸುವ ಆಸೆ ಇದೆಯೇ?' ಎಂದು ಕೇಳುವಷ್ಟು ಸೌಜನ್ಯವನ್ನೂ ತೋರಲಿಲ್ಲ, ಬದಲಾಗಿ ತಮಗೇ ಈ ಸೀಟ್ ಬೇಕೆಂದು ಆರ್. ಅಶೋಕ್ ಮತ್ತು ಸದಾನಂದ ಗೌಡ ಹಾದಿರಂಪ ಬೀದಿರಂಪ ಮಾಡಿದ್ದರು. ಕೊನೆಗೂ ಅದು ಸದಾನಂದ ಗೌಡರ ಪಾಲಾಗಿದೆ.


ಆದರೆ ಸದಾನಂದ ಗೌಡ ಇಲ್ಲಿಂದ ಗೆಲ್ಲುವುದು ಕಷ್ಟವೇ. ಯಾಕೆಂದರೆ ಅವರು ಅರೆಭಾಷೆ ಗೌಡರು ಮತ್ತು ಕರಾವಳಿ ಪ್ರದೇಶದವರು. ಈ ಎರಡೂ ಕಾರಣಗಳಿಗೆ ಅವರು ಇಲ್ಲಿನ ಒಕ್ಕಲಿಗರಿಗೆ ಮತ್ತು ಸ್ಥಳೀಯರಿಗೆ ಒಪ್ಪಿಗೆ ಆಗದವರು.

ಜೆಡಿಎಸ್ ವತಿಯಿಂದ ಮಾಜಿ ಪೊಲೀಸ್ ಅಧಿಕಾರಿ ಅಬ್ದುಲ್ ಅಜೀಮ್ ಸ್ಪರ್ಧಿಸಿದ್ದಾರೆ. ಅವರನ್ನು ದೇವೇಗೌಡರು ಕಣಕ್ಕಿಳಿಸಿರುವುದು ಮುಸ್ಲಿಮರ ಮತಗಳನ್ನು ವಿಭಜಿಸಿ ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸಲೆಂದೇ ಹೊರತು ಇಲ್ಲಿಂದ ಗೆಲ್ಲುವ ಗುರಿ ಅವರಿಗಿಲ್ಲ.

ಕಾಂಗ್ರೆಸ್ ಪರವಾಗಿ ನಾರಾಯಣಸ್ವಾಮಿ ನಿಂತಿದ್ದಾರೆ. ಇವರನ್ನು ಕಣಕ್ಕಿಳಿಸಿದ್ದು ಕಾಂಗ್ರೆಸ್ ಸಚಿವ ಕೃಷ್ಣಬೈರೆ ಗೌಡ. ಇಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಮೂವರು ಶಾಸಕರನ್ನು ಹೊಂದಿದ್ದರೆ ಜೆಡಿಎಸ್ ಇಬ್ಬರು ಶಾಸಕರನ್ನು ಹೊಂದಿದೆ. ಈಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದು, ಕೃಷ್ಣಬೈರೆ ಗೌಡರ ಶ್ರಮ ಮತ್ತು ನಾರಾಯಣಸ್ವಾಮಿಯ ತಾಕತ್ತು ಕಾಂಗ್ರೆಸ್‌ಅನ್ನು ಗೆಲ್ಲಿಸುವ ನಿರೀಕ್ಷೆ ಇದೆ. ನಾರಾಯಣಸ್ವಾಮಿಯವರು ಕಾಂಗ್ರೆಸ್ ಕಾರ್ಯಕರ್ತರಿಂದ ನೇರವಾಗಿ ಆಯ್ಕೆಯಾದ ಕೆಲವೇ ಅಭ್ಯರ್ಥಿಗಳಲ್ಲಿ ಒಬ್ಬರು. ಅಲ್ಲದೇ ಸಜ್ಜನ ರಾಜಕಾರಣಿ ಎಂಬ ಹೆಸರಿದೆ. ಬಿಜೆಪಿ ಪಕ್ಷದೊಳಗಿನ ಒಳಗುದ್ದು ಮತ್ತು ಸ್ಥಳೀಯ ಬೇರುಗಳನ್ನು ಹೊಂದಿರುವ ಕಾಂಗ್ರೆಸ್ ಅಭ್ಯರ್ಥಿ ಇವೆರೆಡೂ ನಾರಾಯಣಸ್ವಾಮಿಯವರ ಪರವಾದ ಚಿತ್ರಣವನ್ನು ಒದಗಿಸುತ್ತವೆ.

ಬೆಂಗಳೂರು ಸೆಂಟ್ರಲ್

ಇಲ್ಲೂ 'ಮೋದಿ ಫ್ಯಾಕ್ಟರ್' ಕೆಲಸ ಮಾಡುವುದು ಸ್ವಲ್ಪ ಕಷ್ಟ. ಆದರೆ ಮೋದಿ ವಿರೋಧಿ ಮತಗಳು ವಿಭಜನೆಯಾಗಿ ಬಿಜೆಪಿಗೆ ನೆರವಾಗಿಬಿಡುವ ಆತಂಕವೂ ಇದೆ. ಈ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಮುಸಲ್ಮಾನರು ಮತ್ತು ಕ್ರಿಶ್ಚಿಯನ್ನರು ಇದ್ದು ಅವರೆಲ್ಲ ಬಿಜೆಪಿ ವಿರುದ್ಧ ಮತಚಲಾಯಿಸಲಿದ್ದಾರೆ. ಆದರೆ ಅದರಲ್ಲಿ ಜೆಡಿಎಸ್ ಎಷ್ಟು ಕೀಳುತ್ತದೆ ಎಂಬುದು ಮುಖ್ಯ.



ರಿಜ್ವಾನ್ ಅರ್ಷದ್ ಪಿ.ಸಿ. ಮೋಹನ್ ನಂದಿನಿ ಅಳ್ವ

ಬಿಜೆಪಿಯಿಂದ ಸ್ಪರ್ಧಿಸಿರುವ ಪಿ.ಸಿ.ಮೋಹನ್ ಸಂಸದರಾಗಿ ಕ್ಷೇತ್ರಕ್ಕೆ ಏನನ್ನೂ ಮಾಡಿಲ್ಲ ಎಂಬ ಅಸಮಾಧಾನ ಮತದಾರರಲ್ಲಿದೆ. ಜೆಡಿಎಸ್ ವತಿಯಿಂದ ನಂದಿನಿ ಆಳ್ವಾ ಅವರು ಸ್ಪರ್ಧಿಸಿದ್ದರೂ ಅವರು ಗಳಿಸುವ ಮತಗಳಿಗಿಂತ ಪಡೆದಿರುವ ಪ್ರಚಾರವೇ ಹೆಚ್ಚು ಎಂದು ಸುಲಭವಾಗಿ ಹೇಳಬಹುದು.

ಕಾಂಗ್ರೆಸ್ ಪಕ್ಷದಿಂದ ಹೊಸ ಮುಖ ರಿಜ್ವಾನ್ ಅರ್ಶದ್ ಪಾದಾರ್ಪಣೆ ಮಾಡಿದ್ದಾರೆ. ಹಿರಿಯ ಮುಸ್ಲಿಮ್ ನಾಯಕ ಜಾಫರ್ ಶರೀಫ್ ಈ ಕ್ಷೇತ್ರದ ಟಿಕೆಟ್ ತನಗೆ ಅಥವಾ ತನ್ನ ಕುಟುಂಬದವರಿಗೆ ಕೊಡಬೇಕೆಂದು ರೊಚ್ಚಿ ಹಿಡಿದಿದ್ದರು. ಆದರೆ ಕಾಂಗ್ರೆಸ್ ಅದಕ್ಕೆ ಒಪ್ಪಲಿಲ್ಲ, ಹಾಗೊಮ್ಮೆ ಕಾಂಗ್ರೆಸ್ ಇಲ್ಲಿನ ಟಿಕೆಟ್ ಅನ್ನು ಯಾವುದಾದರು ಹಿಂದೂ ಅಥವಾ ಕ್ರಿಶ್ಚಿಯನ್ ಅಭ್ಯರ್ಥಿಗೆ ಕೊಟ್ಟಿದ್ದರೆ ಮುಸಲ್ಮಾನರು ಅಸಮಾಧಾನಗೊಳ್ಳುತ್ತಿದ್ದರು. ಆದರೆ ಅದು ರಿಜ್ವಾನ್ ಪಾಲಾಗಿದ್ದರಿಂದ ಈ ಬಗ್ಗೆ ಇಲ್ಲಿನ ಮುಸಲ್ಮಾನರಲ್ಲಿ ಯಾವ ತರಹದ ಬೇಸರವೂ ಇಲ್ಲ.


ರಿಜ್ವಾನ್ ಚುನಾವಣಾ ರಾಜಕೀಯಕ್ಕೆ ಹೊಸಬರಾದರೂ ಕಾಂಗ್ರೆಸ್ ಪಕ್ಷದಲ್ಲಿ ಹೆಸರು ಮಾಡಿರುವವರು. ಸಭ್ಯ ಯುವಕ, ಕೈ ಬಾಯಿ ಶುದ್ಧ ಎಂಬ ಪ್ಲಸ್ ಪಾಯಿಂಟ್‌ಗಳಿವೆ. ಅಷ್ಟೇ ಮುಖ್ಯವಾಗಿ ಈ ಕ್ಷೇತ್ರದ ವಿಧಾನ ಸಭೆಗೆ ಸ್ಪರ್ಧಿಸಿ ಗೆದ್ದಿರುವ ಕೆ.ಜೆ.ಜಾರ್ಜ್, ರೋಶನ್ ಬೇಗ್ ಮತ್ತು ದಿನೇಶ್ ಗುಂಡುರಾವ್ ಅವರುಗಳು ಈಗ ಸಿದ್ದರಾಮಯ್ಯನವರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ. ಇವರೆಲ್ಲ ರಿಜ್ವಾನ್ ಅವರನ್ನು ಗೆಲ್ಲಿಸಲು ಶ್ರಮ ಹಾಕುತ್ತಿರುವುದರಿಂದ ಮತ್ತು ಇಲ್ಲಿ ನಿರ್ಣಾಯಕ ಪಾತ್ರ ವಹಿಸುವ ಅಲ್ಪಸಂಖ್ಯಾತರು ಕಾಂಗ್ರೆಸ್ ಪರ ಇರುವುದರಿಂದ ರಿಜ್ವಾನ್ ಗೆಲ್ಲುತ್ತಾರೆ ಎನ್ನಬಹುದು.

ಬೆಂಗಳೂರು ದಕ್ಷಿಣ

ಇದನ್ನು ಕರ್ನಾಟಕದಲ್ಲಿಯೇ ಅತಿ ಪ್ರತಿಷ್ಠಿತ ಕ್ಷೇತ್ರ ಎಂದು ಭಾವಿಸಲು ಹಲವಾರು ಐತಿಹಾಸಿಕ ಕಾರಣಗಳಿವೆ. ಅಂತೆಯೇ ಈ ಬಾರಿ ಇಲ್ಲಿಂದ ಬಿಜೆಪಿಯ ಅನಂತಕುಮಾರ್ ಐತಿಹಾಸಿಕ ಸ್ಪರ್ಧೆಯನ್ನೂ ಎದುರಿಸುತ್ತಿದ್ದಾರೆ. ಕಳೆದ ಐದು ಬಾರಿ ಸತತವಾಗಿ ಗೆದ್ದಿರುವ ಅನಂತಕುಮಾರ್ ಈ ಬಾರಿ ಸೋಲಿನ ಭೀತಿಯಲ್ಲಿದ್ದಾರೆ.

ಇಲ್ಲೂ ಕೂಡ ಕಾಂಗ್ರೆಸ್ ಅನ್ನು ಸೋಲಿಸುವ ಗುರಿಯಿಂದ ದೇವೇಗೌಡರು ರುಥ್ ಮನೋರಮಾ ಎಂಬ ಮಹಿಳೆಯನ್ನು ಜೆಡಿಎಸ್ ಪರವಾಗಿ ನಿಲ್ಲಿಸಿದ್ದಾರೆ. ಹಲವಾರು ದಶಕಗಳಿಂದ ಸ್ಲಮ್ ಮಹಿಳೆಯರೊಂದಿಗೆ ಕೆಲಸ ಮಾಡಿರುವ ರುಥ್ ಅವರು ಬಡವರ ಓಟುಗಳನ್ನು ಕೀಳುವ ಮೂಲಕ ಕಾಂಗ್ರೆಸ್ ಮುಗಿಸಲಿ ಎಂಬುದು ಗೌಡರ ಪ್ಲಾನ್.

ರುಥ್ ಅಲ್ಲದೆ ನೀನಾ ನಾಯಕ್ ಆಮ್ ಆದ್ಮಿ ಪಕ್ಷದಿಂದ ನಿಂತಿದ್ದಾರೆ. ಭ್ರಷ್ಟಾಚಾರದಿಂದ ರೋಸತ್ತಿರುವ ಮತ್ತು ಇಲ್ಲಿಯ ತನಕ ಬಿಜೆಪಿಯನ್ನು ಬೆಂಬಲಿಸುತ್ತಿದ್ದ ಜನ ಅವರನ್ನು ಬೆಂಬಲಿಸಲಿದ್ದಾರೆ. ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಪ್ರಮೋದ್ ಮುತಾಲಿಕ್ ಬಿಜೆಪಿಯ ಮತಗಳನ್ನು ಕಸಿದುಕೊಳ್ಳುವ




ನಂದನ್ ನಿಲೇಕಣಿ ಅನಂತ್‌ಕುಮಾರ್ ರುಥ್ ಮನೋರಮ

ಮೂಲಕ ಅನಂತಕುಮಾರ್‌ಗೆ ಪೆಟ್ಟುಕೊಡಲಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಯಾಗಿ ನಂದನ್ ನಿಲೇಕಣಿ ಸ್ಪರ್ಧಿಸುತ್ತಿದ್ದಾರೆ. ಇವರು ಇನ್ಫೋಸಿಸ್ ಸಂಸ್ಥೆಯ ಸ್ಥಾಪಕರು ಎಂಬುದು ಇಲ್ಲಿನ ಟೆಕ್ಕಿಗಳನ್ನು ಮೆಚ್ಚಿಸಿದರೆ, ಜಾತಿಯಲ್ಲಿ ಬ್ರಾಹ್ಮಣರು ಎಂಬುದು ಸ್ಥಳೀಯ ಬ್ರಾಹ್ಮಣರಿಗೆ ಒಪ್ಪಿಗೆ ಆಗುತ್ತದೆ.

ಇಲ್ಲಿನ ಎಂಟು ವಿಧಾನ ಸಭಾ ಕ್ಷೇತ್ರಗಳಲ್ಲಿ ನಾಲ್ಕನ್ನು ಪ್ರತಿನಿಧಿಸುತ್ತಿರುವ ಕಾಂಗ್ರೆಸ್‌ನ ರಾಮಲಿಂಗ ರೆಡ್ಡಿ, ಎಂ.ಕೃಷ್ಣಪ್ಪ, ಆರ್.ವಿ.ದೇವರಾಜ್ ಮತ್ತು ಪ್ರಿಯಾ ಕೃಷ್ಣ ಚುನಾವಣಾ ರಾಜಕೀಯದಲ್ಲಿ ಬಿಜೆಪಿಯ ಅಶೋಕ್, ಸತೀಶ್ ರೆಡ್ಡಿ, ವಿಜಯ ಕುಮಾರ್ ಮತ್ತು ರವಿಸುಬ್ರಹ್ಮಣ್ಯರಷ್ಟೇ ಪಳಗಿದವರಾಗಿದ್ದಾರೆ. ಒಟ್ಟಾರೆ ಇಲ್ಲಿ ಈ ಬಾರಿ ಅನಂತ್ ವಿರೋಧಿ ಅಲೆ ಇದ್ದು, ಕಾಂಗ್ರೆಸ್‌ನ




ನೀನಾ ನಾಯಕ್ ಪ್ರಮೋದ್ ಮುತಾಲಿಕ್

ನಿಲೇಕಣಿ ಗೆಲ್ಲುವ ನಿರೀಕ್ಷೆಗಳಿವೆ.

ಚಿಕ್ಕಬಳ್ಳಾಪುರ

ಹಿಂದುಳಿದ ವರ್ಗಗಳು 6.5 ಲಕ್ಷ, ಒಕ್ಕಲಿಗರು 4 ಲಕ್ಷ, ಬಲಿಜರು 3 ಲಕ್ಷ, ಅಲ್ಪಸಂಖ್ಯಾತರು 2 ಲಕ್ಷ

ಇಲ್ಲಿಂದ ಇಬ್ಬರು ಮಾಜಿ ಮುಖ್ಯಮಂತ್ರಿಗಳು ಸ್ಪರ್ಧಿಸುತ್ತಿರುವುದರಿಂದ ಇಲ್ಲಿನ ರಾಜಕೀಯ ವಾತಾವರಣ ಕಾವೇರಿದೆ. ಕಾಂಗ್ರೆಸ್ ಪರವಾಗಿ ವೀರಪ್ಪ ಮೊಯ್ಲಿ ಮತ್ತು ಜೆಡಿಎಸ್ ಪರವಾಗಿ ಕುಮಾರಸ್ವಾಮಿ ನಿಂತಿದ್ದಾರೆ. ಬಿಜೆಪಿಯಿಂದ



ಬಚ್ಚೇಗೌಡ ಕುಮಾರಸ್ವಾಮಿ ವೀರಪ್ಪ ಮೊಯ್ಲಿ

ಮಾಜಿ ಮಂತ್ರಿ ಬಚ್ಚೇಗೌಡ ಸ್ಪರ್ಧಿಸಿದ್ದಾರಾದರೂ ಇವರಿಬ್ಬರ ನಡುವೆ ಅವರು ಹೆಚ್ಚು ಗಮನ ಸೆಳೆಯುತ್ತಿಲ್ಲ.

ಮೊಯ್ಲಿ ಮತ್ತು ಕುಮಾರಸ್ವಾಮಿ ಇಬ್ಬರಿಗೂ ಇಲ್ಲಿ ಗೆಲ್ಲುವುದು ಅನಿವಾರ್ಯವಾಗಿದೆ. ಒಕ್ಕಲಿಗರ ಮತಗಳನ್ನು ಬಚ್ಚೆಗೌಡ ವಿಭಜಿಸಲಿದ್ದಾರೆ. ಆದ್ದರಿಂದ ಕುಮಾರಸ್ವಾಮಿ ಇತರೆ ಸಮುದಾಯಗಳ ಬೆಂಬಲವನ್ನು ಆಶಿಸುತ್ತಿದ್ದಾರೆ. ಆದರೆ ಮುಸ್ಲಿಮ್ ಸಂಘಟನೆಗಳು ಹಾಸನ ಮತ್ತು ಶಿವಮೊಗ್ಗೆಯಲ್ಲಿ ಜೆಡಿಎಸ್‌ಅನ್ನು ಬೆಂಬಲಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದರೂ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದಾಗಿ ಹೇಳಿದ್ದಾರೆ.


ಹಾಗಾಗಿ ಇಲ್ಲಿ ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ಮೊಯ್ಲಿಗೆ ಮತ ಚಲಾಯಿಸಿದರೆ ಮಾತ್ರ ಕಾಂಗ್ರೆಸ್ ಗೆಲ್ಲುತ್ತದೆ.

ಒಟ್ಟಾರೆ ಇಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆ ತೀವ್ರ ಪೈಪೋಟಿ ನಡೆಯುತ್ತಿದ್ದು ಗೆಲುವು ಯಾರದ್ದೆಂದು ಖಚಿತವಾಗಿ ಹೇಳುವುದು ಕಷ್ಟ.

ಕೋಲಾರ

ಒಕ್ಕಲಿಗರು 3.3 ಲಕ್ಷ, ಕುರುಬರು 2.1 ಲಕ್ಷ, ಎಸ್ಸಿ ಎಸ್ಟಿ 1.7 ಲಕ್ಷ, ಭೋವಿ 1.4 ಲಕ್ಷ, ಮುಸ್ಲಿಮರು 3.5 ಲಕ್ಷ

ಊರಿಗೊಬ್ಬಳೇ ಪದ್ಮಾವತಿ ಎಂಬಂತೆ ಕೋಲಾರಕ್ಕೆ ಒಬ್ಬರೇ ಮುನಿಯಪ್ಪ. ಅವರು ಸತತ ಆರು ಬಾರಿ ಇಲ್ಲಿಂದ ಲೋಕಸಭೆಗೆ ಆಯ್ಕೆಯಾಗಿದ್ದಾರೆ. ಈಗ ಏಳನೇ ಬಾರಿಗೆ ಸ್ಪರ್ಧಿಸಿದ್ದಾರೆ. ಕೇಂದ್ರ ಮಂತ್ರಿಯಾಗಿ ಮುನಿಯಪ್ಪ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ.




ಮುನಿಯಪ್ಪ ನಾರಾಯಣಸ್ವಾಮಿ

ಮುನಿಯಪ್ಪನವರ ವಿರುದ್ಧ ಜೆಡಿಎಸ್ ಕೇಶವ್ ಎಂಬುವವರನ್ನು ನಿಲ್ಲಿಸಿದೆ. ಈತ ಶ್ರೀಮಂತ ಎಂಬುದು ಮಾತ್ರ ಜನರಿಗೆ ಗೊತ್ತು. ಇನ್ನು ಬಿಜೆಪಿ ಕೂಡ ಎಂ.ನಾರಾಯಣಸ್ವಾಮಿ ಎಂಬಾತನನ್ನು ನಿಲ್ಲಿಸಿದೆ. ಇವರು ವಿಧಾನ ಸಭಾ ಚುನಾವಣೆಯಲ್ಲೇ ಬಂಗಾರುಪೇಟೆ ಕ್ಷೇತ್ರದಿಂದ ಸೋತಿದ್ದರು. ಇನ್ನು ಲೋಕ ಸಭಾ ಚುನಾವಣೆಯಲ್ಲಿ ಗೆಲ್ಲುವ ಮಾತು ಎಲ್ಲಿಂದ ಬಂದೀತು? ಮುನಿಯಪ್ಪನ ವಿರುದ್ಧ ಮುಸ್ಲಿಮರಿಗೆ ಮುನಿಸಿದ್ದದ್ದು ನಿಜವಾದರೂ ದಿನಗಳೆದಂತೆ ಮುನಿಯಪ್ಪ "ರಾಜಿ" ಮಾಡಿಕೊಂಡಂತಿದೆ. ಅಲ್ಲದೆ ಬಿಜೆಪಿಯನ್ನು ಸೋಲಿಸುವ ಅಭ್ಯರ್ಥಿಗೆ ಓಟು ಹಾಕುವುದು ಇಂದು ಬಹುತೇಕ ಮುಸ್ಲಿಂರ ಅನಿವಾರ್ಯ ರಾಜಕೀಯ ತಂತ್ರವಾಗಿರುವುದೂ ಮುನಿಯಪ್ಪನವರ ಸಹಾಯಕ್ಕೆ ಬಂದಂತಿದೆ. ಆಪ್ ಪಕ್ಷದಿಂದ ಹಿರಿಯ ಸಾಹಿತಿ, ಚಿಂತಕ ಕೋಟಿಗಾನಹಳ್ಳಿ ರಾಮಯ್ಯ ನಿಂತಿದ್ದಾರೆ. ಅದು ಸಾಂಕೇತಿಕ ಸ್ಪರ್ಧೆ ಎನ್ನುವುದಕ್ಕಿಂತ ಹೆಚ್ಚೇನು ಹೇಳಲಾಗದು.

ಇಲ್ಲಿನ ಸ್ಪರ್ಧೆಯಲ್ಲಿ ಒಂದೇ ಒಂದು ರೇಸ್ ಕುದುರೆ ಇದ್ದು, ಅದು ಖಚಿತವಾಗಿ ಕಾಂಗ್ರೆಸ್ ಪಕ್ಷದ ಮುನಿಯಪ್ಪ ಎನ್ನಬಹುದು.

● ಲಂಕೇಶ್ ತಂಡ



ಮೈಸೂರು:

ಮಿಯಾಂವ್ ಎನ್ನುತ್ತಿರುವ ಚೆಡ್ಡಿ ಸಿಂಹ, ಹಾರುತ್ತಿರುವ ಕಾಂಗ್ರೆಸ್ ಹಕ್ಕಿ



ತನ್ನ ಮೊದಲ ಶತ್ರು ಸಿದ್ದರಾಮಯ್ಯನವರನ್ನು ಮಕಾಡೆ ಮಲಗಿಸಲು ಜಾಫರ್ ಶರೀಫ್ ಅವರನ್ನು ಜಾತ್ಯತೀತ ಜನತಾದಳಕ್ಕೆ ಕರೆತರುವಲ್ಲಿ ವಿಫಲರಾಗಿರುವ ಮಾಜಿ ಪ್ರಧಾನಿ ದೇವೇಗೌಡರು ಕಾಟಾಚಾರಕ್ಕಾಗಿ 'ರೂಸ್ಟ್' ಚಂದ್ರಶೇಖರಯ್ಯನವರನ್ನು ಸ್ಪರ್ಧಾ ಕಣಕ್ಕೆ ಇಳಿಸಿ, ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಇಲ್ಲದಂತೆ ಮಾಡಿದ್ದಾರೆ. ಮೇಲ್ನೋಟಕ್ಕೆ ತ್ರಿಕೋನ ಸ್ಪರ್ಧೆ ಎಂದು ಕಂಡರೂ, ಈಗ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆಯೇ ನೇರ ಸ್ಪರ್ಧೆ ಎನ್ನುವಂತಹ ದೃಶ್ಯಾವಳಿಗಳು ಇಲ್ಲಿವೆ. ದೇವೇಗೌಡರಿಗೆ ಸರಿಯಾದ ಟೋಪಿಯನ್ನು ಶರೀಫ್ ಹಾಕಿದ್ದಾರೆ.

ಬಿಜೆಪಿಯ ಅಭ್ಯರ್ಥಿ ಪ್ರತಾಪ ಸಿಂಹ ಇಲ್ಲಿ ಸಿಂಹ ಅಲ್ಲ, ಬದಲಾಗಿ ಇಲಿ ಎಂಬಂತಾಗಿದೆ. ಹಳ್ಳಿ ಹಕ್ಕಿ ವಿಶ್ವನಾಥ ಕ್ಷೇತ್ರದಲ್ಲೆಲ್ಲಾ ಹಾರುತ್ತಲೇ ಇದ್ದಾರೆ. ಪ್ರತಾಪ ಸಿಂಹ ಬಿಜೆಪಿಯ ಅಭ್ಯರ್ಥಿ ಎಂದಾಗಲೇ ವಿಶ್ವನಾಥರಿಗೆ ಈ ಕ್ಷೇತ್ರ ಬಹುತೇಕ ನಿರಾಳವಾಗಿತ್ತು, ಆದರೆ ಜೆಡಿಎಸ್ ಅಭ್ಯರ್ಥಿ ಯಾರು ಎಂಬುದು ಆಗ ತಿಳಿದಿರಲಿಲ್ಲ. ಜಾಫರ್ ಶರೀಫರು ತಾನು ಜೆಡಿಎಸ್‌ನಿಂದ ಸ್ಪರ್ಧಿಸುತ್ತೇನೆ ಎಂದು ಹೇಳಿ ಮೆಕ್ಕಾಕ್ಕೆ ತೆರಳಿದರು. ಆದರೆ ಅಲ್ಲಿಂದಲೇ ನಯವಾಗಿ ಸ್ಪರ್ಧಿಸುವುದನ್ನು ನಿರಾಕರಿಸಿದರು. ಜೊತೆಯಲ್ಲಿ ಕಾಂಗ್ರೆಸಿಗೆ ರಾಜೀನಾಮೆ ಎಂಬ ಒಂದು ಸಣ್ಣ ಬಾಂಬ್‌ನ್ನು ಹಾಕುವುದರ ಮೂಲಕ ಕಾಂಗ್ರೆಸ್ ನಾಯಕತ್ವದ ವಿರುದ್ಧ ತನ್ನ ಅಸಮಾಧಾನವನ್ನು ತೋರಿಕೊಂಡರು. ಅಷ್ಟೇ ಅಲ್ಲದೆ ತಾನು ಜಾತ್ಯತೀತ ಪಕ್ಷಗಳಿಗೆ ಬೆಂಬಲವನ್ನು ನೀಡುವುದಾಗಿ ಘೋಷಿಸಿದರು.

ಅವರು ಇದ್ದ ಪಕ್ಷವೇ ಜಾತ್ಯತೀತ ಪಕ್ಷವಾಗಿದ್ದಾಗ ಮತ್ತೊಂದು ಜಾತ್ಯತೀತ ಪಕ್ಷವನ್ನು ಹುಡುಕಿಕೊಂಡು ಹೋಗುವ ಅಗತ್ಯವಿರಲಿಲ್ಲ. ಅವರದು ಮತ್ತು ದೇವೇಗೌಡರದು ಈ ವಿಚಾರದಲ್ಲಿ ಒಂದೇ ಮನಃಸ್ಥಿತಿ. ಅದೇನೆಂದರೆ ಸಿದ್ದರಾಮಯ್ಯನವರ ಪ್ರಾಬಲ್ಯವನ್ನು ಹೇಗಾದರೂ ಮಾಡಿ ತಗ್ಗಿಸಬೇಕು ಎಂಬುದು. ತಾನು ಕಾಂಗ್ರೆಸ್ಸಿನೊಂದಿಗೆ ಇಲ್ಲ ಎಂಬ ಸಂದೇಶ ರವಾನೆಯಾದರೆ, ಒಂದಷ್ಟು ಅಲ್ಪಸಂಖ್ಯಾತರ ಮತಗಳನ್ನು ಕಾಂಗ್ರೆಸಿನಿಂದ ಬೇರ್ಪಡಿಸಬಹುದು ಎಂಬ ಭಾವನೆ ಶರೀಫ್ ಅವರದ್ದು. ಅದೊಂದು ತರಹ ಅಕ್ಕಿ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ ಎಂಬ ಮಾತಿನಂತೆ. ತಾನು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿದ್ದೇನೆ ಎಂದು ಪ್ರಕಟಿಸಿದ ನಂತರವೂ ಶರೀಫರು ಸಿದ್ದರಾಮಯ್ಯನವರ ಬಗ್ಗೆ ಸೋನಿಯಾ ಗಾಂಧಿಗೆ ಪತ್ರ ಬರೆದಿದ್ದಾರಂತೆ. ಕಾಂಗ್ರೆಸನ್ನು ತ್ಯಜಿಸಿದ ನಂತರ, ಕಾಂಗ್ರೆಸ್ ಹಾಗೂ ಅದರ ಜನರು ಹಾಳಾದರೆ ಶರೀಫರಿಗೇನು ಕಷ್ಟ?! ಅಂದರೆ ಶರೀಫರಿಗೆ ಕಾಂಗ್ರೆಸನ್ನು ತ್ಯಜಿಸುವ ಮನಸು ಇಲ್ಲ, ಅವರಿಗೆ ಈ ಹಂತದಲ್ಲಿಯೂ ಏನಾದರೊಂದು ಚೌಕಾಸಿ ಮಾಡುವ ಉದ್ದೇಶ. ಹಾಗಾಗಿ ಪ್ರಚಾರಕ್ಕೆ ತೊಡಗಿಸಿಕೊಳ್ಳದೆ, ತಣ್ಣಗೆ ತಂಪಾದ ಊಟಿಯಲ್ಲಿ ವಾಸ್ತವ್ಯ ಹೂಡಿದ್ದಾರೆ.

ತನ್ನ ಲೆಕ್ಕಾಚಾರ ತಲೆಕೆಳಗಾದ ನಂತರ ಗೌಡರು ಮುಸ್ಲಿಂ ಮತವನ್ನು ಸೆಳೆಯುವ ದೃಷ್ಟಿಯಿಂದ ಎಸ್.ಡಿ.ಪಿ.ಐ.ಯನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿದ್ದಾರೆ. ಮುಸ್ಲಿಂ ಮತಗಳನ್ನು ಒಡೆಯುವ ಉದ್ದೇಶ ಗೌಡರದ್ದು, ಹಾಗಾಗಿ ಈ ನಡೆಯನ್ನು ಅವರು ಹಾಕುತ್ತಿದ್ದಂತೆ ಅವರಿಂದ ದೂರ ಹೋದವರು ಎಡ ಪಕ್ಷದವರು. ಆರಂಭದಿಂದಲೂ ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಪಕ್ಷಗಳು ಎಸ್.ಡಿ.ಪಿ.ಐ. ಎಂದರೆ ಗಾವುದ ದೂರ ಇವೆ. ಗೌಡರು ಬಹಿರಂಗವಾಗಿಯೂ ಮತ್ತು ಅಂತರಂಗದಲ್ಲಿಯೂ ಬಿಜೆಪಿಯೊಂದಿಗೆ ಸರಸವಾಡಿದರೂ ಕೂಡ ಅದನ್ನು ಸಹಿಸಿಕೊಂಡು ಅವರೊಂದಿಗೆ ಗುರುತಿಸಿಕೊಳ್ಳುತ್ತಿದ್ದ ಎಡಪಕ್ಷಗಳು ಎಸ್.ಡಿ.ಪಿ.ಐ. ಎಂದಕೂಡಲೇ ಮುನಿದಿದ್ದಾರೆ. ಎಸ್.ಡಿ.ಪಿ.ಐ.ನ ಸಖ್ಯ ಮತ್ತು ಗೌಡರ ಲೆಕ್ಕಾಚಾರವನ್ನು ಎ.ಕೆ.ಸುಬ್ಬಯ್ಯನವರು ಎಳೆಎಳೆಯಾಗಿ ಬಿಚ್ಚಿಟ್ಟು, ಇಬ್ಬರನ್ನೂ ಬೆತ್ತಲು ಮಾಡಿದ್ದಾರೆ.

ಮೈಸೂರಿನಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಸ್.ಡಿ.ಪಿ.ಐ.ಗೆ ಗಣನೀಯ ಮತಗಳು ದೊರಕಿದ್ದವು. ಈ ಕಾರಣಕ್ಕೇ ಕಾಂಗ್ರೆಸ್‌ನ ತನ್ವೀರ್ ಸೇಟ್‌ರವರು ಕೊನೆಗಳಿಗೆಯವರೆಗೆ ಉಸಿರು ಬಿಗಿಹಿಡಿದುಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ಮಡಿಕೇರಿ ನಗರಸಭಾ ಚುನಾವಣೆಯಲ್ಲಿ ಎಸ್.ಡಿ.ಪಿ.ಐ. ನಾಲ್ಕು ಸ್ಥಾನಗಳನ್ನು ಪಡೆದಿದೆ. ಹಾಗಾಗಿ ಎಸ್.ಡಿ.ಪಿ.ಐ. ಪ್ರಬಲವಾಗಿದೆ ಎಂಬ ಲೆಕ್ಕಾಚಾರದಿಂದ ಗೌಡರು ಎಡ ಪಕ್ಷಗಳನ್ನೂ ಧಿಕ್ಕರಿಸಿ, ಅವರ ಸಖ್ಯ ಬೆಳೆಸಿದ್ದಾರೆ. ಎಸ್.ಡಿ.ಪಿ.ಐ. ತನ್ನ ಸಂಘಟನೆಯನ್ನು ಕಟ್ಟಲು ಈ ಅವಕಾಶವನ್ನು ಬಳಸಿಕೊಳ್ಳುತ್ತಿದೆ. ಚುನಾವಣೆಗೆ ಕೆಲವೇ ದಿನಗಳು ಬಾಕಿ ಇದ್ದರೂ, ಇನ್ನೂ ಎಡ ಪಕ್ಷಗಳು ತಮ್ಮ ನಿಲುವನ್ನು ಬಹಿರಂಗಪಡಿಸಿಲ್ಲ, ಆದರೆ ಅವರು ಖಾಸಗಿಯಾಗಿ ಬಿಜೆಪಿ ಮತ್ತು ಎಸ್.ಡಿ.ಪಿ.ಐ.ಯನ್ನು ಸಮಾನ ದೂರದಲ್ಲಿ ಇಡಬೇಕಾಗುತ್ತದೆ. ಹಾಗಾಗಿ ಅನಿವಾರ್ಯವಾಗಿ ಕಾಂಗ್ರೆಸನ್ನು ಬೆಂಬಲಿಸಬೇಕಾಗುತ್ತದೆ. ಕಾಂಗ್ರೆಸಿಗೆ ಬೆಂಬಲವನ್ನು ಬಹಿರಂಗವಾಗಿ ಘೋಷಿಸುವುದು ಸಾಧ್ಯವಿಲ್ಲದ ಮಾತು. ಆದ್ದರಿಂದ ತಟಸ್ಥರಾಗಿ ಉಳಿಯುತ್ತೇವೆ ಎನ್ನುವಂತೆ ಮಾತನಾಡುತ್ತಿದ್ದಾರೆ. ಸಹಜವಾಗಿ ಕಾರ್ಮಿಕ ವರ್ಗ ಕಾಂಗ್ರೆಸ್‌ನತ್ತ ವಾಲುವ ಸಾಧ್ಯತೆಗಳು ಇವೆ.

ಜೆ.ಡಿ.ಎಸ್.ಗೆ ಬಿಜೆಪಿಯನ್ನು ಸೋಲಿಸಬೇಕೆಂಬ ಗುರಿ ಖಂಡಿತವಾಗಿಯೂ ಇಲ್ಲ, ಮಡಿಕೇರಿಗೆ ಆಗಮಿಸಿದ ಕುಮಾರಸ್ವಾಮಿ ತನ್ನ ಭಾಷಣದುದ್ದಕ್ಕೂ ಟೀಕಿಸಿದ್ದು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಪಕ್ಷವನ್ನು, ಬಿಜೆಪಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಬಗ್ಗೆ ಸಿದ್ದರಾಮಯ್ಯ ಲಘುವಾಗಿ ಮಾತನಾಡುತ್ತಾರೆ ಎಂದು ಮರುಕಪಟ್ಟವರು ಕುಮಾರಸ್ವಾಮಿ. ಹಾಗಾಗಿ ಅವರ ಉದ್ದೇಶ ಇಲ್ಲಿ ಸ್ಪಷ್ಟವಾಗುತ್ತದೆ.

ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಇರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಕೊಡಗಿನ ಎರಡು ವಿಧಾನಸಭಾ ಕ್ಷೇತ್ರಗಳು ಮಾತ್ರ ಬಿಜೆಪಿಯ ಕೈಯಲ್ಲಿ ಇವೆ. ಹಾಗಾಗಿ ಬಿಜೆಪಿಯವರು ಇಲ್ಲಿ ಹೆಚ್ಚಿನ ಮತವನ್ನು ತಮ್ಮ ಅಭ್ಯರ್ಥಿಗೆ ಕೊಡಿಸಲು ಬೇಕಾದಂತಹ ಪ್ರಯತ್ನವನ್ನು ಮಾಡುತ್ತಾರೆ ಎಂದು ಇದ್ದ ಲೆಕ್ಕಾಚಾರ ಈಗ ಕಾಣುತ್ತಿಲ್ಲ. ಚುನಾವಣೆಯ ಕೊನೆಯ ಹಂತದಲ್ಲಿ ಇದ್ದರೂ ಕೂಡ, ಚುನಾವಣಾ ಪ್ರಚಾರ ಕಾರ್ಯ ನಡೆಯುತ್ತಿದೆಯೇ ವಿನಃ, ಯಾವ ಭರದಿಂದ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚಟುವಟಿಕೆ ಇತ್ತೋ, ಅದು ಬಿಜೆಪಿಯ ಪಾಳೆಯದಲ್ಲಿ ಕಾಣುತ್ತಿಲ್ಲ, ಮಾಜಿ ಸಚಿವ ಅಪ್ಪಚ್ಚು ರಂಜನ್ ಪೂರ್ಣ ಪ್ರಮಾಣದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಂತೆ ಕಂಡುಬರುತ್ತಿಲ್ಲ, ಮಾಜಿ ಸ್ಪೀಕರ್ ಬೋಪಯ್ಯ ಕೂಡ ಅದೇ ಸ್ಥಿತಿಯಲ್ಲಿ ಇದ್ದಾರೆ. ಹಾಗಾಗಿ ವಿಧಾನಸಭೆ ಚುನಾವಣೆಯಲ್ಲಿ ಗಳಿಸಿದ ಮತಕ್ಕಿಂತಲೂ ಕಡಿಮೆ ಮತವನ್ನು ಬಿಜೆಪಿ ಪಡೆದರೆ ಆಚ್ಚರಿಪಡುವಂತದ್ದು ಏನೂ ಇಲ್ಲ.

ಮೈಸೂರು ಪ್ರದೇಶದಲ್ಲಿಯೂ ಬಿಜೆಪಿ ಕೇವಲ ಪಟ್ಟಣ ಪ್ರದೇಶಗಳಲ್ಲಿ ಮತ್ತು ವಿದ್ಯಾರ್ಥಿಗಳ ನಡುವೆ ಕಂಡುಬರುತ್ತಿದೆಯೇ ವಿನಃ, ಹೆಚ್ಚಿನ ಪ್ರಭಾವವನ್ನು ಅವರಿಗೆ ಗ್ರಾಮಾಂತರ ಪ್ರದೇಶದಲ್ಲಿ ಬೀರಲು ಸಾಧ್ಯವಾಗಿಲ್ಲ, ಮಾಜಿ ಸಚಿವ ರಾಮದಾಸ ಮತ್ತು ಗೋ. ಮಧುಸೂದನ್ ಬಹಿರಂಗವಾಗಿಯೇ ಹಾವು ಮುಂಗುಸಿಯಂತೆ ಕಚ್ಚಾಡುತ್ತಿದ್ದಾರೆ. ಇದೆಲ್ಲವೂ ಮೋದಿ ಅಭ್ಯರ್ಥಿ ಪ್ರತಾಪ ಸಿಂಹರಿಗೆ ಮುಳುವಾಗಲಿದೆ.

ಮೈಸೂರಿಗೆ ಪ್ರಚಾರಕ್ಕಾಗಿ ಆಗಮಿಸಿದ ಮೋದಿ ಅಂತಹ ಸಂಚಲನವನ್ನೇನೂ ಉಂಟುಮಾಡಲಿಲ್ಲ; ಭಾರೀ ಸಂಖ್ಯೆಯಲ್ಲಿ ಜನರು ಸೇರುತ್ತಾರೆ ಎಂಬುದು ಕೂಡ ಹುಸಿಯಾಗಿತ್ತು, ಇಲ್ಲದೇ ಇದ್ದಂತಹ ಅಲೆಯನ್ನು ಸೃಷ್ಟಿಸಲು ಪ್ರಯತ್ನಿಸಿದಾಗ, ಪ್ರಕೃತಿಯು ಮುನಿಸಿಕೊಂಡು ಭಾರೀ ಗಾಳಿಯನ್ನು ಬೀಸಿ, ಮಳೆಯೂ ಬೀಳದೆ, ಅಲೆಯೂ ಸೃಷ್ಟಿಯಾಗದೆ ಮೋದಿ ಬೆಂಗಳೂರಿಗೆ ಹೋಗಬೇಕಾಯಿತು.

ಬಿಜೆಪಿಯ ಅಭ್ಯರ್ಥಿ ಎಂದು ಪ್ರತಾಪ ಸಿಂಹ ಘೋಷಣೆಯಾದಾಗ ಯಾವ ಸ್ಥಿತಿ ಬಿಜೆಪಿಯಲ್ಲಿ ಇತ್ತೋ, ಈಗಲೂ ಅದೇ ಸ್ಥಿತಿ ಇದೆ. ಈ ವ್ಯಕ್ತಿ ಯಾರು ಎಂಬುದನ್ನು ಮತದಾರರಿಗೆ ಪರಿಚಯಿಸಬೇಕಾದಂತಹ ಪರಿಸ್ಥಿತಿ ಇದೆ. ಚುನಾವಣೆಯಲ್ಲಿ ಹೊಸ ಮುಖಗಳು ಇರುವುದೇ ಇಲ್ಲ ಎಂದೇನೂ ಅಲ್ಲ, ಆದರೆ ಪ್ರತಾಪ್ ಸಿಂಹ ಚುನಾವಣಾ ರಾಜಕೀಯದ ಪರಿಚಯವೇ ಇಲ್ಲದ ವ್ಯಕ್ತಿಯಾದ್ದರಿಂದ ಬಿಜೆಪಿಗೆ ಇದು ದೊಡ್ಡ ಸಮಸ್ಯೆ ಆಗಿದೆ.

ಅವರಿಗೆ ನೇರ ಪ್ರತಿಸ್ಪರ್ಧಿಯಾಗಿರುವ ವಿಶ್ವನಾಥರು ಸಚಿವರಾಗಿ, ಸಂಸದರಾಗಿ ಚಿರಪರಿಚಿತರಾಗಿದ್ದಾರೆ. ಕಳೆದ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ವಿಶ್ವನಾಥ್ ಎದುರಿಸಿದ ಸಮಸ್ಯೆ ಈ ಬಾರಿ ಅವರಿಗೆ ಕಂಡುಬರುತ್ತಿಲ್ಲ, ವೈಯಕ್ತಿಕವಾಗಿ ಅವರಿಗೆ ಭ್ರಷ್ಟಾಚಾರದ ಆರೋಪ ಮೆತ್ತಿಕೊಂಡಿಲ್ಲ, ಸಣ್ಣ ಪುಟ್ಟ ಆಕ್ಷೇಪಗಳು ಬಿಟ್ಟರೆ ಹೇಳಿಕೊಳ್ಳುವಂತಹ ಯಾವುದೇ ಪುಕಾರು ಅವರ ಮೇಲೆ ಇಲ್ಲ, ಹಿಂದಿನ ಸಂಸದರು ಜನರೊಂದಿಗೆ ಇಟ್ಟುಕೊಂಡಿದ್ದ ಬಾಂಧವ್ಯಕ್ಕಿಂತಲೂ ಹೆಚ್ಚಿನ ಸಂಪರ್ಕವನ್ನು ಮತ್ತು ಬಾಂಧವ್ಯವನ್ನು ಇಟ್ಟುಕೊಂಡವರು ವಿಶ್ವನಾಥ್. ಇದು ಅವರಿಗೆ ಲಾಭದಾಯಕವಾಗಲಿದೆ ಎನ್ನುವುದರಲ್ಲಿ ಸಂಶಯವಿಲ್ಲ.

ಬಿಜೆಪಿಯ ಪ್ರಣಾಳಿಕೆ ಮೊದಲ ಹಂತದ ಚುನಾವಣೆಯ ದಿನ ಪ್ರಕಟವಾಗಿದ್ದು, ಎಂದಿನಂತೆ ರಾಮಮಂದಿರದ ಜಪ, 370ನೇ ವಿಧಿ ರದ್ದು ಮತ್ತು ಏಕರೂಪ ಸಂಹಿತೆ ಜಾರಿ ಇವುಗಳು ಬಿಜೆಪಿಗೆ ಈ ಕ್ಷೇತ್ರದಲ್ಲಂತೂ ಲಾಭದಾಯಕವಲ್ಲ. ಈ ಪ್ರಣಾಳಿಕೆ ವಿಶ್ವನಾಥರಿಗೆ ಮತ್ತಷ್ಟು ನೆಮ್ಮದಿಯನ್ನು ತಂದಿರುವ ಸಾಧ್ಯತೆಗಳು ಇವೆ.

ಈ ಕ್ಷೇತ್ರದಲ್ಲಿ - ವಿಶೇಷವಾಗಿ ಮೈಸೂರು ಭಾಗದಲ್ಲಿ - ಕೇಳಿಬರುತ್ತಿರುವ ಮಾತು ಯಾವುದೆಂದರೆ ತಮ್ಮ ವಿರೋಧಿಗಳಾದ ಸಿದ್ದರಾಮಯ್ಯ ಮತ್ತು ವಿಶ್ವನಾಥ್ ಅವರನ್ನು ಕೆಡವಲು ದೇವೇಗೌಡರು ಕೊನೆಕ್ಷಣದಲ್ಲಿ ತಮ್ಮ ಅಭ್ಯರ್ಥಿಯ ಬದಲಾಗಿ ಬಿಜೆಪಿಯ ಅಭ್ಯರ್ಥಿಗೆ ಮತ ಹಾಕುವಂತೆ ಸಂದೇಶವನ್ನು ತಮ್ಮ ಸಮುದಾಯದವರಿಗೆ ರವಾನೆ ಮಾಡಬಹುದು ಎಂಬುದಾಗಿದೆ. ಇದಕ್ಕಾಗಿಯೇ ಇಲ್ಲಿಯವರೆಗೆ ಪ್ರತಾಪ ಸಿಂಹ ಎಂದು ಚಿರಪರಿಚಿತನಾಗಿದ್ದ ಅಂಕಣಕಾರ ಈಗ ತನ್ನ ಹೆಸರಿನ ಜೊತೆಯಲ್ಲಿ ಗೌಡ ಅಂದರೆ 'ಪ್ರತಾಪ ಸಿಂಹ ಗೌಡ' ಎಂದು ಸೇರಿಸಿಕೊಂಡಿದ್ದಾರೆ. ಇದು ಒಕ್ಕಲಿಗ ಮತವನ್ನು ಸೆಳೆಯುವ ತಂತ್ರ.

ಆದರೆ ಜೆ.ಡಿ.ಎಸ್.ಗೆ ಪ್ರಾಬಲ್ಯವಿರುವುದೇ ಹಳೆ ಮೈಸೂರು ಕ್ಷೇತ್ರದಲ್ಲಿ, ಇಲ್ಲಿ ತಮ್ಮ ಮತಗಳನ್ನು ಬಿಜೆಪಿಗೆ ಗೌಡರು ವರ್ಗಾಯಿಸಿದರೆ, ಅವರ ಅಭ್ಯರ್ಥಿ ಠೇವಣಿ ಕಳೆದುಕೊಳ್ಳುವ ಸಾಧ್ಯತೆ ಇದೆ. ಹಾಗಾದಾಗ ಮೈಸೂರು ಪ್ರದೇಶದಲ್ಲಿ ದೇವೇಗೌಡರು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡಿದ್ದಾರೆ ಎಂಬ ಸಂದೇಶ ರವಾನೆಯಾಗುವ ಅಪಾಯವಿದೆ. ಅದು ಮುಂದಿನ ಚುನಾವಣೆಯಲ್ಲಿ ಗೌಡರಿಗೆ ದೊಡ್ಡ ಪೆಟ್ಟು ನೀಡುವುದು ಗ್ಯಾರಂಟಿ.

24 ಗಂಟೆಯೂ ರಾಜಕೀಯ ಲೆಕ್ಕಹಾಕುವ ದೇವೇಗೌಡರು ಎಂದೂ ರಾಜಕೀಯವನ್ನು ಈ ತತ್‌ಕ್ಷಣದ ದೃಷ್ಟಿಯಲ್ಲಿ ಮಾತ್ರ ನೋಡುವುದಿಲ್ಲ, ಮುಂದಿನ ದಿನಗಳ ಮೇಲೆ ಅವರ ಕಣ್ಣು ಇದ್ದೇ ಇರುತ್ತದೆ ಎನ್ನುವುದು ರಾಜಕೀಯ ಪಂಡಿತರ ಅಭಿಪ್ರಾಯ. ಆದ್ದರಿಂದ ಈ ಬಾರಿ ಬಿಜೆಪಿಯನ್ನು ಬೆಂಬಲಿಸಬೇಕೆಂಬ ಸಂದೇಶ ಕಳುಹಿಸುವ ಮುಠ್ಠಾಳತನವನ್ನು ಈ ಕ್ಷೇತ್ರದಲ್ಲಿ ದೇವೇಗೌಡರು ಮಾಡುವುದಿಲ್ಲ ಎಂದು ರಾಜಕೀಯ ವೀಕ್ಷಕರು ಹೇಳುತ್ತಾರೆ.

ಎಸ್.ಡಿ.ಪಿ.ಐ. ಬಗ್ಗೆ ಮುಸ್ಲಿಂ ಜನಾಂಗವೇ ಬಹಳ ಆಕ್ರೋಶದಿಂದ ಇದೆ. ಅಲ್ಪಸಂಖ್ಯಾತರ ಮತವನ್ನು ಒಡೆಯುವ ಕೆಲಸವನ್ನು ಮಾಡಲೇಬಾರದು ಎಂದು ಅವರು ಹೇಳುತ್ತಾರೆ. ರಾಮಮಂದಿರ ನಿರ್ಮಾಣದಂತಹ ವಿಚಾರವನ್ನು ಬಿಜೆಪಿ ಮುಂದಿಟ್ಟಿರುವುದನ್ನು ಗಮನಿಸಿದಾಗ, ಯಾವುದೇ ಕಾರಣಕ್ಕೂ ಮುಸ್ಲಿಂ ಮತಗಳು ಈ ಚುನಾವಣೆಯಲ್ಲಿ ಗೆಲ್ಲಲು ಸಾಧ್ಯವಿಲ್ಲದಿರುವಂತಹ ಜೆ.ಡಿ.ಎಸ್. ಪರವಾಗಿ ಬೀಳುವುದಿಲ್ಲ, ಎಸ್.ಡಿ.ಪಿ.ಐ. ನಾಯಕರುಗಳು ಮಾತ್ರ ಜೆ.ಡಿ.ಎಸ್.ನೊಂದಿಗೆ ಪ್ರಚಾರದಲ್ಲಿ ತೊಡಗಿಕೊಳ್ಳುತ್ತಾರೆ; ಮತಗಳು ಸಿಗುವುದಿಲ್ಲ ಎಂದು ಸಾಮಾನ್ಯ ಮುಸಲ್ಮಾನರು ಹೇಳುತ್ತಾರೆ. ಎಸ್.ಡಿ.ಪಿ.ಐ.ನ ಸಖ್ಯ ಜೆ.ಡಿ.ಎಸ್.ನ ಎಂ.ಸಿ.ನಾಣಯ್ಯನವರಿಗೂ ಅಸಮಾಧಾನವನ್ನು ಉಂಟುಮಾಡಿದೆ. ಅವರೂ ಕೂಡ ಯಾವುದೇ ಪ್ರಚಾರದಲ್ಲಿ ತೊಡಗಿಕೊಂಡಿಲ್ಲ, ನಾಯಕರುಗಳು ಬಂದಾಗ ವೇದಿಕೆಯಲ್ಲಿ ಕಾಣಿಸಿಕೊಳ್ಳುವುದಷ್ಟಕ್ಕೇ ತಮ್ಮ ಚಟುವಟಿಕೆಯನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಮೈಸೂರಿನಲ್ಲಿ ಜಿ.ಟಿ. ದೇವೇಗೌಡರು ಕೂಡ ಅಷ್ಟೇನು ಆಸಕ್ತಿಯಿಂದ ಓಡಾಡುತ್ತಿಲ್ಲ. ಎಸ್.ಡಿ.ಪಿ.ಐ. ಪ್ರಭಾವವನ್ನು ಈ ಬಾರಿ ತಗ್ಗಿಸಲೇಬೇಕೆಂದು ತನ್ವೀರ್ ಸೇಟ್‌ಗೆ ಹಠ ಇದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ತನ್ನ ಕ್ಷೇತ್ರವನ್ನು ತಾನು ಕಳೆದುಕೊಳ್ಳಬೇಕಾದ ಅಪಾಯವಿದೆ ಎನ್ನುವುದಕ್ಕಾಗಿ ಅವರು ಮುಸ್ಲಿಮರ ಮತವನ್ನು ತಮ್ಮ ಭಾಗದಲ್ಲಿ ಸಾರಾಸಗಟಾಗಿ ವಿಶ್ವನಾಥ್‌ರಿಗೆ ಬೀಳುವಂತೆ ನೋಡಿಕೊಳ್ಳುತ್ತಾರೆ. ರಾಜ್ಯಮಟ್ಟದಲ್ಲಿ ಜಾತ್ಯತೀತ ಶಕ್ತಿಗಳು ಒಂದಾಗುತ್ತಿದ್ದು ಇದರ ಪ್ರಯೋಗಗಳು ಈಗಾಗಲೇ ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಆರಂಭಗೊಂಡಿದೆ.

ಈ ಚುನಾವಣೆ ಈ ಕ್ಷೇತ್ರಕ್ಕಂತೂ ವಿಶೇಷವಾದದ್ದು. ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ತವರು. ಹಾಗಾಗಿ ಇಲ್ಲಿಂದ ವಿಶ್ವನಾಥ್ ಹಾಗೂ ಚಾಮರಾಜನಗರ ಕ್ಷೇತ್ರದಿಂದ ಧ್ರುವನಾರಾಯಣ ಗೆಲ್ಲಲೇಬೇಕಾದ ಅನಿವಾರ್ಯತೆ ಅವರಿಗೆ ಇದೆ. ದೇವೇಗೌಡರ ತಂತ್ರಕ್ಕೆ ಪ್ರತಿತಂತ್ರವನ್ನು ಸಿದ್ದರಾಮಯ್ಯ ರೂಪಿಸುತ್ತಾರೆ. ಮೋದಿಯ ಪ್ರಭಾವವೇ ಇಲ್ಲದಿರುವ ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದಲ್ಲಿ ಈಗಲೂ ಕೂಡ ಕಾಂಗ್ರೆಸಿನ ವಿಶ್ವನಾಥ್ ಇತರ ಎಲ್ಲಾ ಅಭ್ಯರ್ಥಿಗಳಿಗಿಂತ ಬಹಳ ಮುಂದಿದ್ದಾರೆ.

● ಬಿ.ಎನ್. ಮನುಶೆಣೈ

ಈರುಳ್ಳಿ ವ್ಯಾಪಾರಕ್ಕೂ ಅಡ್ಡಿ

ಈರುಳ್ಳಿ ಬೆಲೆ ಗಗನಕ್ಕೆ ಏರಿದ್ದಾಗ ಈರುಳ್ಳಿ ವ್ಯಾಪಾರಕ್ಕೆ ಇಳಿಯದೆ ಇದ್ದಂತಹ ಬಿಜೆಪಿ ಪಕ್ಷ, ಈ ಚುನಾವಣೆಯಲ್ಲಿ ಈರುಳ್ಳಿ ವ್ಯಾಪಾರಕ್ಕೆ ಕೈ ಹಾಕಿದೆ. ಮೊನ್ನೆ ಕೊಡಗಿನ ಗೋಣಿಕೊಪ್ಪಲಿನಲ್ಲಿ ಈರುಳ್ಳಿ ಬೆಲೆ ಏಕಾಏಕಿ ಪ್ರಪಾತಕ್ಕೆ ಇಳಿದಿತ್ತು, ಅಂದು ಸಗಟು ಮಾರುಕಟ್ಟೆಯಲ್ಲಿ ಒಂದು ಕೆಜಿ ಈರುಳ್ಳಿ ಬೆಲೆ 12 ರೂಪಾಯಿ ಇರುವಾಗ, ಗೋಣಿಕೊಪ್ಪಲಿನಲ್ಲಿ ಬಿಜೆಪಿಯ ಕಲವು ಕಾರ್ಯಕರ್ತರು ಒಂದು ಕೇಜಿಗೆ ಕೇವಲ ಆರು ರೂಪಾಯಿ ಬೆಲೆಯಲ್ಲಿ ಮಾರಾಟ ಮಾಡುತ್ತಿದ್ದರು.

ಇದನ್ನು ನೋಡಿ ಇತರ ಈರುಳ್ಳಿ ವ್ಯಾಪಾರಿಗಳು ತಬ್ಬಿಬ್ಬಾದರು. ಕೊನೆಗೆ ಬಿಜೆಪಿಯ ಕಾರ್ಯಕರ್ತರ ಅಂಗಡಿ ಮಳಿಗೆ ಮೇಲೆ ಚುನಾವಣಾಧಿಕಾರಿಗಳು ದಾಳಿ ನಡೆಸಿದಾಗ, ಅಲ್ಲಿ 45 ಲಕ್ಷ ರೂಪಾಯಿ ಹಣ ಸಿಕ್ಕಿಬಿತ್ತು.

ಅಸಲು ವಿಷಯ ಏನೆಂದರೆ ಚುನಾವಣೆ ವೆಚ್ಚಕ್ಕೆಂದು ಸುಮಾರು ಮೂರು ಕೋಟಿ ರೂಪಾಯಿಗಳಷ್ಟು ಹಣವನ್ನು ಬಿಜೆಪಿ ನಾಯಕರು ಈರುಳ್ಳಿ ಚೀಲಗಳ ನಡುವೆ ಇಟ್ಟು ಎರಡು ಲಾರಿಗಳಲ್ಲಿ ಕೊಡಗಿಗೆ ಕಳುಹಿಸಿದ್ದರು. ಆದರೆ ಕೆಲವೇ ದಿನಗಳಲ್ಲಿ ಈರುಳ್ಳಿ ಕೊಳೆತು ವಾಸನೆ ಬರಲು ಆರಂಭಿಸಿದಾಗ ಹಣವನ್ನೆಲ್ಲ ಬೇರೆ ಬೇರೆ ಜಾಗಗಳಲ್ಲಿಟ್ಟು ಉಳಿದ ಈರುಳ್ಳಿಯನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಸಿಕ್ಕಿದ ಬೆಲೆಗೆ ಮಾರಾಟ ಮಾಡಿದರು.



ಆದರೆ ಈ ಆರಾಮಿ ಹಣದ ಬಟಾವಡೆಯಲ್ಲಿ ಚೆಡ್ಡಿಗಳ ನಡುವೆಯೇ ಏನೋ ಗೊಂದಲ ಉಂಟಾಗಿ ಅವರ ವಲಯದಿಂದಲೇ ಜಿಲ್ಲಾ ಚುನಾವಣಾಧಿಕಾರಿಗೆ ಪುಕಾರು ಹೋಯಿತು. ಅದರ ಪರಿಣಾಮವಾಗಿಯೇ ದಾಳಿ ನಡೆದಾಗ 45 ಲಕ್ಷ ರೂಪಾಯಿಗಳು ಸಿಕ್ಕಿದ್ದು.


ಜನಸಾಮಾನ್ಯರ ಹಣವನ್ನು ಅಧಿಕಾರಿಗಳು ವಶಪಡಿಸಿಕೊಂಡಾಗ ಅಥವಾ ಪೊಲೀಸರು ಜನರಿಗೆ ಕಿರುಕುಳವನ್ನು ನೀಡಿದಾಗ ಎಂದೂ ಪ್ರತಿಕ್ರಿಯಿಸದ ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ ಈ ದಾಳಿ ನಡೆದು ಚೆಡ್ಡಿಗಳಿಂದ ಹಣವನ್ನು ವಶಪಡಿಸಿಕೊಂಡ ಕೂಡಲೇ ಪ್ರತಿಕ್ರಿಯಿಸಿ "ಅಧಿಕಾರಿಗಳು ವ್ಯಾಪಾರಿಗಳಿಗೆ ಕಿರುಕುಳ ನೀಡುತ್ತಿದ್ದಾರೆ. ಇದರ ವಿರುದ್ಧ ಪ್ರತಿಭಟಿಸಬೇಕಾದೀತು" ಎಂದಿದ್ದಾರೆ.

ಆದರೆ ಸಾಮಾನ್ಯ ಜನರು ಈ ಪ್ರಸಂಗವನ್ನು ನೋಡಿ "ಬಿಜೆಪಿ ಅಧಿಕಾರಕ್ಕೆ ಬಂದರೆ ಈರುಳ್ಳಿ ಬೆಲೆ ಕಡಿಮೆಯಾಗುಬಹುದು" ಎಂದು ಕುಹಕವಾಡುತ್ತಿರುವುದು ಮಜಬೂತಾಗಿದೆ.

ಮೋದಿ ನಾಡಿನಲ್ಲೂ ಟೀಚರ್‌ಗಳೂ ಇಲ್ಲ, ವೈದ್ಯರೂ ಇಲ್ಲ...

ಮೋದಿ ತನ್ನ ನಾನಾ ಸಾಧನೆಗಳ ಕುರಿತು ಬಿಗಿಯುವ ಭಾಷಣಗಳನ್ನು ಮಂತ್ರಮುಗ್ಧರಾಗಿ ಆಲಿಸುವ ಜನ ಎಲ್ಲಾದರೂ ಗುಜರಾತ್‌ನ ಅಂಕಿಅಂಶಗಳನ್ನು ಪರಿಶೀಲಿಸಲು ಹೊರಟರೆ ಅವರಿಗೆ ಭಾರಿ ಭ್ರಮನಿರಸನ ಕಾದಿದೆ. ಶಿಕ್ಷಣ ಮತ್ತು ಆರೋಗ್ಯ ಈ ಎರಡೂ ಕ್ಷೇತ್ರಗಳನ್ನು ತೆಗೆದುಕೊಂಡರೆ ಸಾಕು ಮೋದಿ ಮಾತೆಲ್ಲ ಬರೀ ಬಡಾಯಿಯೆಂದು ಗೊತ್ತಾಗುತ್ತದೆ.


ಮನುಷ್ಯನ ಮೂಲಭೂತ ಅವಶ್ಯಕತೆಗಳ ಪೈಕಿ ಅತ್ಯಧಿಕ ಮಹತ್ವವುಳ್ಳ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳನ್ನು ಅಭಿವೃದ್ಧಿಯ ಪ್ರಮುಖ ಮಾನದಂಡಗಳೆಂದು ಪರಿಗಣಿಸಲಾಗುತ್ತದೆ. ಶಿಕ್ಷಣ ಕ್ಷೇತ್ರವನ್ನೆ ತೆಗೆದುಕೊಳ್ಳೋಣ. ಗುಜರಾತ್‌ನಲ್ಲಿ 58 ಪ್ರತಿಶತ ಮಕ್ಕಳು ಶಿಕ್ಷಣ ಪೂರ್ಣಗೊಳಿಸದೆ ಶಾಲೆ ಬಿಡುತ್ತಾರೆ. ದಲಿತ ಮಕ್ಕಳಲ್ಲಿ ಈ ಸಂಖ್ಯೆ 65% ಇದ್ದರೆ ಆದಿವಾಸಿಗಳಲ್ಲಿ 78% ರಷ್ಟಿದೆ. ಶಾಲೆಗೆ ಸೇರುವ (1ನೆ ತರಗತಿ) ದಲಿತ ಮಕ್ಕಳ ಸಂಖ್ಯೆಯಲ್ಲಿ ಶೇಕಡಾ 27ರಷ್ಟು ಇಳಿಕೆಯಾಗಿದೆ. ಶಿಕ್ಷಕ-ವಿದ್ಯಾರ್ಥಿ ಅನುಪಾತದ ವಿಚಾರಕ್ಕೆ ಬಂದರೆ ರಾಷ್ಟ್ರೀಯ ಮಟ್ಟದಲ್ಲಿ ಸರಾಸರಿ ಪ್ರತಿ 34 ಮಕ್ಕಳಿಗೊಬ್ಬ ಟೀಚರ್ ಇದ್ದರೆ ಗುಜರಾತಿನಲ್ಲಿ ಪ್ರತಿ 52 ಮಕ್ಕಳಿಗೊಬ್ಬ ಟೀಚರ್. ಉನ್ನತ ಶಿಕ್ಷಣದ ವಿಚಾರದಲ್ಲಿ ರಾಷ್ಟ್ರೀಯ ಸರಾಸರಿ 20.4% ಇದ್ದರೆ ಗುಜರಾತಿನಲ್ಲಿ ಇರುವುದು 17.6%. ಈ ವಿಷಯದಲ್ಲಿ ತಮಿಳುನಾಡು, ಮಹಾರಾಷ್ಟ್ರಗಳು ಎಷ್ಟೋ ಮುಂದಿವೆ. 2001-02ರ ನಂತರ ಗುಜರಾತ್ ಸರ್ಕಾರ



ಶಿಕ್ಷಣಕ್ಕಾಗಿ ವೆಚ್ಚ ಮಾಡಿರುವುದು ಒಟ್ಟಾರೆ ವೆಚ್ಚದ ಶೇಕಡ 13.2ರಷ್ಟು. ಪಕ್ಕದ ಮಹಾರಾಷ್ಟ್ರ 18% ಖರ್ಚು ಮಾಡಿದ್ದರೆ ತಮಿಳುನಾಡು ಶೇಕಡಾ 14ರಷ್ಟು ಖರ್ಚು ಮಾಡಿದೆ.

ಆರೋಗ್ಯ ಕ್ಷೇತ್ರವೂ ಕೇಳುವವರಿಲ್ಲವೆಂಬಂತಾಗಿದೆ. ಪ್ರಾಥಮಿಕ ಮತ್ತು ಸಾಮುದಾಯಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ತೀವ್ರ ಅಭಾವ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಶೇಕಡಾ 34ರಷ್ಟು ವೈದ್ಯರ ಕೊರತೆ ಇದೆ. ಸಾಮುದಾಯಿಕ ಆರೋಗ್ಯ ಕೇಂದ್ರಗಳಲ್ಲಿ ಶಿಶು ತಜ್ಞರು ಮತ್ತು ಮಹಿಳಾ ತಜ್ಞರ ಕೊರತೆ ಶೇಕಡಾ 94ರಷ್ಟಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಇರಬೇಕಿರುವುದಕ್ಕಿಂತ 19% ಕಡಿಮೆ ಇದೆ. ಸಾಮುದಾಯಿಕ ಆರೋಗ್ಯ ಕೇಂದ್ರಗಳ ಸಂಖ್ಯೆಯಲ್ಲಿಯೂ 11% ಕೊರತೆ ಇದೆ. ಇನ್ನು ಆದಿವಾಸಿ ಪ್ರದೇಶಗಳ ದುಸ್ಥಿತಿ ಹೇಳತೀರದು. ಶೇಕಡಾ 70ರಷ್ಟು ಕೇಂದ್ರಗಳಲ್ಲಿ ಎಕ್ಸ್‌ರೇ ಟೆಕ್ನಿಷಿಯನ್‌ಗಳಿಲ್ಲ, ಶೇಕಡಾ 63ರಷ್ಟು ಕೇಂದ್ರಗಳಲ್ಲಿ ಔಷಧ ವಿತರಕರಿಲ್ಲ, ಸ್ಪೆಷಲಿಸ್ಟ್ ವೈದ್ಯರಂತೂ ಯಾವುದೇ ಕೇಂದ್ರದಲ್ಲಿಯೂ ಕಾಣಸಿಗುವುದಿಲ್ಲ. ಪರಿಣಾಮವಾಗಿ 2012ರಲ್ಲಿ ಶಿಶುಮರಣದ ಗತಿ 38ರಷ್ಟಿತ್ತು. ಇದೇ ಸಂಖ್ಯೆ ತಮಿಳುನಾಡಿನಲ್ಲಿ 21ರಷ್ಟು ಇದ್ದರೆ ಮಹಾರಾಷ್ಟ್ರದಲ್ಲಿ 25 ಇದೆ. ಗುಜರಾತಿನ ಶಿಶುಮರಣಗಳ ಪೈಕಿ ಗಂಡಿಗಿಂತ ಹೆಣ್ಣು ಮಕ್ಕಳ ಮರಣಗಳೇ ಜಾಸ್ತಿ. ಗುಜರಾತಿನಲ್ಲಿ ಪ್ರಸೂತಿ ಮರಣಗಳ ಸಂಖ್ಯೆ 122. ಅದೇ ಕೇರಳದಲ್ಲಿ ಬರೀ 66.

2001-02ರ ನಂತರ ಸರ್ಕಾರ ಆರೋಗ್ಯ ಕ್ಷೇತ್ರಕ್ಕೊಂದು




ವೆಚ್ಚ ಮಾಡಿರುವುದು ಕೇವಲ 3 ಶೇಕಡಾದಷ್ಟು. ಇದನ್ನು ಇತರ ರಾಜ್ಯಗಳೊಂದಿಗೆ ಹೋಲಿಸಿ: ಜಾರ್ಖಂಡ - 4.8%. ರಾಜಸ್ಥಾನ - 4.5%. ಮಹಾರಾಷ್ಟ್ರ - 3.5%. ತಮಿಳುನಾಡು - 4%!


ಅಭಿವೃದ್ಧಿಯಲ್ಲಿ ನಂಬರ್ ವನ್ ಅಂದರೆ ಇದೇನಾ?

(http://timesofindia.indiatimes.com)

ವಾಲ್ಮೀಕಿ ಜನಾಂಗದವರು ಬ್ರಾಹ್ಮಣ್ಯದ ವಿರುದ್ಧ ಸೇಡು ತೀರಿಸಿಕೊಳ್ಳಲಿ



ಐದು ಕಿಲೋ ಭಾರದ ಜೀವಂತ ಮಗುವನ್ನು ಎತ್ತಿಕೊಂಡು ನೂರಾರು ಮೈಲು ದೂರ ಹಾರುವಷ್ಟು ದೊಡ್ಡ ಹದ್ದು ಜೂರಸಿಕ್ ಯುಗದಲ್ಲೂ ಇರಲಿಕ್ಕಿಲ್ಲ, ಹಾಗಾದರೆ ಕೇವಲ ನಾಲ್ಕು ಸಾವಿರ ವರ್ಷಗಳ ಹಿಂದೆ ರಾಮಾಯಣ ಕಾಲದಲ್ಲಿ ಅಂತಹ ದೊಡ್ಡ ಹದ್ದು ಎಲ್ಲಿಂದ ಬಂತು ಎಂದು ಮನುವಾದಿ ನಾರಾಯಣಾಚಾರಿ ಹೇಳಬಲ್ಲನೆ? ವಾಲ್ಮೀಕಿ ಬ್ರಾಹ್ಮಣ ಎಂದಂತೆ ಕುರುಬ ಜನಾಂಗದ ಕನಕದಾಸ, ವೈಶ್ಯ ಪುರಂದರ ದಾಸ, ಮೀನುಗಾರ ವೇದವ್ಯಾಸ ಇವರನ್ನೂ ಬ್ರಾಹ್ಮಣರು ಅಥವಾ ಬ್ರಾಹ್ಮಣ ತಂದೆಗೆ ಅನೈತಿಕವಾಗಿ ಹುಟ್ಟಿದವರು ಎಂಬುವ ಕಥೆ ನಮ್ಮ



ಮನುವಾದಿ ಪುರಾಣಗಳಲ್ಲಿ ಧಾರಾಳವಾಗಿವೆ. ಎಂಬತ್ತು ವರ್ಷದ ಹಣ್ಣು ಹಣ್ಣು ಮುದುಕ ಕಾಮುಕ ಪರಾಶರ ಮುನಿ ಮೀನುಗಾರನ ಮಗಳು ಸತ್ಯವತಿಯನ್ನು ಬಲವಂತವಾಗಿ ಭೋಗಿಸಿ ವೇದವ್ಯಾಸನನ್ನು ಹುಟ್ಟಿಸಿದನು ಎಂಬ ಕಥೆ ಕಟ್ಟಿದವರೂ ಇಂತಹದ್ದೇ ಪುರಾತನ ಮನುವಾದಿಗಳು. ಈ ನಾರಾಯಣಾಚಾರಿ ಬಿಜೆಪಿಯ ಕಟ್ಟಾ ಬೆಂಬಲಿಗ ಎಂಬುದು ಗಮನಿಸಿ. ಹಾಗಾಗಿ ಈಗ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ಎಲ್ಲಾ ವಾಲ್ಮೀಕಿ ಜನಾಂಗದವರು ಮನುವಾದಿ ಮೋದಿಯ ಪಾರ್ಟಿಗೆ ವೋಟು ಹಾಕದೇ ಬೇರೆ ಪ್ರಬಲ ಪಾರ್ಟಿಗೆ ವೋಟು ಹಾಕಿ ನಾರಾಯಣಾಚಾರಿ ತಮ್ಮ ಜನಾಂಗಕ್ಕೆ ಮಾಡಿದ ಅವಮಾನಕ್ಕೆ ಸೇಡು ತೀರಿಸಿಕೊಳ್ಳಬೇಕು.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ನಾರಾಯಣಾಚಾರ್ಯನದ್ದು ಮದ್ದಿಲ್ಲದ ಕಾಯಿಲೆ

ಅದೇನು ದುರಂತವೋ? ವೈಜ್ಞಾನಿಕವಾಗಿ ದಿನದಿನಕ್ಕೆ ನಾವು ಮುಂದುವರೆಯುತ್ತಿದ್ದರೂ ತಮ್ಮ ಹಳೆಯ ಚಾಳಿಗಳಿಂದ ಕಳಚಿಕೊಳ್ಳಲು ಇಷ್ಟಪಡದ ಕೆಲ ಜಿಗುಟು ಮನುಷ್ಯರು ಮೌಢ್ಯಗಳನ್ನು ಸದಾ ಜೀವಂತವಿರಿಸಿಕೊಳ್ಳಲು ಪಣತೊಟ್ಟಂತೆ ಕಾರ್ಯಪ್ರವೃತ್ತರಾಗುತ್ತಲೇ ಇದ್ದಾರೆ. ಜೀನ್, ಕ್ರೋಮೋಸೋಮ್ ಇತ್ಯಾದಿಗಳೆಲ್ಲ ಇಂದಿನ ವೈಜ್ಞಾನಿಕ ಯುಗದಲ್ಲಿ ಮಾಮೂಲಿ ಶಬ್ದಗಳೆನಿಸಿಬಿಟ್ಟಿವೆ. ವಿಶ್ವದಲ್ಲಿ ಪಸರಿಸಿದ ಮಾನವರೆಲ್ಲರ ಮೂಲ ಒಂದೇ ಎನ್ನುವುದು ಯಾವತ್ತೋ ಸಾಬೀತಾಗಿಹೋದ ಸಂಗತಿ ಯಾದರೂ ಇದನ್ನು ಒಪ್ಪುವ ಮನಸ್ಥಿತಿ ಕೆಲವರಿಗಿದ್ದಂತಿಲ್ಲ. ಅಂತವರಲ್ಲಿ ಈ 'ಬ್ರಾಹ್ಮಣ್ಯ'ದ ಸೊಜಿಗನ್ನು ಮೈತುಂಬಾ ಏರಿಸಿಕೊಂಡ ನಾರಾಯಣಾಚಾರ್ಯನೂ ಒಬ್ಬ.

ಎಪ್ಪೋ ಧಾರವಾಡದ ರೈಲುಹಳಿಗಳ ಮಧ್ಯೆ ತಪಸ್ಸಿಗೇ ತಾನು ಜಾತ್ಯತೀತರನ್ನು ಬೈದುಕೊಂಡಿರುತ್ತಿದ್ದ ಈತನನ್ನು ಕರೆತಂದು ಪತ್ರಿಕಾರಂಗಕ್ಕೆ ಪರಿಚಯಿಸಿದ್ದು ಎಸ್.ಕೆ.ಗುಲ್ವಾಡಿ ಸಾಹೇಬರು. ತರಂಗದ ಬಳಿಕ ಕರ್ಮವೀರದಲ್ಲೂ ಈತನ 'ಸನಾತನಬಿಂದು' ಲೇಖನಮಾಲೆ ಮುಂದುವರೆದಿತ್ತು. ಕರ್ಮವೀರದ ಇಂತಹ ಒಂದು ಲೇಖನದಲ್ಲಿ ಶಂಬೂಕನನ್ನು ಶ್ರೀರಾಮ ಕೊಂದಿದ್ದು ಅತ್ಯಂತ ನ್ಯಾಯಸಮ್ಮತವೇ ಆಗಿದೆ ಎಂದು ಈ ಪ್ರಾಣಿ ತನ್ನ ಮಾಮೂಲಿ ಶೈಲಿಯ ಜಿಗುಟು ವಿತಂಡವಾದವನ್ನು ಮಂಡಿಸಿ ಬರೆದಿತ್ತು. ಆ ಬಳಿಕ ಹೊಸ ದಿಗಂತ-ಕನ್ನಡ ಪ್ರಭ-ದಂತಹ ಸನಾತನವಾಣಿಗಳಲ್ಲೂ ಈತನ ಬ್ರಾಹ್ಮಣ ಭಾಜಾಭಜಂತ್ರಿ ಜೋರಾಗಿ ನಡೆದಿತ್ತು. ಈತನ ಬ್ರಾಹ್ಮಣ ಶ್ರೇಷ್ಠತೆಯ ವ್ಯಸನ ಎಂಥಾ ಅತಿರೇಕದ್ದೆಂದರೆ ಈತನ ಲೇಖನವನ್ನು ಓದುವ ಸಹೃದಯಿ ಬ್ರಾಹ್ಮಣರೇ ಈ ಅತಿರೇಕಕ್ಕೆ ಮುಜುಗರಪಟ್ಟು ಈತನನ್ನು ಬೈದುಕೊಳ್ಳುವುದಿದೆ. ಬ್ರಾಹ್ಮಣರೇ ಶ್ರೇಷ್ಠರು, ಇತರರನ್ನು ಬ್ರಾಹ್ಮಣರ ಮಟ್ಟಕ್ಕೆ ಯಾವತ್ತಿಗೂ ಕಲ್ಪಿಸಿಕೊಳ್ಳಲಾಗದು ಎಂಬುದೇ ಈತನ ಮೂಲ ಚಿಂತನೆ. ಈ ಸಿದ್ಧಾಂತವೇ ಈತನ ವಿವಾದಿತ 'ವಾಲ್ಮೀಕಿ ಯಾರು?' ಎಂಬಂತಹ ಕೃತಿಗಳಿಗೆ ಪ್ರೇರಣೆ.

ಶಿವರಾಮ ಕಾರಂತ ಹಾಗು ಕೋಟ ಲಕ್ಷ್ಮಿನಾರಾಯಣ ಕಾರಂತರೆಂಬ ಸಮಾಜಮುಖಿ ಚಿಂತಕರ ಸಹೋದರ ಡಿ. ವಾಸುದೇವ ಕಾರಂತ ('ದೇವರು ಯಾಕೆ?' ಕೃತಿಯ ಲೇಖಕ) ರಿಂದ ಹಿಡಿದು ಈ ನಾರಾಯಣಾಚಾರ್ಯನವರೆಗೆ ಇಂತಹ 'ಬ್ರಾಹ್ಮಣ್ಯದ ನಶೆ'ಯಲ್ಲಿರುವವರು ಯಾವತ್ತಿಗೂ ಇದ್ದೇ ಇರುತ್ತಾರೆ. ಇವರಿಗೆಲ್ಲ ಭಾರತದ ಪ್ರಥಮ ಪ್ರಧಾನಿ ಸ್ವಯಂ ಕಾಶ್ಮೀರೀ ಪಂಡಿತ್ ಕುಟುಂಬಕ್ಕೆ ಸೇರಿದ್ದರೂ ಸೆಕ್ಯುಲರ್ ತತ್ವಕ್ಕೆ ಹೆಚ್ಚು ಮಹತ್ವ ನೀಡಿದ ನೆಹರೂರವರನ್ನು ಕಂಡರೆ ಇನ್ನಿಲ್ಲದ ಆಕ್ರೋಶ. (ಸೆಕ್ಯುಲರ್ ಹೆಸರಲ್ಲಿ ಸನಾತನ ಪರಂಪರೆಗೆ ಕೊಡಲಿ ಪೆಟ್ಟು ಕೊಟ್ಟು ಸಾವಿರಾರು ವರ್ಷಗಳ ಕಾಲ ಬೆವರು ಸುರಿಸದೇ ಬಿಟ್ಟಿಯಾಗಿ ಸಿಗುತ್ತಿದ್ದ ಸುಖಸಮ್ಮಾನಗಳಿಗೆಲ್ಲ ಅಡ್ಡಗಾಲಿಟ್ಟವನೆಂಬ ಕೋಪ ಇವರಿಗೆ.)

ವರ್ಷಗಳ ಹಿಂದೆ ಕರಾವಳಿಯಲ್ಲಿ (ಮಂಗಳೂರು ಕುಂದಾಪುರ) ನಡೆದ ವಿಪ್ರ ಸಮ್ಮೇಳನದಲ್ಲಿ ಕೆ.ಪಿ.ಪುತ್ತೂರಾಯ ಎನ್ನುವ ನಾರಾಯಣಾಚಾರ್ಯನಂತದ್ದೇ ಮನೋರೋಗವುಳ್ಳ ಆಸಾಮಿಯೊಬ್ಬ ಬ್ರಾಹ್ಮಣೇತರರನ್ನು ಅತ್ಯಂತ ಕೆಟ್ಟದ್ದಾಗಿ ನೋಡುವ ಇಂತಾದ್ದೇ ಕೀಳು ಅಭಿಪ್ರಾಯಗಳನ್ನು ಬಹಿರಂಗ(ಲೋಕಲ್ ಟಿವಿಯಲ್ಲಿ ಲೈವ್ ಇತ್ತು)ವಾಗಿ ತನ್ನ ಭಾಷಣದಲ್ಲಿ ಹೇಳಿದ್ದರೂ ಯಾರೂ ಈ ಬಗ್ಗೆ ತುಟಿಪಿಟಿಕ್ ಎಂದಿರಲಿಲ್ಲ. ಇಂತಹ ಕಾರಣಕ್ಕೇ ಇವರು 'ವಾಲ್ಮೀಕಿ ಯಾರು?' ಎಂದು ಇವತ್ತು ಪ್ರಶ್ನಿಸಿದರೆ ನಾಳೆ ಮತ್ತೊಬ್ಬ 'ಅಂಬೇಡ್ಕರ್ ಯಾರು?' ಎಂಬ ಬೃಹತ್ ಗ್ರಂಥ ಬರೆದರೂ ಆಶ್ಚರ್ಯವೇನೂ ಇರದು.

- ಶಶಿ ಪುತ್ತೂರು, ದಕ



ಮಹಿಳೆಯರಿಗೆ ಪ್ರಾತಿನಿಧ್ಯ ಎಲ್ಲಿ?

ಸ್ತ್ರೀಯರಿಗೆ ಶೇ. 50 ಮೀಸಲಾತಿ ಸಿಗಬೇಕೆನ್ನುವ ಕೂಗು ಇಂದು ಜಗತ್ತಿನಾದ್ಯಂತ ಕೇಳಿಬರುತ್ತಿದೆ. ಎಲ್ಲ ರಾಜಕೀಯ ಧುರೀಣರು ಸಹ ವೇದಿಕೆ-ಭಾಷಣಗಳಲ್ಲಿ ಮಹಿಳೆಗೆ ಹೆಚ್ಚಿನ ಪ್ರಾತಿನಿಧ್ಯ ಸಿಗಬೇಕೆಂದು ಹೇಳುವುದು ಸಾಮಾನ್ಯವಾಗಿದೆ. ಆದರೆ ಕಾನೂನು ರೂಪಿಸುಬಲ್ಲ ಸಂಸತ್‌ಗೆ ಪ್ರತಿನಿಧಿಗಳನ್ನು ಕಳುಹಿಸುವ ಮಹತ್ವದ ಘಟ್ಟವಾದ ಈ ಚುನಾವಣೆಯಲ್ಲಿ ಮಹಿಳೆಯರಿಗೆ ಭಾರಿ ಅನ್ಯಾಯವಾಗಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್-7%, ಬಿಜೆಪಿ-3%, ಆಪ್ ಮತ್ತು ಜೆಡಿಎಸ್-10% ಮತ್ತು ಬಿಎಸ್‌ಪಿ-4% ಮಾತ್ರ ಮಹಿಳೆಯರಿಗೆ ಟಿಕೆಟ್ ನೀಡಿದೆ. ಎಲ್ಲ ರಾಷ್ಟ್ರೀಯ ಪಕ್ಷಗಳಲ್ಲೂ ಮಹಿಳೆಯೇ ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದರೂ ಸಹ ಮಹಿಳೆಯರಿಗೆ ಕನಿಷ್ಠ ಪಕ್ಷ 33% ಮೀಸಲಾತಿ ನೀಡುವ ಹಾಗೂ ಶಾಸನ ರಚಿಸುವ ಆಸಕ್ತಿ ಮಾತ್ರ ಯಾರಿಗೂ ಇಲ್ಲದಾಗಿದೆ. ಚುನಾವಣೆಯಲ್ಲಿ ಕನಿಷ್ಠ ಪಕ್ಷ ಮೀಸಲಾತಿ ನೀಡಲಾಗದ ಈ ಪಕ್ಷಗಳು ಹೇಗೆ ಮಹಿಳೆಯರ ನೋವು-ನಲಿವು, ಸಮಸ್ಯೆ-ಏಳಿಗೆಗೆ ಸ್ಪಂದಿಸುತ್ತದೆ ಎನ್ನುವುದನ್ನು ಸ್ವಲ್ಪ ಯೋಚಿಸಬೇಕಾದ ಸಂಗತಿಯಾಗಿದೆ.


- ಕೆ.ಟಿ.ಆರ್, ಬೆಂಗಳೂರು

ಮಂಗಳೂರಿನಲ್ಲಿ ಗುಜರಾತಿಗಳ ಷಡ್ಯಂತ್ರ

ಮಂಗಳೂರಿನಲ್ಲಿ ಮನೆಮನೆಗೆ ಪೇಪರ್ ಹಾಕುತ್ತಿದ್ದ ಹುಡುಗರು, ಈಗ 15 ದಿನಗಳಿಂದ ಪೇಪರ್ ಹಾಕುವುದು ಬಂದ್ ಮಾಡಿ ಬಿಜೆಪಿಯ ಕಾರ್ಯಕರ್ತರಾಗಿ ದಿನವೊಂದಕ್ಕೆ ಒಂದೂವರೆ ಸಾವಿರ ದುಡಿಯುತ್ತಿದ್ದಾರೆ. ಉಡುಪಿಯಲ್ಲಿ ಬಿಜೆಪಿ ಕಾರ್ಯಕರ್ತರಿಗೆ ದಿನಭತ್ಯೆ ರೂ. 2,000. ಕಾರಣ ಉಡುಪಿಯಲ್ಲಿ ಶೋಭಕ್ಕ ಯಡ್ಡಿ ಸರಕಾರದಲ್ಲಿ ಮಂತ್ರಿಣಿಯಾಗಿದ್ದಾಗ ಗಳಿಸಿದ್ದ ಕೋಟಿಗಟ್ಟಲೆ ಹಣ ಈಗ ಉಪಯೋಗಕ್ಕೆ ಬರುತ್ತಿದೆ. ಮಂಗಳೂರಿನಲ್ಲಿ ಎಲ್ಲಾ ಗುಜರಾತಿ ಅಡಿಕೆ ವ್ಯಾಪಾರಿಗಳು ಕೂಡಿ ತಮ್ಮವನೇ ಆದ ಮೋದಿ ಪ್ರಧಾನ ಮಂತ್ರಿ ಆಗಬೇಕೆಂಬ ಅಭಿಮಾನದಿಂದ ತಮ್ಮ ಕಪ್ಪು ಹಣವನ್ನು ನೀರಿನಂತೆ ಹರಿಸುತ್ತಿದ್ದಾರೆ. ಈ ಸ್ಥಳೀಯ ಗುಜರಾತಿ ವ್ಯಾಪಾರಿಗಳು ಖರ್ಚು ಮಾಡುವ ಹಣ ಚುನಾವಣಾ ಕಮಿಷನ್ನಿನವರಿಗೆ ಲೆಕ್ಕಕ್ಕೆ ಸಿಗುವುದಿಲ್ಲವಂತೆ. ಅದರಿಂದಾಗಿ ಎಲ್ಲ ನಿರುದ್ಯೋಗಿ ಯುವಕರು ಮಾತ್ರವಲ್ಲ, ಮನೆಗೆ ಪೇಪರ್ ಮತ್ತೂ ಹಾಲು ಹಾಕುವ ಹುಡುಗರೆಲ್ಲಾ ಈಗ ಬಿಜೆಪಿ ಕಾರ್ಯಕರ್ತರಾಗಿ ಭರ್ಜರಿ ಆದಾಯ ಗಳಿಸುತ್ತಿದ್ದಾರೆ. ನಿಷ್ಪಕ್ಷ ಪತ್ರಿಕೆಯಾದ ಪ್ರಜಾವಾಣಿ ಅಥವಾ ಹೆಚ್ಚು ಪುಟಗಳೊಂದಿಗೆ ಅತಿಹೆಚ್ಚು ವೈವಿಧ್ಯಮಯ ಲೇಖನಗಳಿರುವ ವಿಜಯ ಕರ್ನಾಟಕ ಪತ್ರಿಕೆಗಳನ್ನು ಮನೆಗೆ ಹಾಕುವ ಹುಡುಗರೇ ಸಿಗುತ್ತಿಲ್ಲ. ವಿಜಯ ಕರ್ನಾಟಕ ಓದುತ್ತಿದ್ದವರಿಗೆ ಬೇರೆಲ್ಲಾ ಕನ್ನಡ ದಿನಪತ್ರಿಕೆಗಳು ಸಪ್ಪೆ ಎನಿಸುವುದು ನಿಜ. ಕೇವಲ ಸ್ಥಳೀಯ ಶ್ರದ್ಧಾಂಜಲಿ ಮತ್ತು ಉತ್ತರಕ್ರಿಯೆ ಆಮಂತ್ರಣಗಳಿಂದ ತುಂಬಿರುವ ಆರ್‌ಎಸ್‌ಎಸ್ ಮುಖವಾಣಿಯಾದ ಸಪ್ಪೆ ಉದಯವಾಣಿ ಮಾತ್ರ ಮನೆಮನೆಗೆ ಬರುತ್ತಿದೆ. ಚುನಾವಣೆ ಕಾಲದಲ್ಲಿ ಇತರ ನಿಷ್ಪಕ್ಷ ಪತ್ರಿಕೆಗಳ ಪ್ರಸಾರದ ಕತ್ತು ಹಿಸುಕುವ ಬೇರೊಂದು ಷಡ್ಯಂತ್ರದ ವಾಸನೆ ಸಹ ಇಲ್ಲಿ ಹೊಡೆಯುತ್ತಿದೆ. ಏನೇ ಆಗಲಿ ಕರ್ನಾಟಕದಲ್ಲಿರುವ ಗುಜರಾತಿ ವ್ಯಾಪಾರಿಗಳ ಗುಜರಾತ್ ರಾಜ್ಯದ ಬಗೆಗಿನ ಅಭಿಮಾನ ಮತ್ತು ತಮ್ಮ ಭಾಷಿಕನೊಬ್ಬ ಪ್ರಧಾನಿಯಾಗಬೇಕೆಂಬ ಹಠ ಮೆಚ್ಚಲೇಬೇಕು. ಕನ್ನಡಿಗರು ಎಂದಾದರೂ ಇಂತಹ ಅಭಿಮಾನ ತೋರಿಸಿದ್ದಾರೆಯೇ?

- ಹರೀಶ್ ಎಂ.ಆರ್, ಮಂಗಳೂರು

ತುಟಿಪಿಟಿಕ್ ಅನ್ನದ ಮೋದಿ



ಹದಿಮೂರು ವರ್ಷಗಳ ಕಾಲ ನರೇಂದ್ರ ಮೋದಿ ಗುಜರಾತಿನ ಮುಖ್ಯಮಂತ್ರಿ ಆಗಿದ್ದರೂ ಆತ ಒಮ್ಮೆಯೂ ವಿಧಾನ ಸಭೆಯಲ್ಲಿ ತುಟಿಪಿಟಿಕ್ ಎನ್ನದಿರುವುದರ ಬಗ್ಗೆ ಗೌರಿ ತಮ್ಮ ಅಂಕಣದಲ್ಲಿ ಚೆನ್ನಾಗಿ ಬರೆದಿದ್ದಾರೆ. ಇಂತಹ ವ್ಯಕ್ತಿ ಈ ದೇಶದ ಪ್ರಧಾನಮಂತ್ರಿ ಹುದ್ದೆಗೇರುವುದು ನಿಜಕ್ಕೂ ಆತಂಕಕಾರಿ ಸಂಗತಿಯೇ.


ಶಿವಮೊಗ್ಗ ಕುರಿತ ವರದಿಯಲ್ಲಿ ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿಯನ್ನು ಮುಂದಿನ ಸಂಸದ ಎಂಬಂತೆ ಬಿಂಬಿಸಿ ವರದಿ ಮಾಡಿದ್ದೀರಿ. ಆದರೆ ಶಿವಮೊಗ್ಗದಲ್ಲಿ ನಡೆಯುತ್ತಿರುವ ಫೈಟ್‌ನ ಬಗ್ಗೆ ರಾಜ್ಯದ ಎಲ್ಲಾ ಮಾಧ್ಯಮಗಳು ಈಗಾಗಲೇ ಸವಿವರ ವರದಿಯನ್ನು ಪ್ರಕಟಿಸಿವೆ. ಅದ್ಯಾವ ಲೆಕ್ಕಾಚಾರದಲ್ಲಿ ಭಂಡಾರಿಯನ್ನು ರಾ.ಸೋಮನಾಥ್ ಗೆಲ್ಲಿಸಲಿದ್ದಾರೋ ಗೊತ್ತಿಲ್ಲ. ಇನ್ನು ಮಂಡ್ಯದಲ್ಲಿ ಶಿವಲಿಂಗಯ್ಯನ ಕುರಿತ ವರದಿ ಚೆನ್ನಾಗಿಯೇ ಬಂದಿದೆ.


- ಓದುಗ, ಈ ಮೇಲ್ ಮೂಲಕ

ವಿ.ಸೂ.: ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಇ-ಮೇಲ್ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು ಅಥವಾ ಬರಹ ತಂತ್ರಾಂಶದಲ್ಲಿ 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕವಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 30-04-2014 RNI No. KARKAN2...










ಮುಚ್ಚದ ಕಣ್ಣು ಮೂರ್ತಿ




ವಿ.ಕೆ.ಮೂರ್ತಿ... ಮೈಸೂರಿನಲ್ಲಿ ಹುಟ್ಟಿ ಮುಂಬಯಿಯಲ್ಲಿ ಬದುಕಿ ತಮ್ಮ ತೊಂಭತ್ತೊಂದನೇ ವಯಸ್ಸಿನಲ್ಲಿ ಮೊನ್ನೆ ಬೆಂಗಳೂರಿನಲ್ಲಿ ತೀರಿಕೊಂಡ ವಿ.ಕೆ.ಮೂರ್ತಿ ಕುರಿತು ಬರೆಯಲೇಬೇಕು. ಭಾರತೀಯ ಸಿನಿಮಾ ಮಾಧ್ಯಮ ಛಾಯಾಗ್ರಹಣ ತಂತ್ರ ಕುರಿತಂತೆ ತನ್ನ ಎಷ್ಟೋ ಪ್ರಥಮಗಳನ್ನು ಕಂಡುಕೊಂಡಿದ್ದು ಈ ಛಾಯಾಗ್ರಾಹಕನ ಮುಖೇನ. ಅವರು ಕ್ಯಾಮೆರಾ ಹಿಡಿಯುವವರೆಗೆ ಸಿನಿಮಾದ ಹಲವಾರು ರಹಸ್ಯ ಪ್ರೇಕ್ಷಕನಿಗೆ ತಿಳಿದಿರಲಿಲ್ಲ. ದೇಶದಲ್ಲೇ ಮೊದಲಬಾರಿಗೆ: ಕೋಲುಬೆಳಕು (ಪೋರ್ಸ್ ಲೈಟ್), ಹೆಲಿಕಾಪ್ಟರ್ ಶಾಟ್, ಬೌನ್ಸಿಂಗ್ ಲೈಟ್, ಮಿರರ್ ಮೂಲಕ ಸೂರ್ಯನ ಕಿರಣಗಳನ್ನು ರಿಫ್ಲೆಕ್ಟ್ ಮಾಡಿ ಕಲಾವಿದರ ಮೇಲೆ ಬೀಳುವಂತೆ ಮಾಡುವ ತಂತ್ರಜ್ಞಾನವನ್ನು ಅಳವಡಿಸಿದ್ದು; ಇವೆಲ್ಲವೂ ಈಗ ಚರಿತ್ರಾರ್ಹ ವಿಷಯಗಳು.

ಅದೇರೀತಿ ವಿ.ಕೆ. ಮೂರ್ತಿ ಅವರ ಬದುಕೂ ಕೂಡ. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸ್ವಾತಂತ್ರ ಚಳವಳಿಯಲ್ಲೂ ಧುಮುಕಿ ಜೈಲುವಾಸದ ಅನುಭವವನ್ನೂ ಪಡೆದುಕೊಂಡಿದ್ದು ಇವರಿಗಿದ್ದ ರಾಷ್ಟ್ರಪ್ರೇಮದ ಕುರಿತು ಹೇಳುತ್ತದೆ. ನಂತರದ ದಿನಗಳಲ್ಲಿ ದೃಶ್ಯಮಾಧ್ಯಮದತ್ತ ಅಪಾರ ಆಸಕ್ತಿ ಮೂಡಿ 1946ರಲ್ಲಿ ಸಿನಿಮಾಟೋಗ್ರಫಿಯಲ್ಲಿ ಡಿಪ್ಲೊಮಾ ಮಾಡಿ ಅವಕಾಶಗಳ ಬೆನ್ನು ಹತ್ತಿ ಮುಂಬೈಯತ್ತ ಪ್ರಯಾಣ ಬೆಳೆಸಿದ್ದು ಹೊಸದೊಂದು ಇತಿಹಾಸಕ್ಕೆ ನಾಂದಿಯಾಯಿತು.

ವಿ.ಕೆ.ಮೂರ್ತಿಯವರು ಮೊದಲಿಗೆ ಸಹಾಯಕ ಛಾಯಾಗ್ರಾಹಕರಾಗಿ ಕೆಲಸ ಮಾಡಿದ್ದು ಗುರುದತ್ ನಿರ್ದೇಶನ ಮಾಡಿದ 'ಬಾಜಿ' ಚಿತ್ರದ ಮೂಲಕ. ಮೂರ್ತಿಯವರ ನೈಪುಣ್ಯತೆ, ವೃತ್ತಿಪರತೆ ಮೆಚ್ಚಿಕೊಂಡ ಗುರುದತ್ ತಮ್ಮ ಮುಂದಿನ ಸಿನಿಮಾ 'ಜಾಲ' ಚಿತ್ರಕ್ಕೆ ಮೂರ್ತಿಯವರಿಗೆ ಚೀಫ್ ಸಿನಿಮಾಟೋಗ್ರಾಫರ್ ಆಗಿ ಬಡ್ತಿ ನೀಡಿದರು. ಅಲ್ಲಿಂದಾಚೆಗೆ ಸುಮಾರು ಒಂದು ದಶಕಕ್ಕೂ ಹೆಚ್ಚು ಕಾಲ ಗುರುದತ್ ಅವರ ತಂಡದ ಪ್ರಮುಖ ತಂತ್ರಜ್ಞರ ಪೈಕಿ ವಿ.ಕೆ.ಮೂರ್ತಿ ಒಬ್ಬರಾದರು. ಅವರಿಗೆ ಕಂಡರಿಯದ ದೃಶ್ಯವೈಭವ, ಕ್ಯಾಮೆರಾ ಸಂಬಂಧಿ ಸೂಕ್ಷ್ಮ ಸಂಗತಿಗಳು ಅಲ್ಲಿಂದಾಚೆಗೆ ಬಾಲಿವುಡ್ ಪರದೆಯ ಮೇಲೆ ಮೂಡತೊಡಗಿದವು. ವಿನೂತನ ಲೈಟಿಂಗ್, ವಿಶಿಷ್ಟ ಆಂಗಲ್, ಹೊಸ ಬಗೆಯ ಪ್ರಯೋಗಗಳು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡತೊಡಗಿದವು. ಭಾರತೀಯ ಸಿನಿಮಾ ಇತಿಹಾಸದಲ್ಲಿ ಮೊದಲಬಾರಿಗೆ ಛಾಯಾಗ್ರಾಹಕನೊಬ್ಬನ ವಿನೂತನ, ವಿಶಿಷ್ಟ ಕಣ್ಣೊಂದು ಸಿನಿಮಾದಂಥ ಮಾಧ್ಯಮದ ಮೂಲಕ ಬೆರಗು ಮೂಡಿಸತೊಡಗಿತು. ಸಿನಿಮಾ ಆಗಷ್ಟೇ ಕಪ್ಪುಬಿಳುಪು ಪರಿಧಿಯಾಚೆ ರಂಗುಪಡೆಯುತ್ತಿದ್ದು, ಪ್ರೇಕ್ಷಕನ ಕಣ್ಮನಗಳಲ್ಲಿ ಅಚ್ಚರಿ, ಆನಂದ ಒಟ್ಟೊಟ್ಟಿಗೇ ಮೇಳೈಸುತ್ತಿದ್ದ ಪರ್ವಕಾಲವದು. ಅದು, ವಿ.ಕೆ. ಮೂರ್ತಿಯವರ ವಿಶಿಷ್ಟ ಪ್ರತಿಭೆ ಮಾಧ್ಯಮವೊಂದರ ದಿಕ್ಕು ಬದಲಿಸಿದ ಕಾಲವೂ ಹೌದು.







ಆಮೇಲೆ 1959ರಲ್ಲಿ ತೆರೆಕಂಡ ಅದೇ ಗುರುದತ್ ನಿರ್ದೇಶನದ 'ಕಾಗಜ್ ಕೆ ಫೂಲ್' ಬಾಲಿವುಡ್ ಇತಿಹಾಸದಲ್ಲೇ ಹೊಸ ಮೈಲಿಗಲ್ಲು ನೆಟ್ಟಿತು. ಗುರುದತ್ ವೃತ್ತಿಬದುಕಿನಲ್ಲೇ ಅತಿದೊಡ್ಡ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಎಲ್ಲಕಿಂತ ಮಿಗಿಲಾಗಿ, ಆ ಚಿತ್ರಕ್ಕಿದ್ದ ವಿ.ಕೆ.ಮೂರ್ತಿಯವರ ಕ್ಯಾಮೆರಾ ವರ್ಕ್ ಅದ್ಭುತವೆನಿಸಿತು. ವಿಮರ್ಶಕರಿಂದ, ಪ್ರೇಕ್ಷಕರಿಂದ ಪ್ರಶಂಸೆಯ ಮಾತುಗಳು ಎಗ್ಗಿಲ್ಲದೇ ಹರಿದು ಬಂದವು. ಆ ಚಿತ್ರದ ಮೂಲ ವಿ.ಕೆ. ಮೂರ್ತಿ ಒಮ್ಮೆಲೇ ಅಚ್ಚರಿಯಾಗಿ ಪರಿಣಮಿಸಿದರು. ತಮ್ಮ ಅನುಭವ ಹಾಗೂ ಪ್ರಯೋಗಗಳ ಮೂಲಕ ಎಲ್ಲರೂ ಬೆರಗುಗಣ್ಣಿನಿಂದ ನೋಡುವಂತೆ ಜನಪ್ರಿಯರಾದರು. ಅವರು ಕಟ್ಟಿಕೊಟ್ಟ ದೃಶ್ಯ ರೂಪಕಗಳು, ದೃಶ್ಯ ಪ್ರತಿಮೆಗಳು ಮೂರ್ತಿಯವರನ್ನು ಜನರ ಕಣ್ಮಣಿಯನ್ನಾಗಿಸಿದವು. ಪ್ರೀತಿಸುವವರ ವಲಯ ವಿಸ್ತರಿಸಿದವು. ಈ ಎಲ್ಲ ವಿದ್ಯಮಾನಗಳಿಗೆ ಪುಷ್ಟಿ ನೀಡುವಂತೆ ಆ ಚಿತ್ರದ ವರ್ಕ್‌ಗಾಗಿ ವಿ.ಕೆ.ಮೂರ್ತಿ ಆ ವರ್ಷದ ಫಿಲಂಫೇರ್ ಅವಾರ್ಡ್ ಪಡೆದುಕೊಂಡರು.

ಮತ್ತೆ ಮೂರು ವರ್ಷಗಳ ನಂತರ 'ಸಾಹಿಬ್ ಬಿಬಿ ಔರ್ ಗುಲಾಂ' ಎನ್ನುವ ಮತ್ತೊಂದು ಚಿತ್ರದ ಅದ್ಭುತ ಕ್ಯಾಮೆರಾ ವರ್ಕ್‌ಗಾಗಿಯೂ ಮತ್ತೊಮ್ಮೆ ಫಿಲಂ ಫೇರ್ ಅವಾರ್ಡ್ ಪಡೆದುಕೊಂಡದ್ದು ಈಗ ಇತಿಹಾಸ. ಗುರುದತ್ ಜೀವನದ ಕಟ್ಟಕಡೆಯವರೆಗೂ ಅಂದರೆ 'ಪ್ಯಾಸಾ', 'ಆರ್ ಪಾರ್' ಚಿತ್ರಗಳವರೆಗೂ ಮೂರ್ತಿ ಅತ್ಯದ್ಭುತ ಕ್ಯಾಮೆರಾವರ್ಕ್ ನೀಡಿದರು. ಆ ಮೂಲಕ ಭಾರತೀಯ ಸಿನಿಮಾವನ್ನು ಶ್ರೀಮಂತಗೊಳಿಸಿದರು. ಯಾವಾಗ ಗುರುದತ್ ತೀರಿಕೊಂಡರೋ ಗುರುದತ್-ಮೂರ್ತಿ ಎಂಬ ಅತ್ಯದ್ಭುತ ಯಶಸ್ವೀ ಜೋಡಿಯ ಯುಗ ಅಂತ್ಯವಾಯಿತು. ಅದೆಷ್ಟೋ ನನಸಾಗಬೇಕಿದ್ದ ಕನಸುಗಳು ಸ್ತಬ್ಧವಾದವು. ಕಟ್ಟಿಕೊಳ್ಳಬೇಕಿದ್ದ ಅದೆಷ್ಟೋ ಅಪೂರ್ವ ದೃಶ್ಯಗಳು ಹಾಗೇ ಉಳಿದುಹೋದವು.

ಗುರುದತ್ ತೀರಿಕೊಂಡ ನಂತರ ಒಂದು ಶೂನ್ಯವನ್ನು ಅನುಭವಿಸಿದ ವಿ.ಕೆ.ಮೂರ್ತಿ ತಮ್ಮ ಎರಡನೇ ಇನ್ನಿಂಗ್ಸ್ ಎನ್ನುವಂತೆ ಕಮಲ್ ಅಮರೋಹಿ ಜೊತೆ ಕೆಲಸ ಮಾಡುವ ಮೂಲಕ ಮತ್ತೊಮ್ಮೆ ತಮ್ಮ ಅದ್ಭುತ ಪ್ರತಿಭೆ ಮೆರೆದರು. ಈ ಜೋಡಿ ಮಾಸ್ಟರ್ ಪೀಸ್‌ಗಳು ಎನ್ನಬಹುದಾದ 'ಪಕೀರು' ಹಾಗೂ 'ರಜಿಯಾ ಸುಲ್ತಾನ್' ಎಂಬೆರಡು ಚಿತ್ರರತ್ನಗಳನ್ನು ಜನತೆಗೆ ನೀಡಿತು. ಗುರುದತ್ ನಂತರ ಅನೇಕ ನಿರ್ದೇಶಕರ ಜೊತೆ ಕೆಲಸ ಮಾಡಿದರೂ ಮೂರ್ತಿಯವರಿಂದ ಅಷ್ಟು ಪರಿಣಾಮಕಾರಿಯಾದ ಫಲಿತಾಂಶ ದೊರಕಲಿಲ್ಲ ಎಂಬ ಮಾತುಗಳೂ ಅಲ್ಲಲ್ಲಿ ಕೇಳಿಬರತೊಡಗಿದ್ದವು. ಆ ಮಾತುಗಳನ್ನು ಸುಳ್ಳುಮಾಡುವ ಸಲುವಾಗಿಯೇ 'ಪಕೀರು' ಹಾಗೂ 'ರಜಿಯಾ ಸುಲ್ತಾನ್' ತರಹದ ಚಿತ್ರಗಳು ಹುಟ್ಟಿಕೊಳ್ಳಬೇಕಾಯಿತೋ ಏನೋ.

ವಿ.ಕೆ.ಮೂರ್ತಿ ಆನಂತರದ ದಿನಗಳಲ್ಲಿ ಪ್ರಮೋದ್ ಚಕ್ರವರ್ತಿ ಜೊತೆ 'ನಯಾ ಜಮಾನ'. ಹಾಗೂ 'ಜುಗ್ನು' ಚಿತ್ರಗಳಿಗೆ ಕೆಲಸ ಮಾಡಿದರೆ, ಗೋವಿಂದ್ ನಿಹಲಾನಿ ಜೊತೆಗೂಡಿ 'ತಮಸ್' ಎಂಬ ಸಿನಿಮಾ ಮಾಡಿದರು. ಉಳಿದಂತೆ ಶ್ಯಾಮ್ ಬೆನೆಗಲ್ ಜೊತೆ 'ಭಾರತ್ ಏಕ್ ಖೋಜ್' ಎಂಬ ಮೆಗಾಸೀರಿಯಲ್‌ಗಾಗಿ ವರ್ಕ್ ಮಾಡಿದರು.

ಅಪಾರ ಯಶಸ್ಸು, ಜನಪ್ರೀತಿ, ಸಾರ್ಥಕ್ಯ ಭಾವನೆ ತಂದು ಕೊಟ್ಟ ಸಿನಿಮಾ ಮಾಧ್ಯಮ ಮೂರ್ತಿಯವರ ಪಾಲಿಗೆ ಬದುಕೇ ಆಗಿತ್ತು. ಸಿನಿಮಾ ಎನ್ನುವುದು ಫ್ರೇಮಿನಿಂದ ಫ್ರೇಮಿಗೆ ಚಿತ್ರಗಳನ್ನು ಕಟ್ಟಿಕೊಡುವ ಮಾಧ್ಯಮವಷ್ಟೇ ಅಲ್ಲ; ಪ್ರತಿಯೊಂದು ಫ್ರೇಮ್, ಪ್ರತಿಯೊಂದು ಶಾಟ್ ಕೂಡ ಮಹತ್ವದ್ದು ಎಂಬುದು ಮೂರ್ತಿಯವರ ವೃತ್ತಿಪರತೆಗಿದ್ದ ಒಂದು ಉದಾಹರಣೆ.

ಚಿತ್ರದ ಕಥೆ, ನಿರ್ದೇಶಕನ ದೃಶ್ಯಕಲ್ಪನೆ ಹಾಗೂ ಪ್ರೇಕ್ಷಕನ ಮೇಲೆ ಬೀರಲೇಬೇಕಾದ ತೀವ್ರ ಪರಿಣಾಮದ ಕುರಿತೇ ಸದಾ ಅವರ ಗಮನವಿರುತ್ತಿತ್ತು. ಮೂರ್ತಿಯವರ ಮತ್ತೊಂದು ವೈಶಿಷ್ಟ್ಯತೆ ಎಂದರೆ ಎಷ್ಟೋ ಸಲ ಅಸಿಸ್ಟೆಂಟ್‌ಗಳನ್ನೇ ಇಟ್ಟುಕೊಳ್ಳುತ್ತಿರಲಿಲ್ಲ, ತಾವೇ ಸ್ವತಃ ಲೈಟ್‌ಗಳನ್ನು ಎಲ್ಲಿ ಬೇಕೋ ಅಲ್ಲಿ ಫಿಕ್ಸ್ ಮಾಡಿ ನಂತರ ತಾವೇ ಕ್ಯಾಮೆರಾ ವರ್ಕ್ ಮಾಡುತ್ತಿದ್ದರು. ಸೆಟ್ಟಿನ ವಾತಾವರಣ, ಲೈಟುಗಳ ಜೊತೆಯೇ ಮುಳುಗಿಹೋಗುತ್ತಿದ್ದ ಅವರು ಅಲ್ಲೇ ಆನಂದ ಪಡೆಯಲು ಪ್ರಯತ್ನಿಸುತ್ತಿದ್ದರು. ರೆಗ್ಯುಲರ್ ಎನ್ನಿಸದ ಬ್ಲಾಕ್‌ಗಳು, ಲೈಟಿಂಗ್ ಮೂಲಕ ವಿನೂತನ ಇಮೇಜ್‌ಗಳನ್ನು ಕಟ್ಟಿಕೊಡುವತ್ತ ಸದಾ ತುಡಿಯುತ್ತಿದ್ದರು.

ಯಾವುದೋ ಒಂದು ನಿರ್ದಿಷ್ಟ ಲೊಕೇಶನ್‌ನಲ್ಲಿ ಚಿತ್ರೀಕರಣಗೊಳ್ಳುವ ಸಿನಿಮಾ ಅಲ್ಲಿ ಪಾಲ್ಗೊಳ್ಳುವವರಲ್ಲಿ ತನ್ನದೇ ಆದ ಜಗತ್ತನ್ನು ಸೃಷ್ಟಿಸಿಬಿಡುತ್ತದೆ; ಕೃತಕವೆನಿಸಿದರೂ ನೈಜ ಮಿಡಿತಗಳಿಗೆ ಪುಸಲಾಯಿಸುವ ವಾತಾವರಣ, ಕೃತಕತೆಯ ಜೊತೆಗೆ ಸಹಜ ಅಭಿವ್ಯಕ್ತಿಗೆ ಎಡೆಮಾಡಿಕೊಡುತ್ತದೆ. ಕೆಲವೊಮ್ಮೆ ಹೊರಾಂಗಣದ ಚಿತ್ರೀಕರಣದ ವೇಳೆ ಗುಂಪಿನಲ್ಲಿದ್ದೂ ಸ್ವಂತದೊಂದು ಲೋಕವನ್ನು ನಿರ್ಮಾಣ ಮಾಡಿರುತ್ತದೆ. ಹೀಗೆ ಏಕಾಂತತೆ ನಡುವೆಯೂ ತೆರೆದುಕೊಳ್ಳುತ್ತಾ, ಅನೇಕ ಜನರ ನಡುವೆಯೂ ತಮ್ಮದೇ ಲೋಕ ನಿರ್ಮಿಸಿಕೊಳ್ಳುತ್ತ 'ತಮಗಿಂತ ತಮ್ಮ ಕ್ಯಾಮೆರಾ ಮಾತಾಡಬೇಕು' ಎಂದು ನಂಬಿಕೊಂಡಿದ್ದ ಮೂರ್ತಿ ಮಿತಭಾಷಿಯೂ ಆಗಿದ್ದರು. ಹಾಗೇನೆ ಸದಾ ಶಾಟ್‌ಗಳ ಬಗ್ಗೆ, ವಿನೂತನ ಇಮೇಜುಗಳ ಬಗ್ಗೆ ಚಿಂತಿಸುತ್ತಿದ್ದ ಕ್ರಿಯಾಶೀಲ ಸರಳಜೀವಿ ಎನ್ನುವುದರ ಜೊತೆಗೆ, ಆಧುನಿಕ ದೃಶ್ಯಮಾಧ್ಯಮದ ವ್ಯಾಕರಣ ಅರಿತಿದ್ದ ನೇರನುಡಿಯ ಟಿಪಿಕಲ್ ಮೈಸೂರಿಗ.

ವಿ.ಕೆ.ಮೂರ್ತಿ ಬಗ್ಗೆ ಬರೆಯುವಾಗ ನಮ್ಮನ್ನು ಅವರ ಈ ವ್ಯಕ್ತಿತ್ವದ ವಿವಿಧ ಮಜಲುಗಳು, ಕ್ರಿಯೇಟಿವಿಟಿಯ ಆಯಾಮಗಳು ಬೆರಗು ಮೂಡಿಸುತ್ತವೆ. ಸಿನಿಮಾ ಛಾಯಾಗ್ರಾಹಣದ ಕಲೆ, ಅಲ್ಲಿ ದೃಶ್ಯ ಸೆರೆಹಿಡಿಯಲು ತಂತ್ರಜ್ಞಾನದ ಅರಿವು ಅತ್ಯಗತ್ಯ ಎಂದು ನಂಬಿರುತ್ತೇವೆ. ಆದರೆ, ಸುಭಾಷ್ ಘಾಯ್, ಮಣಿರತ್ನಂ ತರಹದ ನಿರ್ದೇಶಕರು, ಖಲೀಲ್ ಗಿಬ್ರಾನ್, ಫ್ರಾನ್ಜ್ ಕಾಫ್ಕ, ಸಾದತ್ ಹಸನ್ ಮಾಂಟೋ ತರಹದ ಬರಹಗಾರರು, ವಿ.ಕೆ.ಮೂರ್ತಿ ತರಹದ ಛಾಯಾಗ್ರಾಹಕ ಇಲ್ಲಿ ವಿಶಿಷ್ಟವಾಗಿ ನಿಲ್ಲುತ್ತಾರೆ. ಹೇಗೆಂದರೆ, ಸಿನಿಮಾವಾಗಲೀ, ಬರವಣಿಗೆಯಾಗಲೀ, ದೃಶ್ಯ ಕಟ್ಟಿಕೊಡುವ ತಪಸ್ಸಾಗಲೀ ಪ್ರತಿಭೆಯನ್ನು ಜಗಜ್ಜಾಹೀರು ಮಾಡುವ ಆಶಯವನ್ನು ಮೆಟ್ಟಿ ನಿಂತಾಗಷ್ಟೇ ಅದೊಂದು ಕಲೆ ಅಥವಾ ಸಹಜಾಭಿವ್ಯಕ್ತಿ ಎನಿಸುತ್ತದೆ; ತನ್ಮೂಲಕ ಇನ್ನೊಬ್ಬರನ್ನು ಮತ್ತೊಂದು ಜಗತ್ತಿನ ಪ್ರವೇಶಕ್ಕೆ ದಾರಿ ಮಾಡಿಕೊಡುವ ಮಾಧ್ಯಮವಾಗುತ್ತದೆ; ಮೂರ್ತಿಯವರ ಸಹಜ, ಸರಳ ಸೃಜನಶೀಲತೆಯೇ ಅವರ ಛಾಯಾಗ್ರಹಣ ಕಲಾವೈಖರಿಯ ಧಾತು. ಈ ಕಲಾವಂತಿಕೆಯಲ್ಲಿ ಅವರ ಆಳದ ತುಡಿತ, ಬದುಕು ತೆರೆದಿಟ್ಟ ವಿಸ್ಮಯ, ಖ್ಯಾತಿಯ ಹಂಗಿಲ್ಲದ ಸಾರ್ಥಕತೆ ಎಲ್ಲವೂ ಒಳಗೊಂಡಿರುತ್ತವೆ. ತಮ್ಮ ಬದುಕಿನುದ್ದಕ್ಕೂ ಸೃಷ್ಟಿಯ ರಹಸ್ಯಗಳನ್ನು, ಮಾನವ ಜಗತ್ತಿನ ಒಳಮಿಡಿತಗಳನ್ನು, ಆಂತರಿಕ ಹಾಗೂ ಬಾಹ್ಯ ಪ್ರಪಂಚದ ಕೌತುಕಗಳನ್ನು ಕಂಡುಕೊಂಡಿದ್ದ ಈ ಹಿರಿಜೀವ ಯಾವತ್ತೂ ದಂತಕತೆಯಾಗಬೇಕು ಎಂದು ಬಯಸಿರಲಿಲ್ಲ. ಖ್ಯಾತಿಯ ಬೆನ್ನಟ್ಟಿ ಹೋಗಲಿಲ್ಲ, ಬದಲಾಗಿ ಸಲ್ಲಬೇಕಿದ್ದ ಗೌರವ, ಪ್ರಶಸ್ತಿ ತಾನಾಗೇ ಇವರತ್ತ ಮುಖ ಮಾಡಿದವು. ಅಪಾರ ಜನಪ್ರೀತಿಯ ಜೊತೆಗೆ, ದಾದಾ ಸಾಹೇಬ್ ಫಾಲ್ಕೆಯಂಥ ಪ್ರತಿಷ್ಠಿತ ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬಂದವು.

ಕೀರ್ತಿ, ಗೌರವ, ಸಾರ್ಥಕತೆಯಂಥ ಎಲ್ಲಾ ಭ್ರಮೆಗಳಿಂದ ದೂರವುಳಿದು, ಒಟ್ಟಾರೆಯಾಗಿ, 'ದೀದರ್', 'ಖುಲೇ ಆಮ್', 'ನಾಸ್ತಿಕ್', 'ಜುಗ್ನು', 'ನಯಾ ಜಮಾನ', 'ಸೂರಜ್', 'ಲವ್ ಇನ್ ಟೋಕಿಯೋ', 'ಜಿದ್ದಿ', 'ಸಾಹಿಬ್ ಬಿಬಿ ಔರ್ ಗುಲಾಂ', 'ಚೌದ್ವಿನ್ ಕ ಚಾಂದ್', 'ಕಾಗಜ್ ಕೆ ಫೂಲ್', '12 'ಓ' ಕ್ಲಾಕ್', 'ಪ್ಯಾಸಾ', 'ಸಿ.ಐ.ಡಿ', 'ಜಾಲ್', 'ಬಾಜಿ', 'ಮಿಸ್ಟರ್ ಅಂಡ್ ಮಿಸೆಸ್ 55' ತರಹದ ಅನೇಕ ಚಿತ್ರಗಳ ಮೂಲಕ ತಮ್ಮ ಛಾಯಾಗ್ರಹಣದ ಸವಿಯನ್ನು ದೇಶದ ಸಿನಿರಸಿಕರಿಗೆ ಉಣಬಡಿಸಿ, ತಮ್ಮ ಪ್ರಬುದ್ಧ ವ್ಯಕ್ತಿತ್ವ, ಮಾದರಿ ಜೀವಿತವನ್ನು ತೊಂಭತ್ತೊಂದು ವರ್ಷ ತುಂಬಿಕೊಟ್ಟು ಮೂರ್ತಿ ಹೊರಟುಬಿಟ್ಟರು.

• ಹೃದಯಶಿವ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com